॥ ಓಂ ॥

ಪ್ರಾರಬ್ಧ-ಪುರುಷಪ್ರಯತ್ನ

Destiny-Personal Effort

ಲೇಖಕ :

ಶ್ರೀ ಮೂರ್ತಿ

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ತ್ಯಾಗರಾಜನಗರ
ಬೆಂಗಳೂರು-೨೮
1988

॥ ಓಂ ॥

ಪ್ರಾರಬ್ಧ-ಪುರುಷಪ್ರಯತ್ನ

Destiny-Personal Effort

ಲೇಖಕ :
ಶ್ರೀ ಮೂರ್ತಿ

ಪ್ರಕಾಶಕರು :
ಅಧ್ಯಾತ್ಮಪ್ರಕಾಶಕಾರ್ಯಾಲಯ
ತ್ಯಾಗರಾಜನಗರ
ಬೆಂಗಳೂರು-೨೮
1988

ಮೊದಲನೆಯ ಮುದ್ರಣ :
೧೦೦೦ ಪ್ರತಿಗಳು.

ಮುದ್ರಣಸ್ಥಾನ :
ಅಧ್ಯಾತ್ಮಪ್ರಕಾಶ ಮುದ್ರಣಾಲಯ,
ಹೊಳೆನರಸೀಪುರ.

ವಿಷಯಾನುಕ್ರಮಣಿಕೆ

—o—

ಓಂ ॥

ಪೀಠಿಕೆ

(ಪ್ರಾರಬ್ಧ – ಪುರುಷಪ್ರಯತ್ನ)

ಉದ್ಯೋಗಿನಂ ಪುರುಷಸಿಂಹಮುಪೈತಿ ಲಕ್ಷ್ಮೀಃ ।
ದೈವೇನ ದೇಯಮಿತಿ ಕಾಪುರುಷಾ ವದನ್ತಿ ॥
ದೈವಂ ನಿಹತ್ಯ ಕುರು ಪೌರುಷಮಾತ್ಮಶಕ್ತ್ಯಾ ।
ಯತ್ನೇ ಕೃತೇ ಯದಿ ನ ಸಿಧ್ಯತಿ ಕೋಽತ್ರ ದೋಷಃ ॥

ವಿಚಾರಪೂರ್ವಕವಾದ ಶ್ರದ್ಧೆಯಿಂದ ನಿರಂತರವಾಗಿ ಉದ್ಯೋಗಶೀಲನಾದ ಸತ್ಪುರುಷನೇ ಮಾನವರಲ್ಲಿ ಶ್ರೇಷ್ಠನಾದ ಪುರುಷಸಿಂಹನು. ಶ್ರದ್ಧಾಯುಕ್ತವಾದ ಪ್ರಯತ್ನಶೀಲತೆಯಿಂದ ಪೌರುಷಗುಣ ಬರುವದರಿಂದ, ಈ ವಿಶೇಷಗುಣವುಳ್ಳ ಮಹಿಳಾಮಣಿಗಳಿಗೂ ಈ ಯೋಗವು ಅನ್ವಯಿಸುತ್ತದೆ. ಇಂಥಾ ಪುರುಷಸಿಂಹನನ್ನೂ ವನಿತಾಸಿಂಹಿಣಿಯರನ್ನೂ ವಿದ್ಯಾಸದ್ಗುಣಸಂಪತ್‌ಸುಖಸೌಭಾಗ್ಯಲಕ್ಷ್ಮಿಯು ತಾನಾಗಿಯೇ ಒಲಿದು ಬಂದು ಕೈಹಿಡಿಯುವಳು.

2. "ನಮಗೆ ಇಷ್ಟವಾದ ಫಲಗಳೆಲ್ಲಾ ನಮ್ಮ ಪ್ರಯತ್ನದಿಂದಲೇ ಲಭಿಸುವದಿಲ್ಲ; ದೇವರ ದಯದಿಂದ ನಮ್ಮ ದೈವಬಲವೂ ಚೆನ್ನಾಗಿರಬೇಕು; ದೈವವು ಅಥವಾ ಅದೃಷ್ಟವು ಅನುಕೂಲವಾಗಿದ್ದರೆ ಮಾತ್ರ ನಮ್ಮ ಪ್ರಯತ್ನವೇ ಇಲ್ಲದೆಯೂ ಅನಿರೀಕ್ಷಿತವಾಗಿ ನಮಗೆ ಆಶ್ಚರ್ಯಕರವಾದ ಒಳ್ಳೆಯ ಫಲವಾಗಬಹುದು; ಒಂದು ರೂಪಾಯಿಯ ಲಾಟರಿ ಟಿಕೆಟ್ ಕೊಂಡಿರುವಂಥ ಒಬ್ಬ ಬಡವನಿಗೆ ಹತ್ತುಲಕ್ಷರೂಪಾಯಿ ಬಹುಮಾನ ಬರುವದನ್ನು ನಾವು ಕಂಡಿಲ್ಲವೆ? ಹೀಗೆಂದು ವಿಚಾರಹೀನರಾದ ಪಾಮರಜನರು ವಾದಿಸಬಹುದು. ಈ ಉದಾಹರಣೆಯಂತೆ ಜಗತ್ತಿನಲ್ಲಿ ಆಗಾಗ ನಡೆಯುತ್ತಿದ್ದರೂ ಸಹ ಇದು ಎಲ್ಲರಿಗೂ ಉಪಯೋಗವಾಗುವ ಉದಾಹರಣೆಯಲ್ಲ. ನಮ್ಮ ಪ್ರಯತ್ನವು ಫಲವೀಯುವದಕ್ಕೆ ದೈವಬಲದ ಸಹಾಯವೂ ಆಗತ್ಯವೆನ್ನುವದನ್ನು ಒಪ್ಪಿಕೊಂಡರೂ ಕೂಡ ಉದ್ಯೋಗಶೀಲತೆಯ ಮಹತ್ತ್ವವನ್ನು ನಾವು ಅಲ್ಲಗಳೆಯುವದು ಸಾಧ್ಯವಲ್ಲ, ನ್ಯಾಯವೂ ಅಲ್ಲ. ಉದ್ಯೋಗವು ಈಗಿನ ನಮ್ಮ ಇಚ್ಛೆಗೂ ಪ್ರಯತ್ನಕ್ಕೂ ಅಧೀನವಾಗಿದೆ; ಆದರೆ ದೈವವು ನಮ್ಮ ಹಿಂದಿನ ಜನ್ಮಕರ್ಮಗಳ ಫಲವಾದುದರಿಂದ, ಅದು ನಮ್ಮ ಕಣ್ಣಿಗೆ ಕಾಣದ ಅದೃಷ್ಟವೂ ಊಹೆಗೂ ನಿಲುಕದ

ಅಚಿಂತ್ಯವೂ ಅನೂಹ್ಯವೂ ಆದುದು. ಅದು ಈಗಿನ ನಮ್ಮ ಇಷ್ಟಕ್ಕೆ ಅನುಕೂಲವಾಗಿದೆಯೋ ಪ್ರತಿಕೂಲವಾಗಿದೆಯೋ ಎಂಬಿದೂ ನಮಗೆ ತಿಳಿಯದು. ಅದು ಏನಿದ್ದರೂ ಹೇಗಿದ್ದರೂ ಮೊದಲೇ ನಿಶ್ಚಿತವಾಗಿರುವದರಿಂದ ಈಗಿನ ನಮ್ಮ ಇಚ್ಛೆಗೂ ಪ್ರಯತ್ನಕ್ಕೂ ಅದು ವಶವಾಗುವದಿಲ್ಲ. ಒಂದು ವೇಳೆ ದೈವಗತಿಯು ಈಗಿನ ನಮ್ಮ ಇಷ್ಟಾರ್ಥಕ್ಕೆ ಅನುಕೂಲವಾಗಿದ್ದರೆ ಅದು ಸಾಧಕವೇ ಆಗುತ್ತದೆ; ಪ್ರತಿಕೂಲವಾಗಿದ್ದರೆ ಬಾಧಕವಾಗುವದರಿಂದ ಪ್ರಸ್ತುತ ಇಷ್ಟಫಲಪ್ರಾಪ್ತಿಗಾಗಿ ಬಹಳ ಎಚ್ಚರಿಕೆಯಿಂದಲೂ ಧೈರ್ಯದಿಂದಲೂ ಹೆಚ್ಚಿನ ಪ್ರಯತ್ನವನ್ನು ಮಾಡಬೇಕಾಗುತ್ತದೆ.

3. ಆದ್ದರಿಂದ ವಿವೇಕಶಾಲಿಯು ದೈವಬಲದ ಹಂಬಲವನ್ನೇ ಬಿಟ್ಟು ನಮ್ಮ ಉದ್ದೇಶಸಾಧನೆಗಾಗಿ ನಮ್ಮ ಕೈಯಲ್ಲಿರುವದು ಉದ್ಯೋಗಶೀಲತೆ ಒಂದೇ ಮಾರ್ಗವೆಂದು ನಿಶ್ಚಯಿಸಿ, ನಮ್ಮ ಆತ್ಮಶಕ್ತಿಯನ್ನು ವ್ಯಾವಹಾರಿಕವಾಗಿಯೂ ಪಾರಮಾರ್ಥಿಕವಾಗಿಯೂ ಅನೇಕ ವಿಧದಿಂದ ಬೆಳೆಸಿಕೊಂಡು, ಶ್ರದ್ಧೆಯಿಂದಲೂ ವಿಚಾರಪೂರ್ವಕವಾಗಿಯೂ ಪ್ರಯತ್ನಮಾಡಬೇಕು.

4. ನಮಗೆ ಸಾಧ್ಯವಾದ ಸಾಹಸಗಳನ್ನೆಲ್ಲಾ ಪ್ರಾಮಾಣಿಕವಾಗಿ ಮಾಡಿದರೂ ಕೂಡ, ಕೆಲವು ಸಮಯ ನಮ್ಮ ಇಷ್ಟಫಲವು ಪ್ರಾಪ್ತವಾಗದೆಯೂ ಇರಬಹುದು, ಅಥವಾ ಪೂರ್ಣವಾಗಿ ಪ್ರಾಪ್ತವಾಗದಿರಬಹುದು. ನಮ್ಮ ಕರ್ತವ್ಯವನ್ನು ನಾವು ಮನಃಪೂರ್ವಕವಾಗಿ ಮಾಡಿರುವದರಿಂದ ಮಾತ್ರ ಸಮಾಧಾನಪಟ್ಟುಕೊಳ್ಳಬಹುದು. ವೈಫಲ್ಯವನ್ನೇ ಮುಖ್ಯವಾಗಿ ಎಣಿಸಿ, ವ್ಯಥೆಪಡಬೇಕಾಗಿಲ್ಲ. ಏಕೆಂದರೆ,

ಗಹನಾ ಕರ್ಮಣೋ ಗತಿಃ । (ಗೀ)

ಹಿಂದಿನ ಅನೇಕ ಶುಭಾಶುಭಕರ್ಮಗಳ ಸಂಕುಲದ ಸಂಮಿಶ್ರಿತ ಫಲಾಫಲಗಳೂ ಬಲಾಬಲಗಳೂ ಅಭೇದ್ಯವಾದ ರಹಸ್ಯವೇ ಸರಿ–ಎಂದು ಗೀತಾಚಾರ್ಯನಾದ ಪರಮಾತ್ಮನೇ ಹೇಳಿದ್ದಾನೆ. ಆದ್ದರಿಂದ ಪರಮಾವಧಿಯ (ವೈಯಕ್ತಿಕ) ಆತ್ಮಶಕ್ತಿಯನ್ನೆಲ್ಲಾ ಉಪಯೋಗಿಸಿ ಪ್ರಯತ್ನಮಾಡಿದರೂ ಉದ್ದಿಷ್ಟಫಲಪ್ರಾಪ್ತಿಗೆ ಹಿಂದಿನ ಯಾವ ಕರ್ಮವು ಎಷ್ಟು, ಹೇಗೆ ಅಡ್ಡಿಯಾಯಿತೆಂದ ತಿಳಿಯಲು ಯಾರಿಗೂ ಸಾಧ್ಯವಲ್ಲ. ವ್ಯವಹಾರದೃಷ್ಟಿಯಿಂದ ಅನಾಸಕ್ತ ಮನಸ್ಸಿನ ವಿವೇಕಯುತವಾದ ಶಾಂತಿಯೇ ಮುಖ್ಯ. ಇದಕ್ಕೆ ಕರ್ತವ್ಯನಿರ್ವಹಣೆಯ ಸಮಾಧಾನ ಒಂದೇ ಸಾಧನವೇ ಹೊರತು ಫಲಪ್ರಾಪ್ತಿ ಅಲ್ಲ; ಮತ್ತು ಫಲವಾಗದ ಮಾತ್ರಕ್ಕೆ ತಪ್ಪೇನಲ್ಲ; ಇದರಿಂದ ವ್ಯಕ್ತಿಗೆ ನೈತಿಕವಾದ ಯಾವ ದೋಷವೂ ಇಲ್ಲ. ಇದಿಷ್ಟು ನಮ್ಮ ನಾಂದೀಶ್ಲೋಕದ ಸಂಕ್ಷಿಪ್ತವಾದ ಅರ್ಥ.

5. ಇನ್ನೂ ಒಂದು ಅರ್ಥವು ಇದರಿಂದ ಸೂಚಿತವಾಗುತ್ತದೆ. ಇದುವರೆಗೆ ವಿಚಾರಮಾಡಿದ ಮೊದಲನೆಯ ಅರ್ಥವು ದೈವಪ್ರಧಾನವಾದುದು ; ಈ ಎರಡನೆಯದು ಪೌರುಷಪ್ರಧಾನವಾದುದು. ಇದೇನೆಂದರೆ, ವೈಯಕ್ತಿಕಶಕ್ತಿಯನ್ನು ಜಾಣತನದಿಂದ ಆತ್ಯಂತಿಕವಾಗಿ ಪ್ರಯೋಗಿಸಿದರೆ ಫಲವಾಗಲೇಬೇಕು ; ಒಂದು ವೇಳೆ ಆಗದಿದ್ದರೆ, ನನ್ನ ತಿಳಿವಳಿಕೆಯಲ್ಲಿಯೂ ಸಾಧನೆಯಲ್ಲಿಯೂ ಏನೋ ಕೊರತೆ ಇರಬೇಕು, ಅಥವಾ ದೋಷವಿರಬೇಕು. ಆದ್ದರಿಂದ ಅತಿಶಯವಾದ ವಿಚಾರಶಕ್ತಿಯಿಂದಲೂ ಪ್ರಜ್ಞಾಶಾಲಿಗಳಾದ ತಜ್ಞರ ಸಹಾಯದಿಂದಲೂ ನನ್ನ ಪ್ರಯೋಗದಲ್ಲಿ ಸಂಶೋಧನೆಯನ್ನು ನಡೆಸಿ, ದೋಷವನ್ನೂ ನ್ಯೂನತೆಯನ್ನೂ ಕಂಡುಹಿಡಿದು ನವೋತ್ಸಾಹದಿಂದ ಪುನಃ ಪ್ರಯತ್ನಮಾಡಿ, ಆ ಅಡ್ಡಿಯನ್ನು ಕಳೆದುಕೊಂಡರೆ ಇಷ್ಟಫಲವು ಆಗಿಯೇ ತೀರುತ್ತದೆ, ಇದು ನಿಶ್ಚಯ. ಈ ಅತಿಸಾಹಸದ ದೃಷ್ಟಿಯಲ್ಲಿ ದೈವದ ಕಲ್ಪನೆಗೆ ಅವಕಾಶವಿಲ್ಲ.

6. ಈ ದೃಷ್ಟಿಯ ವಾದವು ಪುರುಷಪ್ರಯತ್ನಕ್ಕೆ ಪ್ರೋತ್ಸಾಹವನ್ನು ಕೊಟ್ಟರೂ ಸಹ ಇದು ಪಕ್ಷಪಾತದೃಷ್ಟಿ ; ಆದ್ದರಿಂದ ಇದು ಪೂರ್ಣಸತ್ಯವಲ್ಲ. ಏಕೆಂದರೆ, ಪ್ರಕೃತಿ- ಪುರುಷರ ವಿಲಾಸವಾದ ಈ ಸೃಷ್ಟಿಯು ದ್ವಂದ್ವಾತ್ಮಕವಾದುದು. ಈ ದ್ವಂದ್ವಗಳು ಯಾವುವೆಂದರೆ, ಅವಿದ್ಯಾ-ಮಾಯಾ, ವಿದ್ಯಾ-ಅವಿದ್ಯಾ, ಜ್ಞಾನ-ಅಜ್ಞಾನ, ಅರಿವು-ಮರೆವು, ಗುಣ-ದೋಷ, ನೀತಿ-ಅನೀತಿ, ಧರ್ಮ-ಅಧರ್ಮ, ಪುಣ್ಯ-ಪಾಪ, ಒಳ್ಳೆಯದು-ಕೆಟ್ಟದು, ಪ್ರಾರಬ್ಧ-ಪೌರುಷ ಸುಖ-ದುಃಖ, ಶೋಕ-ಮೋಹ, ಬೆಳಕು-ಕತ್ತಲು, ಹಗಲು-ರಾತ್ರಿ, ಗಂಡು-ಹೆಣ್ಣು, ಸೋಲು-ಗೆಲುವು..........ಇತ್ಯಾದಿ ಸಹಸ್ರಸಹಸ್ರವಿಧವಾಗಿವೆ-ಈ ದ್ವಂದ್ವವಿಲಾಸ! ಈ ದ್ವಂದ್ವಗಳಲ್ಲಿ ಒಂದು ಇನ್ನೊಂದಕ್ಕೆ ಪೂರಕವಾಗಿಯೂ ವಿರೋಧವಾಗಿಯೂ ಇದೆ. ಇವುಗಳಲ್ಲಿ ಒಂದು ಇನ್ನೊಂದನ್ನು ಕೆಲವುಮಟ್ಟಿಗೆ ಅಥವಾ ಬಹಳಮಟ್ಟಿಗೆ ನಿಯಮಿಸುತ್ತಿರುವದರಿಂದ ಯಾವದೊಂದಕ್ಕೆ ಪರಮಾಧಿಕಾರ-ಎನ್ನುವದಿಲ್ಲ. ಆದ್ದರಿಂದ ನಮ್ಮ ಜೀವನದ ಇಷ್ಟಾನಿಷ್ಟಗಳಿಗೂ ಲಾಭ-ನಷ್ಟಗಳಿಗೂ ಜಯಾಪಜಯಗಳಿಗೂ ಸುಖದುಃಖಗಳಿಗೂ ದೈವಬಲ ಪೌರುಷ ಶಕ್ತಿಗಳ ಸಂಘರ್ಷದ ಪರಿಣಾಮವೇ ಕಾರಣ.

7. ದೇಶ-ಕಾಲ-ನಿಮಿತ್ತಗಳಿಂದ ಕೂಡಿ, ಕ್ರಿಯಾ-ಕಾರಕ-ಫಲಗಳುಳ್ಳ ಈ ಜಗತ್ತು ಆಧಿಭೌತಿಕ, ಆಧಿದೈವಿಕ, ಆಧ್ಯಾತ್ಮಿಕ- ಎಂದು ಮೂರು ಬಗೆಯಾಗಿದೆ. ಯಾವದೊಂದು ಕಾರ್ಯಕ್ಕೆ ಒಂದು ವಿಶಿಷ್ಟಕಾರಣವಿರಲೇಬೇಕು ; ಒಂದು ಗಿಡದ ಅಥವಾ ಮರದ ಫಲಕ್ಕೆ ಕಾರಣವಾಗಿ ಒಂದು ವಿಶಿಷ್ಟ ಬೀಜವಿರಲೇ ಬೇಕು-ಎನ್ನುವ ಈ ನ್ಯಾಯವು ಮತ್ತು ನಿಯಮವು ಸರ್ವವ್ಯಾಪಕವಾಗಿದೆ. "Action and reaction are equal and opposite"

ಪ್ರತಿಯೊಂದು ಕ್ರಿಯೆಯೂ ತನಗೆ ಸರಿಸಮವೂ ವಿರುದ್ಧವೂ ಆದ ಪ್ರತಿಕ್ರಿಯೆಯನ್ನು ತಪ್ಪದೆ ಹುಟ್ಟಿಸುತ್ತದೆ.ಎಂಬಿದು ವೈಜ್ಞಾನಿಕಸತ್ಯವಾದ ಸಾರ್ವತ್ರಿಕ ನಿಯಮ. ನಾವು ಮನಃಪೂರ್ವಕವಾಗಿಯೂ ಸಂಕಲ್ಪಪೂರ್ವಕವಾಗಿಯೂ ಮಾಡುವ ಒಳ್ಳೆಯ ಅಥವಾ ಕೆಟ್ಟಕರ್ಮವು ಹೊರಗೆ ಅದಕ್ಕೆ ಅನುಗುಣವಾದ ಒಳ್ಳೆಯ ಅಥವಾ ಕೆಟ್ಟಫಲವನ್ನು ಕೊಡುವದಲ್ಲದೆ, ಅದೇ ಬಗೆಯ ಕರ್ಮವನ್ನು ನಾವು ಮತ್ತೆ ಮತ್ತೆ ಮಾಡುವದಕ್ಕೆ ಒಲವೂ ಪ್ರೇರಣಾಶಕ್ತಿಯೂ ಉಳ್ಳ ಸಂಸ್ಕಾರವನ್ನೂ ವಾಸನೆಯನ್ನೂ ಅದು ಒಳಗೆ ಮನಸ್ಸಿನಲ್ಲಿಯೂ ಸಹ ಹುಟ್ಟಿಸುತ್ತದೆ.

8. ದೇಹೇಂದ್ರಿಯಗಳಿಂದ ನಾವು ನಡೆಸುವ ಕರ್ಮವು ದೈಹಿಕಕರ್ಮವೆಂದೂ ಮಾತಿನಿಂದ ನಡೆಸುವದು ವಾಚಕಕರ್ಮವೆಂದೂ ಮನಸ್ಸಿನಿಂದ ನಡೆಸುವ ಆಲೋಚನಾದಿಗಳು ಮಾನಸಕರ್ಮವೆಂದೂ ಕರ್ಮವು ಮೂರು ಬಗೆಯಾಗಿದೆ. ಈ ಮೂರು ಬಗೆಯ ಕರ್ಮಗಳಲ್ಲಿಯೂ ಶುಭ–ಅಶುಭ, ಪುಣ್ಯ–ಪಾಪ, ಒಳ್ಳೆಯದು–ಕೆಟ್ಟದು, ಧರ್ಮ–ಅಧರ್ಮ ಮತ್ತು ಇವುಗಳ ಮಿಶ್ರ–ಎಂಬ ಮೂರು ಬಗೆಯ ಕರ್ಮಗಳಿವೆ. ಇವುಗಳಲ್ಲಿ ಪುನಃ ಸ್ವಾರ್ಥ, ಪರಾರ್ಥ ಮತ್ತು ಪರಮಾರ್ಥ; ಲೌಕಿಕ, ಪಾರಲೌಕಿಕ ಮತ್ತು ಪಾರಮಾರ್ಥಿಕ–ಎಂಬ ಮೂರು ಬಗೆಯ ಕರ್ಮಗಳಿವೆ. ಇವುಗಳ ಫಲಗಳೂ ಇಷ್ಟ, ಅನಿಷ್ಟ ಮತ್ತು ಇಷ್ಟಾನಿಷ್ಟ ಮಿಶ್ರ ; ಪ್ರಿಯ, ಅಪ್ರಿಯ ಮತ್ತು ಪ್ರಿಯಾಪ್ರಿಯಮಿಶ್ರ ; ಸುಖ, ದುಃಖ ಮತ್ತು ಸುಖ–ದುಃಖಮಿಶ್ರ ; (ಮನಃಪ್ರಧಾನವಾಗಿ) ಸಂತೋಷ, ಸಂಕಟ (ಅಥವಾ ಅಸಂತೋಷ) ಮತ್ತು ಇವುಗಳ ಮಿಶ್ರ ; ಮರಣಾನಂತರ ಸ್ವರ್ಗ–ನರಕ ಇತ್ಯಾದಿ–ಹೀಗೆ ಮೂರು ಬಗೆಯಾಗಿವೆ.

9. ದೇಶ–ಕಾಲ–ನಿಮಿತ್ತಗಳ ಈ ಜಗತ್ತಿನಲ್ಲಿ ಯಾವ ಕರ್ಮವಾದರೂ ಫಲವನ್ನು ಕೊಡುವದು ಕಾಲಾಂತರದಲ್ಲಿ ಆದ್ದರಿಂದ, ನಾವು ಕಾಲದ ಮಹತ್ತ್ವವನ್ನು ವಿಚಾರಮಾಡಬೇಕು. ಕಾ ಲ ಶ ಕ್ತಿ ಯು ಅತ್ಯಂತ ಪ್ರಬಲವಾದುದು. ಜೀವನ–ಮರಣಗಳ ನಡುವೆ ಇರುವದು ಕಾಲವೇ. ನಿಮಿಷ, ಕ್ಷಣ, ಗಂಟೆ, ಮುಹೂರ್ತ, ಹಗಲು, ರಾತ್ರಿ, ದಿನ, ವಾರ, ತಿಥಿ, ನಕ್ಷತ್ರ, ಪಕ್ಷ, ಮಾಸ, ಋತು, ಅಯನ, ವರ್ಷ, ಶಕ, ಯುಗ ಇವೇ ಮೊದಲಾದ ವಿಭಾಗಗಳೆಲ್ಲಾ ಕಾಲಗತಿಯಲ್ಲಿರುವ ಗಣನೆಗಳಾಗಿವೆ. ಸೂರ್ಯನಿಗೆ ದಿನಕರನೆಂದು ಹೆಸರು ; ಒಂದು ಸ್ಥಳದಲ್ಲಿ ಈ ದಿನ ಸೂರ್ಯನು ಉದಯನಾಗಿ ಪುನಃ ಅಲ್ಲಿಯೇ ನಾಳೆ ಉದಯವಾಗುವವರೆಗಿನ ಕಾ ಲ ವ ನ್ನು ಇಪ್ಪತ್ತುನಾಲ್ಕು ಗಂಟೆಗಳಾಗಿಯೂ ಅರವತ್ತು ಘಟಿಗಳಾಗಿಯೂ ಒಂದು ಗಂಟೆಯನ್ನು ಅರವತ್ತುನಿಮಿಷಗಳಾಗಿಯೂ ಒಂದು ಘಟಿಯನ್ನು ಅರವತ್ತು ವಿಘಟಿಗಳಾಗಿಯೂ ವಿಭಾಗಿಸಿದ್ದಾರೆ. ಅಂತು

ಒಂದು ಘಟನೆಯ ಅನಂತರ ಇನ್ನೊಂದು ಘಟನೆ ನಡೆದರೆ, ಈ ಎರಡು ಘಟನೆಗಳ ನಡುವಿರುವ ಬಿಡುವೇ ಕಾಲವೆನಿಸುತ್ತದೆ. ಸೂರ್ಯಚಂದ್ರರ ಉದಯಾಸ್ತಗಳೂ ಗ್ರಹನಕ್ಷತ್ರಗಳ ಚಲನೆಯೂ ಗ್ರಹಣಾದಿಗಳೂ ನಿಶ್ಚಿತಕಾಲನಿಯಮದಂತೆ–ಸ್ವಲ್ಪವೂ ವ್ಯತ್ಯಾಸವಾಗದಂತೆ–ನಡೆಯುತ್ತಿವೆ. ಆರೋಗ್ಯವಂತರ ಶರೀರದಲ್ಲಿ ನಡೆಯುತ್ತಿರುವ ಉಸಿರಾಟವೂ ನಾಡೀಸ್ಪಂದನವೂ ಕಠೋರವಾದ ಕಾಲನಿಯಮವನ್ನು ತಪ್ಪದೆ ನಡೆಯುತ್ತಿವೆ. ಆದ್ದರಿಂದ ಪ್ರತಿಯೊಂದು ಕರ್ಮದ ಹಿನ್ನೆಲೆಯಲ್ಲಿರುವ ಕಾಲದ ಮಹಿಮೆಯೂ ಪ್ರಭಾವವೂ ಅತ್ಯಂತ ಮಹತ್ತ್ವದ್ದಾಗಿದೆ. ಗೀತೆಯಲ್ಲಿ ಪರಮಾತ್ಮನು, " **ಕಾಲೋऽಸ್ಮಿ ಲೋಕಕ್ಷಯಕೃತ್** " "ಜಗತ್ತನ್ನು ನಾಶಮಾಡುವ–ಸೃಷ್ಟಿಸ್ಥಿತಿಗೂ ಕಾರಣವಾದ–ಕಾಲವೇ ನಾನಾಗಿದ್ದೇನೆ" –ಎಂದು ಹೇಳಿದ್ದಾನೆ. "**ಕಾಲೋ ಜಗದ್ಭಕ್ಷಕಃ**" ಜಗತ್ತಿನ ರಕ್ಷಕವೂ ಶಿಕ್ಷಕವೂ ಭಕ್ಷಕವೂ ಕಾಲವೇ ! ಆದ್ದರಿಂದ "**ಕಾಲಾಯ ತಸ್ಮೈ ನಮಃ**" ಇಂಥಾ ಮಹಿಮಾಪೂರ್ಣವಾದ ಕಾಲಕ್ಕೆ ಅನಂತ ನಮಸ್ಕಾರಗಳು !

10. ಸಸ್ಯಜಾತಿಯಲ್ಲಿ ಬೇರೆ ಬೇರೆ ಜಾತಿಯ ಬೀಜಗಳು, ಬೇರೆ ಬೇರೆ ಕಾಲಗಳಲ್ಲಿ ಮೊಳಕೆಯಾಗಿ, ಗಿಡವಾಗಿ ಫಲನೀಯುವದು ಪ್ರಸಿದ್ಧವಾಗಿದೆ. ಹೀಗೆಯೇ ಪ್ರಾಣಿಜಾತಿಯ ಕ್ರಿಮಿ, ಕೀಟ, ಪಶು, ಪಕ್ಷಿ, ಮೃಗ, ಜಲಚರ, ಭೂಚರ, ಖಚರ ಮೊದಲಾದವುಗಳ ಜನ್ಮ, ಸ್ಥಿತಿ, ಲಯಾದಿ ಜೀವನಗತಿಯ ಕಾಲಮಾನದಲ್ಲಿಯೂ ಅನೇಕ ಹೆಚ್ಚುಕಡಿಮೆಗಳಿವೆ. ಇದರಂತೆಯೇ ನಾವು ಮನಸ್ಸಿನಿಂದಲೂ ಮಾತಿನಿಂದಲೂ ಮೈಯಿಂದಲೂ ಮಾಡುವ ಶುಭಾಶುಭಕರ್ಮಗಳು ಫಲನೀಡುವದರಲ್ಲಿಯೂ ಅವುಗಳ ಸ್ವಭಾವ ಮತ್ತು ಕರ್ತೃವಿನ ಭಾವತೀವ್ರತೆ, ಕರ್ತೃತ್ವಶಕ್ತಿ–ಇವುಗಳನ್ನು ಆಧರಿಸಿ ಕಾಲಮಾನದ ತಾರತಮ್ಯವಿರುವದೂ ಸ್ವಭಾವವಾಗಿದೆ. ಒಂದು ಕರ್ಮವು ಕೂಡಲೇ ಫಲಕೊಟ್ಟರೆ, ಇನ್ನು ಕೆಲವು ಕರ್ಮಗಳು ಕೆಲವು ಗಂಟೆಗಳಲ್ಲಿಯೂ ಕೆಲವು ದಿನಗಳಲ್ಲಿಯೂ ಕೆಲವು ವರ್ಷಗಳಲ್ಲಿಯೂ ಫಲಕೊಡಬಹುದು ; ಮತ್ತೆ ಕೆಲವು ಕರ್ಮಗಳು ಫಲವಾಗಲು ಜೀವಮಾನವೆಲ್ಲಾ ಕಾಯಬೇಕಾಗಬಹುದು ; ವ್ಯವಹಾರದೃಷ್ಟಿಯಿಂದ, ಹೆಚ್ಚಿನ ಪ್ರಯತ್ನಮಾಡಿ, ಅದರ ಫಲಕ್ಕಾಗಿ ದೀರ್ಘಕಾಲ ಕಾಯುವದೇ ದೊಡ್ಡ ತಪಸ್ಸು ಇದಕ್ಕೆ ಅಸಾಧಾರಣವಾದ ಸಹನಶಕ್ತಿಯೂ ಬೇಕು. ಇನ್ನೆಷ್ಟೋ ವೈದಿಕ ಹಾಗೂ ಲೌಕಿಕಕರ್ಮಗಳು ಲೋಕಾಂತರದಲ್ಲಿಯೂ ಜನ್ಮಾಂತರದಲ್ಲಿಯೂ ಫಲವನ್ನು ಕೊಡಬಹುದು.

11. ಹೀಗೆ ಕಾಲಾಂತರದಲ್ಲಿಯೋ ಲೋಕಾಂತರದಲ್ಲಿಯೋ ಜನ್ಮಾಂತರದಲ್ಲಿಯೋ ಫಲವನ್ನು ಕೊಡುವದಕ್ಕಾಗಿ ಸಂಗ್ರಹವಾದ ಅತಿಶಯ ಶಕ್ತಿಯುತವಾದ ಕರ್ಮಕ್ಕೆ ಸಂಚಿತಕರ್ಮ ಎಂದು ಹೆಸರು. ಈ ಮಹಾಶಕ್ತಿಯ ಮೂಲವೂ

ಕೇಂದ್ರವೂ ನಮ್ಮೊಳಗಿನ ಸೂಕ್ಷ್ಮಶರೀರದ ಗುಪ್ತವೂ ಸುಪ್ತವೂ ಆದ ಸಂಸ್ಕಾರದಲ್ಲಿದೆ. ಈ ಸಂಸ್ಕಾರವು ಕಾಲಮಹಿಮೆಯಿಂದ ಜಾಗ್ರತವಾಗಿ ಪುಷ್ಟಿಗೊಂಡು ಪ್ರಕಟವಾದಾಗ, ಪ್ರಬಲವಾದ ವಾಸನೆ ಎನ್ನಿಸಿಕೊಳ್ಳುತ್ತದೆ. ವಾಸನೆಗಳು ಶುಭವಾಸನೆ ಮತ್ತು ಅಶುಭವಾಸನೆ- ಎಂದು ಎರಡು ಬಗೆ. ದೇಹವಾಸನೆ, ಲೋಕವಾಸನೆ, ಶಾಸ್ತ್ರವಾಸನೆ-ಎಂದು (ಸಂಸಾರಹೇತುವಾದ) ಅನಂತಾನಂತ ವಾಸನೆಗಳು ಹೀಗೆ ಮೂರು ಬಗೆಯಾಗಿವೆ. ಈ ಜನ್ಮದಲ್ಲಿಯೇ ಫಲವನ್ನು ಕೊಟ್ಟು ಬರಿದಾಗದೆ ಉಳಿದಿರುವ ಕರ್ಮಶಕ್ತಿಯು ಸಂಗ್ರಹವಾಗಿ ಸಂಚಿತಕರ್ಮವೆನಿಸುತ್ತದೆ. ಈ ಸಂಚಿತಕರ್ಮವು ಅತ್ಯಂತ ಪ್ರಬಲಶಕ್ತಿಯಾದುದರಿಂದ, ಇದು ಫಲವನ್ನು ಕೊಡದೆ ಬರಿದಾಗುವದಿಲ್ಲ. ಆದರೆ ಫಲಾನುಭವಕ್ಕೆ ಜೀವನಿಗೆ ದೇಹವು ಅಗತ್ಯವಾದುದರಿಂದ, ಅವನ ಅಥವಾ ಅವಳ ಸಂಚಿತಕರ್ಮವು ಅದರ ಪುಣ್ಯ-ಪಾಪಸ್ವಭಾವಕ್ಕೆ ಅನುಗುಣವಾಗಿ ಸಸ್ಯವರ್ಗದಲ್ಲಿಯೋ ಪ್ರಾಣಿವರ್ಗದಲ್ಲಿಯೋ ಮನುಷ್ಯವರ್ಗದಲ್ಲಿಯೋ ಆ ಜೀವನಿಗೆ ಜನ್ಮವನ್ನು ಕೊಡುತ್ತದೆ. ಹಿಂದಿನ ಜನ್ಮಗಳ ಸಂಚಿತಕರ್ಮದ ಫಲಾನುಭವವು ಆ ಹೊಸಜನ್ಮದ ದೇಹದಿಂದಲೇ ಪ್ರಬಲವಾಗಿ ಪ್ರಾರಂಭವಾಗಿರುವದರಿಂದ ಇದೇ ಪ್ರಾರಬ್ಧವೆನಿಸುತ್ತದೆ. ಈ ದೇಹದಿಂದ ಜೀವಮಾನವೆಲ್ಲಾ ಮರಣದವರೆಗೂ ಮಾಡುವ ಎಲ್ಲಾ ಕರ್ಮಗಳೂ ಪ್ರಾರಬ್ಧಕರ್ಮಗಳೆಂದೂ ಅನುಭವಿಸುವ ಎಲ್ಲಾ ಫಲಗಳೂ ಪ್ರಾರಬ್ಧಫಲಗಳೆಂದೂ ಕರೆಸಿಕೊಳ್ಳುತ್ತವೆ. ಈ ದೇಹದ ಆಯುಷ್ಯ, (ಬಾಲಾರಿಷ್ಟ, ಅಲ್ಪಾಯು, ಮಧ್ಯಾಯು, ದೀರ್ಘಾಯು) ಆರೋಗ್ಯ, ವಿದ್ಯಾ, ಬುದ್ಧಿ, ಉದ್ಯೋಗ, ಧನಸಂಪಾದನೆ, ಪತಿ, ಪತ್ನೀ, ಸಂತಾನ, ಸಂಬಂಧ, ಅನುರಾಗ-ದ್ವೇಷ, ಲಾಭ-ನಷ್ಟ, ಸುಖ-ದುಃಖ, ಅಧಿಕಾರ, ಮಾನ-ಅಪಮಾನ ಇವೇ ಮೊದಲಾದ ಜೀವನದ ಮುಖ್ಯವಾದ ಬಹುವಿಧ ಅನುಭವಗಳನ್ನೆಲ್ಲಾ ಹಿಂದಿನ ಸಂಚಿತಕರ್ಮವೇ ಬಹಳ ಮಟ್ಟಿಗೆ ತೀರ್ಮಾನಮಾಡಿರುವದರಿಂದ ಫಲಭೋಗದ ಕಾಲದಲ್ಲಿ ಅದು ಪ್ರಾರಬ್ಧವೆನಿಸುತ್ತದೆ.

12. ಪ್ರಾರಬ್ಧಕರ್ಮದಲ್ಲಿ ಇಚ್ಛಾಪ್ರಾರಬ್ಧ, ಪರೇಚ್ಛಾಪ್ರಾರಬ್ಧ, ಅನಿಚ್ಛಾಪ್ರಾರಬ್ಧ ಎಂದು ಮೂರು ವಿಧಗಳಿವೆ. ತನ್ನ ಸ್ವಂತ ಇಚ್ಛೆಯಿಂದ ಪ್ರಯತ್ನಮಾಡಿ, ತಾನೇ ತಂದುಕೊಳ್ಳುವ ಕರ್ಮ ಮತ್ತು ಫಲಗಳು ಇಚ್ಛಾಪ್ರಾರಬ್ಧ. ತನಗೆ ಇಚ್ಛೆಯಿಲ್ಲದಿದ್ದರೂ ಇನ್ನೊಬ್ಬರ ದಾಕ್ಷಿಣ್ಯಕ್ಕೂ ಒತ್ತಾಯಕ್ಕೂ ವಶನಾಗಿ ಒದಗುವ ಫಲಗಳು ಪರೇಚ್ಛಾಪ್ರಾರಬ್ಧ. ಈ ಎರಡರ ಸಂಬಂಧವೂ ಇಲ್ಲದ್ದು ಅನಿಚ್ಛಾಪ್ರಾರಬ್ಧ.

13. ಒಬ್ಬ ವಿಶಿಷ್ಟ ಜೀವನು ಯಾವ ಕಾಲದಲ್ಲಿ, ಯಾವ ದೇಶದಲ್ಲಿ, ಯಾವ ಜನಾಂಗದಲ್ಲಿ, ಯಾವ ವಶದಲ್ಲಿ,ಯಾವ ಕುಟುಂಬದಲ್ಲಿ, ಯಾವ

ತಾಯಿ-ತಂದೆಗಳಿಗೆ ,ಮಗನಾಗಿ ಅಥವಾ ಮಗಳಾಗಿ, ಯಾವ ಪರಿಸರದಲ್ಲಿ, ಯಾವ ಸನ್ನಿವೇಶ- ಸಹವಾಸಗಳಲ್ಲಿ ಜನ್ಮತಾಳಿ ಬೆಳೆಯಬೇಕು, ಮೊದಲಾದ ವಿವರಗಳೆಲ್ಲಾ ಸ್ಥೂಲವಾಗಿ ಸಂಚಿತಕರ್ಮದಿಂದಲೇ ನಿರ್ಣಯವಾಗಿರುತ್ತವೆ. ಆದರೆ, ಮನುಷ್ಯನಿಗೆ ಇಚ್ಛಾಶಕ್ತಿಯೂ ಇಚ್ಛಾಸ್ವಾತಂತ್ರ್ಯವೂ ಇರುವದರಿಂದ ಪೂರ್ವನಿಶ್ಚಿತವಾದ ಪ್ರಾರಬ್ಧದ ಚೌಕಟ್ಟಿನಲ್ಲಿಯೇ, ವ್ಯಕ್ತಿಯ ಜ್ಞಾನೇಚ್ಛಾಕ್ರಿಯಾಶಕ್ತಿಗಳ ವಿಕಾಸದ ತಾರತಮ್ಯಕ್ಕೆ ಅನುಗುಣವಾಗಿ ಸಾಧನೆಯಲ್ಲಿಯೂ ಫಲಾನುಭವದಲ್ಲಿಯೂ ಬೇಕಾದಷ್ಟು ಹೆಚ್ಚುಕಡಿಮೆಗಳನ್ನು ಆ ವ್ಯಕ್ತಿಯು ಮಾಡಿಕೊಳ್ಳಬಹುದು.

14. ಈ ಜನ್ಮದಲ್ಲಿ ನಾವು ಪ್ರಾರಬ್ಧಫಲಾನುಭವ ಮಾಡುತ್ತಿರುವಾಗಲೂ ಸಂಕಲ್ಪಪೂರ್ವಕವಾಗಿಯೂ ಇಚ್ಛಾಪೂರ್ವಕವಾಗಿಯೂ ಮಾಡುವ ಶುಭಾಶುಭ ಕರ್ಮಗಳೆಲ್ಲವೂ ತಪ್ಪದೆ ನಮ್ಮ ಸಂಚಿತಕರ್ಮದ ಗುಪ್ತ ಭಂಡಾರವನ್ನು ಬೆಳಸುತ್ತವೆ. ಮುಂದೆ, ಕಾಲಾಂತರದಲ್ಲಿ ಫಲವಾಗಬೇಕೆಂಬ ಸಂಕಲ್ಪದಿಂದಲೂ ಆಪೇಕ್ಷೆಯಿಂದಲೂ ಮಾಡುವ ಕರ್ಮಗಳು ಆಗಾಮಿಕರ್ಮಗಳೆನಿಸುತ್ತವೆ. ಹೀಗೆ ಕರ್ಮದಲ್ಲಿ ಸಂಚಿತ, ಪ್ರಾರಬ್ಧ, ಆಗಾಮಿ-ಎಂದು ಮೂರು ಬಗೆಗಳಿವೆ.

15. ಫಲವನ್ನು ಕೊಡುವದಕ್ಕೆ ಸಿದ್ಧವಾಗಿ, ಪರಿಪಕ್ವವಾಗಿರುವ ನಮ್ಮ ಹಿಂದಿನ ಪ್ರಬಲಕರ್ಮವೇ ದೈವ, ಪ್ರಾರಬ್ಧ, ಅಥವಾ ವಿಧಿ (Fate Destiny) ಎನಿಸಿಕೊಳ್ಳುತ್ತದೆ. ಹಿಂದಿನ ಕರ್ಮವೆಂದರೆ, ಈ ಜನ್ಮದಲ್ಲಿಯೇ ಹಿಂದಿನ ಕಾಲದಲ್ಲಿ ನಾವು ಮಾಡಿದ್ದ ಕರ್ಮವಾಗಬಹುದು ಅಥವಾ ಬಹಳಮಟ್ಟಿಗೆ, ಹಿಂದಿನ ಜನ್ಮಗಳಲ್ಲಿ ನಾವೇ ಮಾಡಿದ್ದ ಕರ್ಮವೂ ಆಗಬಹುದು. ಈಗ ವಿವೇಕದಿಂದ ನಮ್ಮ ಇಷ್ಟಫಲವನ್ನು ಪಡೆಯುವದಕ್ಕೆ ನಮ್ಮ ದೈವವು ಪ್ರತಿಕೂಲವಿದೆಯೆಂದು ಹೇಗಾದರೂ ತಿಳಿದರೆ, ಅಥವಾ ಜ್ಯೋತಿಷ್ಯಶಾಸ್ತ್ರದ ಸಹಾಯದಿಂದ ತಿಳಿದರೆ, ನಾವು ಭಯಪಡದೆ, ನಿರಾಶೆಯಾಗದೆ, ನಮ್ಮ ಆತ್ಮಶಕ್ತಿಯನ್ನು ವ್ಯಾವಹಾರಿಕವಾಗಿಯೂ ಪಾರಮಾರ್ಥಿಕವಾಗಿಯೂ ಅನೇಕವಿಧದಿಂದ ಬೆಳೆಸಿಕೊಂಡು, ಹೆಚ್ಚಿನ ಪ್ರಯತ್ನವನ್ನು ಮಾಡುವದರಿಂದ ಪ್ರತಿಕೂಲದೈವಗತಿಯನ್ನು ವಿಫಲಗೊಳಿಸಿ, ನಮ್ಮ ಇಷ್ಟಾರ್ಥವನ್ನು ಸಾಧಿಸಬಹುದು. ಆದರೆ, ಈ ಅಸಾಧಾರಣಸಾಹಸವು ಎಷ್ಟು ಜನರಿಗೆ ಸಾಧ್ಯ ?-ಎನ್ನಿಸಬಹುದು. ಆದರೆ ಶ್ರದ್ಧೆಯಿಂದ ಸಾಧಿಸತಕ್ಕವರು ನಿರುತ್ಸಾಹಗೊಳಿಸಬಹುದಾದ ಇನ್ನೊಬ್ಬ ದುರ್ಬಲರ ಉದಾಹರಣೆಯನ್ನು ತೆಗೆದುಕೊಳ್ಳಬಾರದು. ದೈವಬಲವು ವರ್ತಮಾನಪುರುಷಪ್ರಯತ್ನವನ್ನೂ ವರ್ತಮಾನಪೌರುಷಶಕ್ತಿಯು ವಾರ್ಧಿಕ (ಮುಪ್ಪಿನ) ದೈವಬಲವನ್ನೂ ಪರಸ್ಪರ ನಿಯಂತ್ರಣಗೊಳಿಸುವದು ನಿಜವಾದರೂ ಪೌರುಷದ ಇಚ್ಛಾಸ್ವಾತಂತ್ರ್ಯಕ್ಕಾಗಲಿ

ಅನೇಕ ಜನ್ಮಗಳ ಸಂಗ್ರಹಶಕ್ತಿಯಾದ ದೈವ ಒಂದಕ್ಕೇ ಆಗಲಿ ಪರಮಾಧಿಕಾರ-ಎಂಬಿದು ಮಾತ್ರ ಇಲ್ಲ.

16. ದೈವ-ಪೌರುಷದ್ವಂದ್ವಶಕ್ತಿಗಳ ಸಂಘರ್ಷ-ಸಂರಾಧನೆಗಳೇ ಜೀವನದ ಉತ್ಕರ್ಷಾಪಕರ್ಷಗಳ ಏರಾಟ- ಹೋರಾಟ- ಜಾರಾಟಗಳು ! ದೈವಗತಿಯಲ್ಲಿ ವರ್ತಮಾನಮನೋಭಾವಕ್ಕೆ ಅನುಕೂಲ ಒಲವೂ ಇರಬಹುದು, ಪ್ರತಿಕೂಲಛಲವೂ ಇರಬಹುದು. ಆದರೆ ದೈವೇಚ್ಛೆಯು ಪ್ರಸ್ತುತಪುರುಷೇಚ್ಛೆಗೆ ಅನೇಕ ಸಂದರ್ಭಗಳಲ್ಲಿ ವಿರೋಧವಾಗಿಯೇ ಇರುವದೆಂದು ಅನೇಕರ ಕಲ್ಪನೆಯಿದೆ ಸ್ವೇಚ್ಛಾವಿಹಾರದ ಚಾಪಲ್ಯವುಳ್ಳ ದೈವವು ತಮ್ಮ ಹೊರಗಿನ ಒಂದು ಪ್ರಬಲವಾದ ಸವಾಲಿನ ಪರೀಕ್ಷಕವಾದ ಅಮಿತ್ರಶಕ್ತಿಯೆಂದೂ ಮನುಷ್ಯನು ಅದರ ಆಸ್ವತಂತ್ರವಾದ ಕೈಗೊಂಬೆಯೆಂದೂ ಅವರ ಭಾವನೆ. ಇದು ನಿಜವಾದರೆ ನಾವು ಮಾಡುವ ಪುಣ್ಯ-ಪಾಪಕರ್ಮಗಳಿಗೆ ನಾವೇನೂ ಹೊಣೆಗಾರರಲ್ಲವಾದ್ದರಿಂದ ತನ್ನ ಇಚ್ಛಾನುಸಾರವಾಗಿ ನಮ್ಮನ್ನು ಆಟವಾಡಿಸುತ್ತಿರುವ ದೈವವೇ ನಮ್ಮ ಕರ್ಮಗಳ ಫಲವನ್ನು ಅನುಭವಿಸಬೇಕಾಗುತ್ತದೆ. ಆದರೆ, ಜೀವನದಲ್ಲಿ ವಾಸ್ತವವಾಗಿ ಕರ್ಮಫಲವಾದ ಸುಖ- ದುಃಖಗಳನ್ನು ಅನುಭವಿಸುತ್ತಿರುವವರು ನಾವೇ ಆದ್ದರಿಂದ, ಪುಣ್ಯ-ಪಾಪಕರ್ಮಗಳ ಜವಾಬ್ದಾರಿಯೂ ನಮ್ಮದೇ ಆಗುತ್ತದೆ. ಆದ್ದರಿಂದ, ನಮ್ಮಿಂದ ಕರ್ಮಗಳನ್ನು ಮಾಡಿಸುತ್ತಿದೆ-ಎಂಬಿದು ಸುಳ್ಳಾಗುತ್ತದೆ.

17. ಇದು ಪುಣ್ಯ, ಇದು ಪಾಪ; ಪುಣ್ಯವು ಸುಖಶಾಂತಿಗಳಿಗೆ ಸಾಧನವಾದುದರಿಂದ ಪುಣ್ಯವನ್ನು ಮಾಡಬೇಕು ; ಇದಕ್ಕೆ ವಿರುದ್ಧವಾದ ಪಾಪವು ದುಃಖಕ್ಕೂ ಅಶಾಂತಿಗೂ ಕಾರಣವಾದುದರಿಂದ ಪಾಪವನ್ನು ಮಾಡಬಾರದು-ಎಂಬೀ ರೀತಿಯ ವಿಧಿ-ನಿಷೇಧಾತ್ಮಕ ಧರ್ಮಶಾಸ್ತ್ರದ ವಾಕ್ಯಗಳು, ವ್ಯಕ್ತಿಗೆ ಕ್ರಿಯಾಸ್ವಾತಂತ್ರ್ಯವಿದೆ-ಎಂಬ ಸತ್ಯವನ್ನೇ ಪ್ರತಿಪಾದಿಸುತ್ತಿದೆ. ನೀತಿಶಾಸ್ತ್ರದ ವಾಕ್ಯಗಳೂ ಇದನ್ನೇ ಸೂಚಿಸುತ್ತವೆ. ಪುರುಷಪ್ರಯತ್ನಕ್ಕೆ ಸ್ವಾತಂತ್ರ್ಯವಿರುವದರಿಂದಲೇ ಇದನ್ನು ಆಧರಿಸಿರುವ ಧರ್ಮ, ಅರ್ಥ (ಧನ) ಕಾಮ (ಇಚ್ಛೆ) ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಸಾಧನೆಯನ್ನು ಶಾಸ್ತ್ರದಲ್ಲಿ ಹೇಳಿದೆ. ಆದರೆ, ವರ್ತಮಾನಪೌರುಷವು ತಕ್ಕಮಟ್ಟಿಗೆ ಅಥವಾ ಬಹಳಮಟ್ಟಿಗೆ ನಮ್ಮ ಹಿಂದಿನ ಜನ್ಮಕರ್ಮಗಳ ಪೌರುಷದ ಫಲವಾದ ಮಾನಸಸಂಸ್ಕಾರ-ವಾಸನಾರೂಪ ದೈವಶಕ್ತಿಯ ನಿಯಂತ್ರಣಕ್ಕೂ ಪರಿಮಿತಿಗೂ ಒಳಪಟ್ಟಿದೆ-ಎಂಬ ಸತ್ಯವನ್ನೂ ನಾವು ಮರೆಯಬಾರದು. ಪೂರ್ವಜನ್ಮದ ಪಾಪಕ್ಕೆ ಪರಿಹಾರಕವಾಗಿ ಪೂಜಾಜಪ ಹೋಮದಾನಾದಿ ಶಾಂತಿಕರ್ಮಗಳನ್ನೂ ಶಾಸ್ತ್ರದಲ್ಲಿ ಹೇಳಿರುವದರಿಂದ, ಪ್ರತಿ-ಕೂಲದೈವವನ್ನು ವರ್ತಮಾನಪೌರುಷವು ಬಹಳಮಟ್ಟಿಗೆ ನಿಯಂತ್ರಣಮಾಡಬಹುದೆಂಬುದನ್ನೂ ತೋರಿಸುತ್ತದೆ.

18. ಆದರೂ ರಾಜಸಸ್ವಭಾವದ ಉಗ್ರತಪಸ್ವಿಗಳಾದ ವಿಶ್ವಾಮಿತ್ರ-ಜಮದಗ್ನಿಋಷಿಗಳೂ ಸಹ ಪ್ರಾರಬ್ಧಜನ್ಯವಾದ ಶೋಕಮೋಹಗಳನ್ನು ಪೂರ್ಣವಾಗಿ ಜಯಿಸಲು ಸಾಧ್ಯವಾಗಲಿಲ್ಲ. ಪರಮಸಾತ್ತ್ವಿಕರಾದ ವಸಿಷ್ಠಮಹರ್ಷಿಗಳೂ ಸಹ ಶಕ್ತ್ರಿಯೇ ಮೊದಲಾದ ಒಂದುನೂರುಜನ ಮಕ್ಕಳನ್ನು ವಿಶ್ವಾಮಿತ್ರರ ದ್ವೇಷಾಗ್ನಿಯ ಅಭಿಚಾರಕಕರ್ಮದಿಂದ ಕಳೆದುಕೊಂಡು ದುಃಖಪಡಬೇಕಾಯಿತೆಂದು ಪುರಾಣಗಳಲ್ಲಿ ಹೇಳಿದೆ. ಆದ್ದರಿಂದ ಯಾರೇ ಆಗಲಿ, ಹಿಂದೆ ಮಾಡಿದ ಶುಭಾಶುಭಕರ್ಮಗಳ ಫಲಗಳಾದ ಸುಖದುಃಖಾದಿಗಳನ್ನು ತಪ್ಪದೆ ಅನುಭವಿಸಲೇಬೇಕು. ದೇಹದೃಷ್ಟಿಯಿಂದ ಪ್ರಾರಬ್ಧಭೋಗವು ಭಕ್ತನಿಗಾಗಲಿ, ಯೋಗಿಗಾಗಲಿ, ಜ್ಞಾನಿಗಾಗಲಿ, ಯಾರಿಗೂ ತಪ್ಪುವದಿಲ್ಲ. ತಿಳಿದೋ ತಿಳಿಯದೆಯೋ ತಾನು ಮಾಡಿದ ತಪ್ಪುಗಳಿಗೆ, ತನಗೆ ಶಿಕ್ಷೆಯಾಗಬಾರದೆಂದೂ ತನ್ನ ಪಾಪಗಳನ್ನೆಲ್ಲಾ ದೇವರು ಕ್ಷಮಿಸಬೇಕೆಂದೂ ತನಗೆ ಯಾವ ಕಷ್ಟನಷ್ಟಗಳೂ ಉಂಟಾಗಬಾರದೆಂದೂ ತಾನು ಯಾವಾಗಲೂ ಸಂಪತ್ಸುಖಸಮೃದ್ಧಿಯಿಂದ ಮೆರೆಯುತ್ತಿರಬೇಕೆಂದೂ ದೇವರನ್ನು ಪ್ರಾರ್ಥಿಸಿ, ಭಕ್ತನು ಪೂಜಾದಿಗಳನ್ನು ದೇವರಿಗೆ ಸಲ್ಲಿಸಿ ದಯಾನಿಧಿ, ಕರುಣಾಸಿಂಧು, ಕೃಪಾಸಾಗರ, ಭಕ್ತವತ್ಸಲ, ದೀನಬಂಧು ! ಎಂದು ಮೊದಲಾಗಿ ಹೊಗಳಿ ಹೊಗಳಿ ಸಹಸ್ರಸಹಸ್ರ ಸ್ತೋತ್ರಮಾಲೆಗಳನ್ನು ಪೋಣಿಸುತ್ತಾನೆ. ಸರ್ವಸಮನೂ ಪಕ್ಷಪಾತರಹಿತನೂ ಆದ ದೇವರು ಸಹ ತನ್ನ ಪೊಳ್ಳು ಹೊಗಳಿಕೆಗೆ ಒಲಿಯುತ್ತಾನೆಂದು ಭಕ್ತನ ಭ್ರಮೆ. ಆದರೆ, ನಿಜವಾದ ದೇವರು ನಿರ್ಗುಣನೂ ನಿರಾಕಾರನೂ ನಿರುಪಾಧಿಕನೂ ನಿಷ್ಪ್ರಪಂಚನೂ ಸರ್ವಸಮನೂ ನಿಂದಾಸ್ತುತಿಗಳಿಗೆ ದೂರನೂ ಇರುವದರಿಂದ, ತಪ್ಪುಮಾಡಿದ ಭಕ್ತನ ಪೂಜಾಹೋಮಸ್ತೋತ್ರ ಮೊದಲಾದ ಲಂಚವನ್ನು ಸ್ವೀಕರಿಸುವಷ್ಟು ದೇವರು ಕ್ಷುದ್ರಜೀವಿಯಲ್ಲ. ಆದ್ದರಿಂದ ವಿಶ್ವವ್ಯಾಪಕವಾದ ಕಾರಣಕಾರ್ಯಭಾವದ ನಿಷ್ಠುರನಿಯಮಕ್ಕೆ ಒಳಪಟ್ಟು, ವಿವೇಕವಿಲ್ಲದ ಭಕ್ತನೂ ಕೂಡ ಪಾಪದ ಫಲವನ್ನು ಅನುಭವಿಸಬೇಕಾಗುತ್ತದೆ. ಆದರೆ ವಿವೇಕಶಾಲಿಯಾದ ಜ್ಞಾನಿಭಕ್ತನು ದೇವರನ್ನು ತನ್ನಿಂದ ಬೇರೆ ಎಂದು ತಿಳಿದಿಲ್ಲವಾದ್ದರಿಂದಲೂ ಅವನಿಗೆ ತನ್ನ ಸ್ವರೂಪವೇ ಪರಮಾತ್ಮನೆಂಬ ನಿಶ್ಚಯವಿರುವದರಿಂದಲೂ ಕರ್ತೃತ್ವ-ಭೋಕ್ತೃತ್ವಭ್ರಮೆಯು ಅವನಿಗೆ ಇಲ್ಲವಾದ್ದರಿಂದಲೂ ದೇಹಕ್ಕೆ ಒದಗುವ ಪ್ರಾರಬ್ಧಭೋಗವನ್ನು ತಪ್ಪಿಸಿಕೊಳ್ಳಬೇಕೆಂಬ ಚಾಪಲ್ಯವೂ ಇಲ್ಲವಾದ್ದರಿಂದಲೂ ಜೀವವಿರುವವರೆಗೂ ಅವನು ದೇಹಕ್ಕೆ ಒದಗುವ ದ್ವಂದ್ವಫಲಭೋಗಗಳನ್ನು ಅರಿಯುತ್ತಾ ಸಾಕ್ಷಿಸ್ವರೂಪದಲ್ಲಿ ಜ್ಞಾನಿಯು ಸಮಾಧಾನದಿಂದ ಇರುತ್ತಾನೆ.

19. ಆದರೆ, ಬದುಕಿನಲ್ಲಿ ಪ್ರಾರಬ್ಧಫಲವಾಗಿ ಮುಂದೆ ಬರಬಹುದಾದ ಕಷ್ಟನಷ್ಟಗಳನ್ನೂ ದುಃಖದಾರಿದ್ರ್ಯಗಳನ್ನೂ ಸಹಿಸಲಾರದ ಸಾಮಾನ್ಯ

ಸಂಸಾರಿಗಳು ಆ ದುರ್ದೈವದಿಂದ ತಪ್ಪಿಸಿಕೊಳ್ಳುವದಕ್ಕಾಗಿ ಭವಿಷ್ಯವನ್ನು ತಕ್ಕ ಪಟ್ಟಿಗೆ ತಿಳಿದು ಹೇಳಬಲ್ಲರೆಂದು ಪ್ರಸಿದ್ಧರಾದ ಪನಾಡಪ್ರುರುಷರೂ ಆದ ಯೋಗಿಗಳಿಗೋ ಜ್ಯೋತಿಷ್ಕರಿಗೋ ಮೊರೆಹೋಗುತ್ತಾರೆ. ಜಾತಕನ ಗೂಢವಾದ ಪ್ರಾರಬ್ಧದ ಯಾವಯಾವ ಶುಭಾಶುಭಫಲಗಳನ್ನು ಅವನ ಯಾವಯಾವ ದಶಾ-ಭುಕ್ತಿಗಳ ಯಾವಯಾವ ವಯಸ್ಸಿನಲ್ಲಿ ಅವನು ಅನುಭವಿಸಬೇಕಾಗುತ್ತದೆ–ಎಂಬುವ ವಿವರಗಳನ್ನೆಲ್ಲಾ ಜ್ಯೋತಿಷ್ಯಶಾಸ್ತ್ರವು ಸೂಚಿಸುತ್ತದೆ. ಮತ್ತು ಅಶುಭಫಲವನ್ನು ಸಾಧ್ಯವಾದಷ್ಟು ನಿಯಂತ್ರಿಸಿ, ಶುಭಫಲವನ್ನು ವೃದ್ಧಿಮಾಡಬಲ್ಲ ಗೂಢವಾದ ಪೌರುಷಶಕ್ತಿಯು ಜಾತಕನ ಯಾವಯಾವ ವಯಸ್ಸಿನಲ್ಲಿ ಹೇಗೆಹೇಗೆ ವಿಕಾಸವಾಗಿ ಪ್ರಕಟವಾಗಬಲ್ಲದು– ಎಂಬ ಮಹತ್ತ್ವದ ಭಾವೀ ರಹಸ್ಯಜ್ಞಾನವನ್ನು ಆ ವ್ಯಕ್ತಿಯ ಜಾತಕದ ಆಧಾರದಮೇಲೆ ಅತ್ಯಂತಶ್ರೇಷ್ಠವೂ ಮಹೋಪಕಾರಕವೂ ಆದ ಕಾಲಜ್ಞಾನದ ಹೋರಾ (ಜ್ಯೋತಿಷ್ಯ) ಶಾಸ್ತ್ರವೂ ಅನೇಕ ವರ್ಷಗಳ ಮುಂದಾಗಿಯೇ (ಹುಟ್ಟಿದಾಗಲೇ) ಸೂಚಕವಾಗಿ ತಿಳಿಸಬಲ್ಲದು. ಜಗತ್ತಿನಲ್ಲಿರುವ ನೂರಾರು ಶಾಸ್ತ್ರಗಳಲ್ಲಿ ಪವಿತ್ರವಾದ ಜ್ಯೋತಿಷ್ಯಶಾಸ್ತ್ರ ಒಂದನ್ನು ಬಿಟ್ಟರೆ ಬೇರೆ ಯಾವ ಶಾಸ್ತ್ರವೂ ಜಗತ್ತಿನ ರಾಷ್ಟ್ರ–ರಾಷ್ಟ್ರಗಳ ಮತ್ತು ಪ್ರಜೆಗಳ ಹಾಗೂ ಜೀವರ ಭವಿಷ್ಯಫಲಗಳನ್ನು ತಿಳಿಸುವ ಸಾಹಸಮಾಡಲಾರದು.

20. ಆದರೆ, ಜ್ಯೋತಿಷ್ಯಶಾಸ್ತ್ರದಲ್ಲಿ ಪಡೆದ ಪಾಂಡಿತ್ಯದಿಂದ ಭವಿಷ್ಯಜ್ಞಾನವುಳ್ಳವರೂ ತಪಸ್ವಿಗಳೂ ಸಹ ತಮ್ಮ ಜೀವನದಲ್ಲಿಯೇ ಒದಗಿದ ಕಷ್ಟನಷ್ಟಗಳನ್ನೂ ವಿಪತ್ತನ್ನೂ ಮುಂದಾಗಿಯೇ ತಿಳಿದಿದ್ದರೂ ಕೂಡ ಪೂರ್ಣವಾಗಿ ತಪ್ಪಿಸಿಕೊಂಡವರು ಪ್ರಾಯಶಃ ಯಾರೂ ಇಲ್ಲವೆಂದು ತೋರುತ್ತದೆ. ಏಕೆಂದರೆ ಫಲವನ್ನು ಕೊಡುವದರಲ್ಲಿ ಪ್ರಾರಬ್ಧದ ಶಕ್ತಿಯು ಅಷ್ಟು ಅದಮ್ಯವೂ ಅಗಮ್ಯವೂ ಆದುದು. ಹತ್ತು ಉಪನಿಷತ್ತುಗಳನ್ನೂ ಕನ್ನಡಿಸಿ, ಸಂಸ್ಕೃತ, ಇಂಗ್ಲಿಷ್, ಕನ್ನಡ–ಮೂರು ಭಾಷೆಗಳಲ್ಲಿ ಒಟ್ಟು ಇನ್ನೂರಕ್ಕೂ ಹೆಚ್ಚು ಸಣ್ಣ–ದೊಡ್ಡ ಗ್ರಂಥಗಳನ್ನು ಬರೆದು, ತೊಂಬತ್ತಾರುವರ್ಷಗಳ ದೀರ್ಘಜೀವನ ನಡೆಸಿದ್ದ ಜ್ಞಾನಿಗಳೊಬ್ಬರು "ಪ್ರಾರಬ್ಧಫಲದ ಪ್ರಾಬಲ್ಯದ ಮುಂದೆ ಯಾವ ಯೋಗಿಯ ಆಟವೂ ನಡೆಯುವದಿಲ್ಲ" ಎನ್ನುತ್ತಿದ್ದರು.

21. ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ನಾಲ್ಕು ಪುರುಷಾರ್ಥಗಳ ಸಾಧನೆಗಾಗಿ ನಾವು ನಮ್ಮ ತಪಸ್ಸಾಮರ್ಥ್ಯದಿಂದ ಜ್ಞಾನೇಚ್ಛಾಕ್ರಿಯಾಶಕ್ತಿಗಳನ್ನು ಬೆಳೆಸಿಕೊಂಡರೂ ಸಹ ಫಲಾನುಭವದೃಷ್ಟಿಯಿಂದ, **''ಅವಶ್ಯಮನುಭೋಕ್ತವ್ಯಂ ಕೃತಂ ಕರ್ಮ ಶುಭಾಶುಭಂ''** ಹಿಂದೆ ಮಾಡಿದ ಶುಭಾಶುಭ

ಕರ್ಮಗಳ ಫಲವನ್ನು ಈ ಜನ್ಮದಲ್ಲಿ ಅವಶ್ಯವಾಗಿ ಅನುಭವಿಸಲೇ ಬೇಕು-ಎನ್ನುವಹು ಬಹಳ ಸತ್ಯ !

ಅನಿಷ್ಟಮಿಷ್ಟಂ ಮಿಶ್ರಂ ಚ ತ್ರಿವಿಧಂ ಕರ್ಮಣಃ ಫಲಮ್ ।
ಭವತ್ಯತ್ಯಾಗಿನಾಂ ಪ್ರೇತ್ಯ, ನ ತು ಸಂನ್ಯಾಸಿನಾಂ ಕ್ವಚಿತ್ ॥
(ಗೀ- ೧೮-೧೨)

ಇಷ್ಟಫಲ, ಅನಿಷ್ಟಫಲ, ಇಷ್ಟಾನಿಷ್ಟಗಳ ಮಿಶ್ರಫಲ- ಎಂದು ಕರ್ಮಫಲವು ಮೂರು ಬಗೆಯಾಗಿದೆ. ಸುಖಸಮೃದ್ಧಿಯೇ-ಸಕಲವಿಧವಾದ ಸಂಪತ್ಸೌಭಾಗ್ಯವೇ ಎಲ್ಲರಿಗೂ ಇಷ್ಟವಾದ ಫಲ. ಇದಕ್ಕೆ ವಿರುದ್ಧವಾದುದೇ ಅನಿಷ್ಟವಾದ ಫಲ ; ಇಷ್ಟಾನಿಷ್ಟಫಲಗಳ ಮಿಶ್ರಫಲವೂ ಬರುವದುಂಟು. ಈ ಜನ್ಮದಲ್ಲಿ ಅನುಭವಿಸಿದಮೇಲೂ ಉಳಿದ ಫಲಗಳು ಮರಣಾನಂತರ ಒದಗುತ್ತವೆ. ಮರಣಾನಂತರ ಅನಿಷ್ಟಫಲವೆಂದರೆ, ನರಕಪ್ರಾಪ್ತಿ ಮತ್ತು ಮನುಷ್ಯೇತರ ಪ್ರಾಣಿಗಳಲ್ಲಿ ಜನ್ಮಪಡೆಯುವದು. ಇಷ್ಟಫಲವೆಂದರೆ ದೇವಾದಿಗಳ ಜನ್ಮ ; ಇಷ್ಟಾನಿಷ್ಟಮಿಶ್ರಫಲವೆಂದರೆ ಪುಣ್ಯಾಪುಣ್ಯಮಿಶ್ರವಾದ ಮಾನವಜನ್ಮ. ಈ ಫಲಗಳು ಅವಿದ್ಯಾ-ಕಾಮಕರ್ಮಗಳಲ್ಲಿ ತೊಳಲಾಡುತ್ತಿರುವ ಅಜ್ಞಸಂಸಾರಿಗೇ ಹೊರತು, ಉಜ್ಜ್ವಲವಾದ ಆತ್ಮಜ್ಞಾನದ ಬಲದಿಂದ ತಾನು ಕರ್ತೃವೂ ಭೋಕ್ತೃವೂ ಅಲ್ಲವೆಂಬ ಸತ್ಯವನ್ನು ಸ್ಪಷ್ಟವಾಗಿ ಹಗಲುಬೆಳಕಿನಂತೆ ಕಂಡುಕೊಂಡಿರುವ ತ್ಯಾಗಿಯಾದ ಪರಮಾರ್ಥದರ್ಶಿಗೆ ಇಲ್ಲ. ಈಶ್ವರಾನುಗ್ರಹದಿಂದಲೂ ಸದ್ಗುರುಕೃಪೆಯಿಂದಲೂ ಜ್ಞಾನಮಯತಪಸ್ಸಿನಿಂದಲೂ ಆತ್ಮಾನುಭವವನ್ನು ಪಡೆದ ತ್ಯಾಗಿಯಾದ ಪರಮಹಂಸನು ಜೀವನ್ಮುಕ್ತನೇ ಸರಿ !

22. ಇದುವರೆಗೆ ಸಂಕ್ಷೇಪವಾಗಿ ವಿಚಾರಮಾಡಿರುವ ಕುತೂಹಲಕರವೂ ಗೂಢವೂ ಜಟಿಲವೂ ಆದ ಪ್ರಾರಬ್ಧ-ಪುರುಷಪ್ರಯತ್ನ (ದೈವ-ಪೌರುಷ) "Fate and Free-Will" ವಿಷಯವನ್ನು ಅನೇಕ ದೃಷ್ಟಾಂತಪೂರ್ವಕವಾಗಿ ಮುಂದಿನ ಮುಖ್ಯ ಲೇಖನದಲ್ಲಿ ಹೆಚ್ಚು ವಿಸ್ತಾರವಾಗಿ ವಿಚಾರಮಾಡಿದೆ.

23. ಪ್ರಾರಂಭದ ನಾಂದೀಶ್ಲೋಕದಿಂದಲೇ ಇನ್ನೊಂದು ಅಸಾಧಾರಣವಾದ ಉತ್ತಮ ಅರ್ಥವೂ ಸೂಚಿತವಾಗುತ್ತದೆ. ಇದೇನೆಂದರೆ, ಉದ್ಯೋಗವು ಧರ್ಮ, ಅರ್ಥ (ಧನ) ಕಾಮ (ಇಚ್ಛೆ) ಗಳೆಂಬ ಮೂರು ಪುರುಷಾರ್ಥಗಳಿಗೆ ಸಂಬಂಧಪಟ್ಟ ಪ್ರಯತ್ನಶೀಲಸಾಧನೆಯಲ್ಲದೆ, ನಾಲ್ಕನೆಯ ಅಂತಿಮ ಪುರುಷಾರ್ಥಕ್ಕೂ ಸಂಬಂಧಪಟ್ಟಿದೆ. ಹೇಗೆಂದರೆ, ಉತ್-ಯೋಗ = ಉದ್ಯೋಗ.

ಉತ್ ಎಂದರೆ ಉನ್ನತವಾದುದು, ಪರಮೋನ್ನತವಾದುದು, ವ್ಯವಹಾರಾತೀತವೂ ಲೋಕಾತೀತವೂ ಆದುದು ; ಇದೇ ನಿರುಪಾಧಿಕವೂ ನಿರ್ವಿಶೇಷವೂ ಆದ ಪರಮಾತ್ಮ. ಯೋಗವೆಂದರೆ ಏಕಾಗ್ರೀಕರಣ. ಏಕಾಗ್ರತೆಯಿಂದ ಮನಸ್ಸನ್ನು ಪರಮಾತ್ಮನಲ್ಲಿ ಲಯಗೊಳಿಸುವದೇ ಯೋಗ ಅಥವಾ ಉದ್ಯೋಗ. ಈ ಪರಮಾರ್ಥವನ್ನು ಸಾಧಿಸಿದವನೇ ಉದ್ಯೋಗಶೀಲನಾದ ಶ್ರೇಷ್ಠ ಪುರುಷ, ಪುರುಷಸಿಂಹ ಅಥವಾ ಪುರುಷೋತ್ತಮ ! ಇಂಥಾ ಮಹಾತ್ಮನನ್ನು ಮೋಕ್ಷಲಕ್ಷ್ಮಿಯು ತಾನಾಗಿಯೇ ಒಲಿದು ಬಂದು ಓಲೈಸುವಳು. ಮೋಕ್ಷಲಕ್ಷ್ಮಿಯು ಆ ಪುರುಷೋತ್ತಮನ ಸ್ವರೂಪದಿಂದ ಬೇರೆಯಾದವಳಲ್ಲ. ಏನೋ ಸಾಧನೆಮಾಡಿ ಸಾಧಿಸಬೇಕಾದ ಏನೊಂದು ಅನಿತ್ಯವಾದ ವಸ್ತುವಿನಂತೆ, ಅಥವಾ ಅಧಿಕಾರ ಸ್ಥಾನದಂತೆ ಅಥವಾ ಸ್ಥಿತಿಯಂತೆಯೂ ಮೋಕ್ಷವಲ್ಲ. ಅದು ಉದ್ಯೋಗಿಯಾದ ಸಾಧಕನ ಸ್ವರೂಪವೇ ಆಗಿದೆ. ಇದನ್ನು ಸಾಧಕನು ವಸ್ತುಪ್ರಧಾನವೂ ವಸ್ತುನಿಷ್ಠವೂ ಕೇವಲ (ಆತ್ಮ) ವಸ್ತುಸ್ವಭಾವವೂ ಆದ ವಿವೇಕಪೂರ್ಣಜ್ಞಾನದೃಷ್ಟಿಯಿಂದ ಸ್ವಾನುಭವದಲ್ಲಿ ಕಂಡುಕೊಳ್ಳಬೇಕು. ಹೀಗೆ ಇರುವದನ್ನೇ ಕಂಡುಕೊಳ್ಳುವದು ಮಾತ್ರ ಹೊಸದೇ ಹೊರತು, ವಸ್ತುಸ್ವಭಾವವು ಹೊಸದಲ್ಲ. ಮೋಕ್ಷವೆಂದರೆ ಕೈವಲ್ಯ, ಕೇವಲೀಭಾವ ಅಂದರೆ, ಎರಡನೆಯದೇನೂ ಇಲ್ಲದೆ ತಾನೇ ತಾನಾಗುವ ಬ್ರಾಹ್ಮೀಸ್ಥಿತಿ.

'ಜ್ಞಾನಾದೇವ ತು ಕೈವಲ್ಯಮ್'

24. ಈ ಕೈವಲ್ಯವು ಸ್ವರೂಪಜ್ಞಾನದಿಂದಲೇ ಪ್ರಾಪ್ತವಾಗುತ್ತದೆ. ಈ ಜ್ಞಾನವು ವಸ್ತುಸ್ವಭಾವವನ್ನು ಅವಲಂಬಿಸಿದ ಕೇವಲ ವಸ್ತುಪ್ರಧಾನವಾದ ದೃಷ್ಟಿಯಿಂದ ಬರುವದೇ ಹೊರತು, ಇಚ್ಛೆಯನ್ನೂ ಪ್ರಯತ್ನವನ್ನೂ ಅವಲಂಬಿಸಿದ ಮನಃಪ್ರಧಾನವಾದ (ಕ್ರಿಯಾರೂಪ) ಭಾವನೆಯಿಂದ ಬರುವದಲ್ಲ. ಭಾವನಾಸಾಧ್ಯವಾದುದು ಉಪಾಸನೆಯೇ ಹೊರತು ಪರಿಶುದ್ಧಜ್ಞಾನವಲ್ಲ. ಉಪಾಸನೆಯ ಪರಮಫಲವು ಆತ್ಯಂತಿಕಫಲವು ಬ್ರಹ್ಮಲೋಕಪ್ರಾಪ್ತಿಯೇ ಹೊರತು ಸ್ವರೂಪಜ್ಞಾನವಲ್ಲ. ಉಪಾಸನೆಯ ಫಲವು ಬದುಕಿರುವಾಗ ಉಪಾಸ್ಯದೇವನ ಸಾಕ್ಷಾತ್ಕಾರ ಮತ್ತು ಮರಣಾನಂತರ ಸಾಲೋಕ್ಯ, ಸಾಮೀಪ್ಯ, ಸಾರೂಪ್ಯ, ಸಾಯುಜ್ಯ ಎಂಬ ನಾಲ್ಕು ಬಗೆಯಾದ ಸೋಪಾಧಿಕವೂ ಅನಿತ್ಯವೂ ಆದ, ಅಪರವಿದ್ಯಾಫಲವಾದ ಮುಕ್ತಿಯೇ ಹೊರತು, ನಿತ್ಯವಾದ ಅಮೃತತ್ವವಲ್ಲ. ಆದರೆ, ಜ್ಞಾನಸಾಧನೆಯ ಪರವಿದ್ಯಾಫಲವು ನಿತ್ಯವಾದ ಸದ್ಯೋಮುಕ್ತಿ, ಜೀವನ್ಮುಕ್ತಿ.

ಶಾಸ್ತ್ರಾಚಾರ್ಯೋಪದೇಶ ಶಮದಮಾದಿಸಂಸ್ಕೃತಂ ಮನಃ
ಆತ್ಮದರ್ಶನೇ ಕರಣಮ್ ।

25. ಶ್ರೋತ್ರಿಯಬ್ರಹ್ಮನಿಷ್ಠನಾದ ಸದ್ಗುರುಮುಖದಿಂದ ಲಭಿಸುವ ಶಾಸ್ತ್ರೋಪದೇಶವೇ-ಉಪನಿಷತ್ತುಗಳ ಉಪದೇಶವೇ-ಆತ್ಮದರ್ಶನಕ್ಕೆ ಹೊರಗಿನ ಸಾಧನೆ; ವಿವೇಕ, ವೈರಾಗ್ಯ, ಶಮ, ದಮ, ತಿತಿಕ್ಷಾ, ಉಪರತಿ, ಶ್ರದ್ಧಾ, ಸಮಾಧಾನ ಮತ್ತು ಮುಮುಕ್ಷುತ್ವ ಎಂಬ ಸಾಧನಚತುಷ್ಟಯದಿಂದ ಸುಸಂಸ್ಕೃತವಾದ ಮನಸ್ಸೇ ಒಳಗಿನ ಸಾಧನೆ. ಇದಕ್ಕೆ ಅಗತ್ಯವಾದ ಶ್ರವಣ, ಮನನ, ನಿದಿಧ್ಯಾಸನವೆಂಬ ಆಧ್ಯಾತ್ಮಿಕಸಾಕ್ಷಾತ್‌ಸಾಧನೆಯೇ ಅತ್ಯಂತ ಶ್ರೇಷ್ಠವಾದ ಪಾರಮಾರ್ಥಿಕ ಉದ್ಯೋಗ. ಈ ನಿತ್ಯೋದ್ಯೋಗದಲ್ಲಿ ನಿರಂತರನಾಗಿರತಕ್ಕವನೇ ನಿಜವಾದ ಪೌರುಷಶಾಲಿಯಾದ ಪುರುಷಸಿಂಹ !

26. ಇಂಥಾ ಸ್ವಪ್ರಯತ್ನದ ಉದ್ಯೋಗಶೀಲತೆಯ ಮಹತ್ತ್ವವನ್ನು ತಿಳಿಯದ ಸೋಮಾರಿಗಳಾದ ಪಾಮರಜನರು, ಲೌಕಿಕ- ಪಾರಲೌಕಿಕ- ಪಾರಮಾರ್ಥಿಕವಾದ ಯಾವ ಸಾಧನಸಿದ್ಧಿಗಳಿಗಾದರೂ ಅದೃಷ್ಟವಿರಬೇಕು, ಅದೃಷ್ಟವೇ ಮುಖ್ಯ, ದೈವಬಲಬೇಕು, ಎಲ್ಲಾ ವಿಧಿಯ ಆಟ-ಎನ್ನುತ್ತಾರೆ, ಆಲಸ್ಯಗೇಡಿಗಳಾದ ಈ ಹೇಡಿಗಳ ಮಾತನ್ನು ಕೇಳದೆ, ಕಣ್ಣಿಗೆ ಕಾಣದೆಯೂ ಕೈಗೆ ಸಿಕ್ಕದೆಯೂ ಮನಸ್ಸಿನ ಊಹೆಗೂ ನಿಲುಕದೆಯೂ ಇರುವ ಅದೃಷ್ಟವನ್ನೂ ದೈವವಾದವನ್ನೂ ಒಪ್ಪದೆ, ನಂಬದೆ, ವಿಚಾರಪೂರ್ವಕವೂ ಶ್ರದ್ಧಾಮಯವೂ ಆದ ತಪಃಪೌರುಷದಿಂದ ಬಹುಮುಖವಾದ ಆತ್ಮಶಕ್ತಿಯನ್ನು ಬೆಳೆಸಿಕೊಂಡು, ತೋರಿ ಅಡಗುವ ಸಮಸ್ತ ಜಗತ್ತೂ ಮರುಮರೀಚಿಕೆಯಂತೆ ಅನಿತ್ಯವೂ ಅಸತ್ಯವೂ ಆದ ಮಾಯಾಮಯವಾದುದೆಂದು ವಿವೇಕದಿಂದ ನಿಶ್ಚಯಿಸಿ, ಅನಾತ್ಮದಲ್ಲಿ ವೈರಾಗ್ಯವನ್ನು ಹೊಂದಿ, ಸಚ್ಚಿದಾನಂದಸ್ವರೂಪವಾದ ಆತ್ಮ ಒಂದೇ ಸತ್ಯವೆಂಬ ನಿಶ್ಚಯಜ್ಞಾನದಿಂದ ನಿತ್ಯಾನಂದದಲ್ಲಿ ಮುಳುಗಿರುವ ಮಹಾತ್ಮನೇ ಪುರುಷಸಿಂಹನು !

ನೇಹಾಭಿಕ್ರಮನಾಶೋಽಸ್ತಿ ಪ್ರತ್ಯವಾಯೋ ನ ವಿದ್ಯತೇ ।
ಸ್ವಲ್ಪಮಪ್ಯಸ್ಯ ಧರ್ಮಸ್ಯ ತ್ರಾಯತೇ ಮಹತೋ ಭಯಾತ್ ॥

(ಗೀ: ೨-೪೦)

27. ಈ ಪರಮಾರ್ಥಸಾಧನೆಯ ಉದ್ಯೋಗದಲ್ಲಿ ಪ್ರಾರಂಭವಾದ ಪ್ರಯತ್ನವು ನಾಶವಾಯಿತು- ಎಂಬುದಿಲ್ಲ; ಕೃಷಿಯ ಉದ್ಯೋಗದಲ್ಲಿ ಬೇಕಾದಷ್ಟು ಶ್ರಮಪಟ್ಟು ವ್ಯವಸಾಯಮಾಡಿದ್ದರೂ ಮಳೆಬಾರದಿದ್ದರೆ, ಪ್ರಯತ್ನವೆಲ್ಲಾ ವ್ಯರ್ಥವಾಗುತ್ತದೆ ; ಆದರೆ, ಪರಮಾರ್ಥಸಾಧನೆಯಲ್ಲಿ, ಮಾಡಿದಷ್ಟು ಪ್ರಯತ್ನವೇ ಒಳಗೆ ಮನಸ್ಸಿನಲ್ಲಿರುವ ಆಧ್ಯಾತ್ಮಸಂಸ್ಕಾರವನ್ನು ಹೆಚ್ಚು ಪುಷ್ಟಿಗೊಳಿಸುವದಲ್ಲದೆ, ಸ್ವಲ್ಪವೂ ವ್ಯರ್ಥವಾಗುವದಿಲ್ಲ. ಇದನ್ನು ಬಿಟ್ಟರೆ ದೋಷವಿಲ್ಲ. ಈ ಪರಮಾರ್ಥಯೋಗವೆಂಬ ಪರಮಧರ್ಮವನ್ನು ಸ್ವಲ್ಪವೇ ಅನುಷ್ಠಾನ

ಮಾಡಿದರೂ ಜನನ-ಮರಣರೂಪ ಸಂಸಾರದ ಮಹಾಭಯದಿಂದ ರಕ್ಷಣೆಮಾಡು ವದರಲ್ಲಿ ಇದು ಸಹಾಯವಾಗುತ್ತದೆ.

28. ಮೂವತ್ತು ವರ್ಷಗಳ ಹಿಂದೆ ಗುಬ್ಬಿಯ ಶ್ರೀ ಚಿದಂಬರಾಶ್ರಮ ದಿಂದ ಪ್ರಕಾಶವಾಗಿರುವ ನಮ್ಮ "ದೈವ-ಪೌರುಷ" ಎಂಬ ಸಣ್ಣ ಪುಸ್ತಕವನ್ನು ಓದಿದ ಕೆಲವು ಜಿಜ್ಞಾಸುಗಳ ಅಪೇಕ್ಷೆಯಂತೆ ಹೆಚ್ಚು ವಿವರವಾದ ಈ ಲೇಖನ ವನ್ನು ಪ್ರಕಟಗೊಳಿಸಿದೆ.

29. ಎಲ್ಲಾ ದೇಶಗಳ ಎಲ್ಲಾ ಕಾಲಗಳ ಎಲ್ಲಾ ಜನರಿಗೂ ನಿತ್ಯ ಜೀವನದಲ್ಲಿಯೂ ಉಪಯೋಗವಾಗುವ ಮಹತ್ತ್ವದ ಈ ಲೇಖನದ ಪ್ರಕಟಣೆಗೆ ಆರ್ಥಿಕಸಹಾಯಮಾಡಿರುವ ಪುಣ್ಯವಂತರಿಗೂ ಇದನ್ನು ಮುದ್ದಾಗಿ ಮುದ್ರಣ ಮಾಡಿಕೊಟ್ಟಿರುವ ಹೊಳೆನರಸೀಪುರದ ಅಧ್ಯಾತ್ಮಪ್ರಕಾಶಕಾರ್ಯಾಲಯದ ಪೂಜ್ಯ ಪಂಡಿತರಿಗೂ ಅವರ ಮುದ್ರಣಾಲಯದ ಶ್ರದ್ಧಾವಂತರಾದ ಕೆಲಸಗಾರ ರಿಗೂ ಶ್ರೀ ಗುರುದೇವರು ಸಕಲಶುಭಗಳನ್ನೂ ದಯಪಾಲಿಸಲೆಂದು ಸರ್ವಾತ್ಮ ನಾದ ಪರಮಾತ್ಮನಲ್ಲಿ ಪ್ರಾರ್ಥನೆ.

॥ ಓಂ ॥

ಶ್ರೀ ಮೂರ್ತಿ.

ತಾ॥ 20-4-1988

|| ಓಮ್ ||

ಪ್ರಾರಬ್ಧ ಮತ್ತು ಪುರುಷಪ್ರಯತ್ನ

1. ಈ ವಿಷಯವು ಮಹತ್ತ್ವಪೂರ್ಣವೂ ಗಂಭೀರವೂ ಜಟಿಲವೂ ಆದ ಪ್ರಶ್ನೆ. ರಾಮಾಯಣ, ಮಹಾಭಾರತ, ಪುರಾಣ, ಕಾವ್ಯ, ನಾಟಕ, ಪದ್ಯ ಮೊದಲಾದ ಬಗೆಬಗೆಯ ಸಾಹಿತ್ಯಪ್ರಕಾರಗಳ ಪ್ರಧಾನವೂ ಕೇಂದ್ರವೂ ಆದ ವಿಷಯವು ಈ ಮಹಾಸಮಸ್ಯೆಯನ್ನು ಬಿಡಿಸುವ ಪ್ರಯತ್ನವೇ ಆಗಿದೆ ಎಂದರೆ ತಪ್ಪಾಗಲಾರದು. ಪೌರ್ವಾತ್ಯ ಹಾಗೂ ಪಾಶ್ಚಾತ್ಯ ಮಹರ್ಷಿಗಳೂ ಮತ್ತು ಮಹಾ ಮಹಾ ಮನೀಷಿಗಳೂ ತಮ್ಮ ತಮ್ಮ ರೀತಿಯಿಂದ, ಈ ಗಹನಪ್ರಶ್ನೆಗೆ ಉತ್ತರವನ್ನೂ ಸಮಾಧಾನವನ್ನೂ ಹೇಳಲು, ತಮ್ಮ ತಪಶ್ಶಕ್ತಿಯನ್ನೂ ಬುದ್ಧಿಯನ್ನೂ ಉಪಯೋಗಿಸಿದ್ದಾರೆ. ಆದರೂ ಇದು ಬಹಳ ಮಟ್ಟಿಗೆ ಲೋಕಕ್ಕೆ ವಿವಾದಾಸ್ಪದವಾದ ಸಮಸ್ಯೆ ಆಗಿಯೇ ಉಳಿದಿದೆ.

2. ಪ್ರಾರಬ್ಧ ಎಂದರೆ ಫಲವನ್ನು ಕೊಡುವದಕ್ಕೆ ಪ್ರಾರಂಭವಾಗಿರುವ ಪ್ರಬಲವಾದ ಕರ್ಮ. ನಮ್ಮ ಒಳಹೊರಗಿನ ಸೂಕ್ಷ್ಮವೂ ಸ್ಥೂಲವೂ ಆದ, ಎಲ್ಲಾ ಚಟುವಟಿಕೆಗಳೂ ಚಲನವಲನಗಳೂ ವ್ಯಾಪಾರಗಳೂ ಕರ್ಮವೇ ಆಗಿವೆ. ಮನಸ್ಸಿನ ಭಾವನೆ, ಕಲ್ಪನೆ, ಊಹನೆ, ಸ್ಮರಣೆ, ಮತ್ತು ಆಲೋಚನೆ, ವಿಚಾರ, ವಿವೇಕ ಇತ್ಯಾದಿಗಳೆಲ್ಲಾ ಮಾನಸಕರ್ಮ. ಭಾಷಣ, ಸಂಭಾಷಣ, ವಾಚನ, ಭಜನ, ಕೀರ್ತನ ಮೊದಲಾದ ವಾಗಿಂದ್ರಿಯವ್ಯಾಪಾರಗಳೆಲ್ಲ ವಾಚಿಕಕರ್ಮ. ದೇಹೇಂದ್ರಿಯಗಳಿಂದ ಮಾಡುವ ವ್ಯವಹಾರವೆಲ್ಲಾ ಕಾಯಿಕಕರ್ಮ. ಮಾತಿನಿಂದಲೂ ಮೈಯಿಂದಲೂ ಮಾಡುವ ಕರ್ಮಗಳಿಗೆಲ್ಲಾ ಮನಸ್ಸಿನ ಕರ್ಮವೇ ಕಾರಣ. ಈ ಕರ್ಮಗಳಲ್ಲಿ ಒಳ್ಳೆಯದು–ಕೆಟ್ಟದ್ದು ; ಪುಣ್ಯ–ಪಾಪ ; ಶುಭ–ಅಶುಭ ; ಧರ್ಮ–ಅಧರ್ಮ ; ಶಾಸ್ತ್ರೀಯ–ಅಶಾಸ್ತ್ರೀಯ, ನ್ಯಾಯ–ಅನ್ಯಾಯ ಎಂಬ ಎರಡು ಬಗೆಗಳಿವೆ. ಪ್ರತಿಯೊಂದು ಕರ್ಮಕ್ಕೂ ನಿಶ್ಚಿತವಾದ ಫಲವಿದೆ. ಒಳ್ಳೆಯ ಕರ್ಮಕ್ಕೆ ಒಳ್ಳೆಯ ಫಲ, ಕೆಟ್ಟ ಕರ್ಮಕ್ಕೆ ಕೆಟ್ಟ ಫಲ ಎಂಬ ಬದಲಾಗದಿರುವ ವ್ಯವಸ್ಥೆ ಇದೆ. ಬೇವಿನ ಬೀಜವನ್ನು ಬಿತ್ತಿದರೆ ಬೇವಿನಮರವೇ ಬೆಳೆದು ಬೇವಿನ ಫಲವನ್ನೇ ಕೊಡುತ್ತದೆ ; ಮಾವಿನ ಬೀಜವನ್ನು ಬಿತ್ತಿದರೆ ಮಾವಿನ ಮರವೇ ಬೆಳೆದು ಮಾವಿನ ಫಲವನ್ನೇ ಕೊಡುತ್ತದೆ. ನರಿಯ ಹೊಟ್ಟೆಯಿಂದ ನರಿಯೇ ಹುಟ್ಟುತ್ತದೆ ; ಸಿಂಹದ ಹೊಟ್ಟೆಯಿಂದ ಸಿಂಹವೇ ಹುಟ್ಟುತ್ತದೆ. ಸಾಮಾನ್ಯವಾಗಿ ಇದು ಎಂದೂ ವ್ಯತ್ಯಾಸ ಹೊಂದದಿರುವ ವಿಶ್ವನಿಯಮ !

3. ಭೌತಿಕವಿಜ್ಞಾನದೃಷ್ಟಿಯಿಂದ ನೋಡಿದರೆ, ಈ ಪ್ರಪಂಚದಲ್ಲಿ ಭೌತಿಕ ವಸ್ತು (Matter) ಮತ್ತು ಶಕ್ತಿ (Energy) ಎಂಬ ಎರಡೇ ಭಾಗಗಳಿವೆ. ಇವಾದರೂ ತೀರಾ ಬೇರೆಬೇರೆಯಾಗಿ ಸ್ವತಂತ್ರವಾಗಿರುವ ಎರಡು ಪದಾರ್ಥಗಳಲ್ಲ. ವಸ್ತು ವಿರಳೀಕರಣ (Rarified Matter) ಆದರೆ ಶಕ್ತಿಯಾಗಿಯೂ ಶಕ್ತಿ ಘನೀಭೂತ (Solidified) ಆದರೆ ವಸ್ತುವಾಗಿಯೂ ತೋರುತ್ತದೆ. ಸೂಕ್ಷ್ಮ ದೃಷ್ಟಿಯಿಂದ ನೋಡಿದರೆ ವಸ್ತುವೆಲ್ಲಾ ಶಕ್ತಿಯೇ ಆಗಿದೆ. ಏಕೆಂದರೆ ಯಾವ ವಸ್ತುವಾದರೂ ಅದರ ಪರಮಾಣುಗಳಿಂದಲೇ ರಚನೆಯಾಗಿದೆ. ಪರಮಾಣು ಗಳೊಳಗೆ ಧನವಿದ್ಯುತ್‌ಕಣಗಳಾದ ಪ್ರೊಟಾನ್‌ಗಳ ಕೇಂದ್ರದ ಸುತ್ತಲೂ-ಅಷ್ಟೇ ಸಂಖ್ಯೆಯ -ಋಣವಿದ್ಯುತ್‌ಕಣಗಳಾದ ಎಲೆಕ್ಟ್ರಾನ್‌ಗಳು ಅತ್ಯಂತ ವೇಗದಿಂದ (ಒಂದು ಸೆಕೆಂಡಿಗೆ 1400 ಮೈಲಿಗಳಂತೆ) ಸಂಚರಿಸುತ್ತಾ ಸೂಕ್ಷ್ಮವಾದ ಸೌರ ವ್ಯೂಹದಂತಿದೆ. ಪರಮಾಣುವಿನಲ್ಲಿ 92 ಎಲೆಕ್ಟ್ರಾನುಗಳೂ 92 ಪ್ರೊಟಾನು ಗಳೂ 146 ನ್ಯೂಟ್ರಾನುಗಳೂ ಮಾತ್ರ ಇವೆ. ಇವು ವಿದ್ಯುಚ್ಛಕ್ತಿಯ ಋಣಧನ ಕಣಗಳು. ಪರಮಾಣುಗಳೊಡನೆ ಹೋಲಿಸಿದರೆ ಅವುಗಳಲ್ಲಿರುವ ಎಲೆಕ್ಟ್ರಾನ್, ಪ್ರೊಟಾನ್, ನ್ಯೂಟ್ರಾನ್‌ಗಳ ಒಟ್ಟು ಗಾತ್ರವು, ಅವುಗಳ ಒಂದುಸಹಸ್ರ ಕೋಟ್ಯಂಶವೂ ಇಲ್ಲ. ಈ ಅತ್ಯಲ್ಪಭಾಗವನ್ನು ಬಿಟ್ಟರೆ ಪರಮಾಣುಗಳು ಬರಿಯ ಟೊಳ್ಳು, ಒಳಗೆ ಶುದ್ಧ ಶೂನ್ಯ. ಆದರೆ ಪರಮಾಣುವಿನಲ್ಲಿ ಅಪಾರಶಕ್ತಿಯಿದೆ. ಋಣವಿದ್ಯುತ್‌ಕಣಗಳು ಕೇವಲ ತರಂಗರೂಪಗಳಾಗಿವೆ. ಅಂತು ಪರಮಾಣು ವಿನಲ್ಲಿರುವ ವಿದ್ಯುತ್‌ಕಣಗಳ ಸಂಖ್ಯೆಯೂ ವೇಗವೂ ಸಾಮಾನ್ಯವಾಗಿ ನಿರ್ದಿಷ್ಟ ವಾಗಿವೆ ಎಂದು ವಿಜ್ಞಾನಿಗಳು ಹೇಳುತ್ತಾರೆ. ಹೀಗೆಯೇ ಸೌರವ್ಯೂಹದಲ್ಲಿರುವ ನಮ್ಮ ಭೂಮಿಯೇ ಮೊದಲಾದ ಎಲ್ಲಾ ಗ್ರಹ-ನಕ್ಷತ್ರಗಳ ಸಂಚಲನವೇಗವೂ ಪರಸ್ಪರ ದೂರವೂ ಪೂರಾ ನಿಷ್ಕೃಷ್ಟವಾಗಿವೆ. ಆದ್ದರಿಂದಲೇ ಭಚಕ್ರದ (ರಾಶಿ ಚಕ್ರದ) ಯಾವ ರಾಶಿಯ ಯಾವ ನಕ್ಷತ್ರಪಾದದಲ್ಲಿ ಯಾವ ಗ್ರಹಗಳು ಯಾವ ದಿನ, ಎಷ್ಟು ಹೊತ್ತಿಗೆ ಸೇರುತ್ತವೆ, ಎಂಬದನ್ನೂ ಸೂರ್ಯಗ್ರಹಣ ಅಥವಾ ಚಂದ್ರಗ್ರಹಣವು ಯಾವ ದೇಶದಲ್ಲಿ, ಯಾವ ಊರಿನಲ್ಲಿ, ಯಾವ ದಿನ, ಎಷ್ಟು ಗಂಟೆ-ನಿಮಿಷಕ್ಕೆ ಎಷ್ಟು ಭಾಗ, ಯಾವ ದಿಕ್ಕಿನಿಂದ ಹಿಡಿದಂತೆ ಕಂಡು, ಎಷ್ಟು ಗಂಟೆ- ನಿಮಿಷಕ್ಕೆ ಬಿಡುತ್ತದೆ- ಎಂಬಿವನ್ನೂ ಅನೇಕ ವರ್ಷಗಳ ಮುಂಚೆಯೇ ಜ್ಯೋತಿಷ್ಯಶಾಸ್ತ್ರದಲ್ಲಿ ಪರಿಣತರಾದವರು ಚಾಚೂತಪ್ಪದಂತೆ ಕರಾರುವಾಕ್ಕಾಗಿ ಹೇಳುತ್ತಿದ್ದರು, ಹೇಳುತ್ತಾರೆ.

4. ಎರಡು ಭಾಗ ಜಲಜನಕದೊಡನೆ ಒಂದು ಭಾಗ ಆಮ್ಲಜನಕದ ಸಂಯೋಗವಾದರೆ ನೀರು ಉಂಟಾಗುವದೆಂಬುದು ಸರ್ವಲೋಕಪ್ರತ್ಯಕ್ಷವಾಗಿದೆ.

ಪ್ರಕಾಶ ಮತ್ತು ವಿದ್ಯುತ್ ಶಕ್ತಿಗಳ ಪ್ರಸರಣವೇಗ (ಒಂದುಸೆಕೆಂಡಿಗೆ 186000 ಮೈಲಿಗಳು), ಭೂಮಿ ಮೊದಲಾದ ಗ್ರಹಗಳ ಗುರುತ್ವಾಕರ್ಷಣ ಶಕ್ತಿಯ ಪ್ರಭಾವ ಇತ್ಯಾದಿ ನೈಸರ್ಗಿಕನಿಯಮಗಳು ಗಣಿತಶಾಸ್ತ್ರದ ನಿಯಮ ಗಳಂತೆ (4x3=12 ಎಂಬಂತೆ) ನಿಶ್ಚಿತವಾಗಿಯೂ ನಿಖರವಾಗಿಯೂ ಇರುವದ ರಿಂದಲೇ ವಿಜ್ಞಾನಿಯು ಬಾಹ್ಯಾಕಾಶನೌಕೆಯಲ್ಲಿ ಚಂದ್ರಗ್ರಹಕ್ಕೆ ಹೋಗುವದು ಸಾಧ್ಯವಾಗಿದೆ. ಈ ಪ್ರಕಾರ, ಈ ಸೃಷ್ಟಿಯಲ್ಲಿ ನೈಸರ್ಗಿಕನಿಯಮಶೀಲತೆಯು ಇಷ್ಟು ಕಠೋರವಾಗಿರುವದರಿಂದಲೇ ಮನುಷ್ಯನ ಜೀವಿತದ ಆಗುಹೋಗುಗಳೂ ಕಠೋರವಾದ ಕಾರ್ಯ- ಕಾರಣ ನಿಯಮಗಳಿಗೆ ಒಳಪಟ್ಟು (ಹಿಂದಿನ ಜನ್ಮ-ಕರ್ಮಗಳ ಫಲವಾಗಿ) ಮೊದಲೇ ನಿಶ್ಚಿತವಾಗಿವೆ ಎಂದು ಪ್ರಾರಬ್ಧವಾದಿಗಳು ಹೇಳುತ್ತಾರೆ. ಅಂದರೆ ನಾನು ಯಾವ ದೇಶದಲ್ಲಿ, ಯಾವ ಊರಲ್ಲಿ, ಯಾವ ತಂದೆ-ತಾಯಿಗಳಿಗೆ ಎಂದು, ಎಷ್ಟು ಗಂಟೆ-ನಿಮಿಷಕ್ಕೆ ಮಗನಾಗಿ (ಮಗಳಾಗಿ) ಹುಟ್ಟಬೇಕು, ಎಷ್ಟು ಕಾಲ ಬದುಕಬೇಕು, ಕುರೂಪಿಯಾಗಿಯೋ ಸುರೂಪಿ ಯಾಗಿಯೋ ದುರ್ಬಲನಾಗಿಯೋ ಸಬಲನಾಗಿಯೋ ರೋಗಿಯಾಗಿಯೋ ಆರೋಗ್ಯವಂತನಾಗಿಯೋ ಇರಬೇಕು, ಯಾವ ವಿದ್ಯೆಯನ್ನು ಎಷ್ಟು ಅಭ್ಯಾಸ ಮಾಡಬೇಕು, ಯಾವ ಉದ್ಯೋಗದಿಂದ ಹೇಗೆ, ಎಷ್ಟು ಧನಸಂಪಾದನೆ ಮಾಡ ಬೇಕು, ಯಾವ ಕನ್ಯೆಯನ್ನು ಯಾವಾಗ ಲಗ್ನವಾಗಬೇಕು; ಎಷ್ಟು ಮಕ್ಕಳಾಗ ಬೇಕು, ಅಥವಾ ಆಗಬಾರದು, ಎಂದು-ಯಾರಿಂದ-ಹೇಗೆ ಇಷ್ಟವನ್ನೋ ಅನಿಷ್ಟ ವನ್ನೋ, ಕಷ್ಟವನ್ನೋ ಸುಖವನ್ನೋ, ಲಾಭವನ್ನೋ ನಷ್ಟವನ್ನೋ, ಮಾನ ವನ್ನೋ ಅಪಮಾನವನ್ನೋ ಪಡೆಯಬೇಕು, ಎಂದು ಸಾಯಬೇಕು-ಎಂಬೀ ಜೀವ ನದ ಸಾವಿರಾರು ಮುಖ್ಯವಿವರಗಳೆಲ್ಲಾ (ನನ್ನ ಹಿಂದಿನ ಜನ್ಮ-ಕರ್ಮಗಳ ಫಲ ವಾಗಿ) ಮೊದಲೇ ನಿರ್ಣಯವಾಗಿದೆಯೆಂದೂ ಎಷ್ಟು ಪ್ರಯತ್ನಪಟ್ಟರೂ ಇವು ಗಳನ್ನು ಬದಲಾಯಿಸುವದೂ ತಪ್ಪಿಸಿಕೊಳ್ಳುವದೂ ಸಾಧ್ಯವಿಲ್ಲವೆಂದೂ ಪ್ರಾರಬ್ಧ ವಾದದ ಸಿದ್ಧಾಂತವಾಗಿದೆ.

5. ಒಂದು ವ್ಯಕ್ತಿಯ ಜನ್ಮಕಾಲದಲ್ಲಿ ಇರುವ ಗ್ರಹಗಳ ಸ್ಥಿತಿಯನ್ನು ಆಧರಿಸಿ ಜ್ಯೋತಿಷ್ಕರು ಬರೆಯುವ (ಜಾತಕ) ಕುಂಡಲಿಯಲ್ಲಿರುವ "**ಪದವೀ ಪೂರ್ವಪುಣ್ಯಾನಾಂ ಲಿಖ್ಯತೇ ಜನ್ಮಪತ್ರಿಕಾ ।**" ಎಂಬ ವಾಕ್ಯದಿಂದಲೂ ಅವರ ಭವಿಷ್ಯಕಥನದಿಂದಲೂ ಪ್ರಾರಬ್ಧಕರ್ಮದ ಪ್ರಾಬಲ್ಯವೇ ಸಿದ್ಧವಾಗುತ್ತದೆ. ನೂರಾರು ವರ್ಷಗಳ ಹಿಂದೆಯೇ ಬರೆದಿಟ್ಟಿರುವ ಕೆಲವು ನಾಡೀಗ್ರಂಥಗಳು ಪರ-ಮಾಶ್ಚರ್ಯಕರವಾಗಿವೆ. ಯಾವದಾದರೊಂದು ಪ್ರಸಿದ್ಧ ನಾಡೀಗ್ರಂಥದಲ್ಲಿ ನಮ್ಮ ಜಾತಕವು ಲಭಿಸಿದರೆ, ಅದರಲ್ಲಿ ಜಾತಕನ (ಜಾತಕಳ) ಹೆಸರು, ತಂದೆ- ತಾಯಿ ಮೊದಲಾದವರ ಹೆಸರುಗಳು ಜೀವನದ ಮುಖ್ಯ ಘಟನೆಗಳು ಅವುಗಳ ಸರಿಯಾದ

ಕಾಲಗಳು, ಇತ್ಯಾದಿ ಅನೇಕವಿವರಗಳನ್ನು ಸ್ವಲ್ಪವೂ ತಪ್ಪಿಲ್ಲದಂತೆ ಆ ಜ್ಯೋತಿಷ್ಕರು ನಿರೂಪಿಸಿರುವದನ್ನು ನೋಡಿದರೆ ಪ್ರಾರಬ್ಧಕರ್ಮದ ಮಹಿಮೆಯು ಮನವರಿಕೆಯಾಗುತ್ತದೆ.

6. ಇನ್ನು ವೇದಾಂತವಿಜ್ಞಾನದ ದೃಷ್ಟಿಯಿಂದ ವಿಚಾರಮಾಡಬಹುದು. ವಿಶ್ವಸೃಷ್ಟಿಯೇ ಮಹಾಕರ್ಮ. ಕಾರ್ಯರೂಪವಾದ ವ್ಯಾಕೃತನಾಮರೂಪಾತ್ಮಕವಿಶ್ವಕ್ಕೆ ಅವ್ಯಾಕೃತ-ಮಾಯಾಶಕ್ತಿಯೇ ಕಾರಣ. ಅವಿದ್ಯಾಕಲ್ಪಿತವಾದ ವ್ಯಾಕೃತ- ಅವ್ಯಾಕೃತ ಜಗತ್ತಿಗೆ ಆತ್ಮ (ಪರಮಾತ್ಮ) ಚೈತನ್ಯವೇ ಮೂಲ ಕಾರಣ. ಜಗತ್‌ಪ್ರಳಯಕಾಲದಲ್ಲಿ ಸಮಸ್ತಜೀವರ ಕರ್ಮಗಳೂ ವಿಶ್ವಾತ್ಮನ ಅವ್ಯಾಕೃತರೂಪದಲ್ಲಿ ವಾಸನಾಬೀಜವಾಗಿ ಅಡಗಿರುತ್ತವೆ. ಹಿರಣ್ಯಗರ್ಭಬ್ರಹ್ಮನಿಂದ ಪುನಃ ಸೃಷ್ಟಿಯಾಗುವ ಕಾಲದಲ್ಲಿ, ಬೇರೆ ಬೇರೆ ಜೀವರು ತಮ್ಮ ತಮ್ಮ ವಾಸನೆಗಳಿಗೆ (ಕರ್ಮಗಳಿಗೆ) ಅನುಗುಣವಾಗಿ ಬೇರೆಬೇರೆ ದೇಶ-ಕಾಲ-ಸನ್ನಿವೇಶಗಳಲ್ಲಿ ಜನ್ಮಗಳನ್ನು ಪಡೆಯುತ್ತಾರೆ.

7. ತ್ರಿಗುಣಾತ್ಮಕವಾದ ಪ್ರಕೃತಿಯಿಂದ ಸಮಷ್ಟಿಮನಸ್ಸಾದ ಮಹತ್ ತತ್ತ್ವವೂ ಅದರಿಂದ ಅಹಂಕಾರವೂ, ತ್ರಿಗುಣಾತ್ಮಕ ಅಹಂಕಾರದಿಂದ ಶಬ್ದಸ್ಪರ್ಶಾದಿಪಂಚತನ್ಮಾತ್ರೆಗಳೂ ಅವುಗಳಿಂದ ಸ್ಥೂಲಭೌತಿಕಸೃಷ್ಟಿಯೂ ಸೂಕ್ಷ್ಮ ಜೀವಸೃಷ್ಟಿಯೂ ಸಮಸ್ತವೂ ಕಾರಣ-ಕಾರ್ಯ ನಿಯಮಾನುಸಾರವಾಗಿ ವ್ಯವಸ್ಥಿತವಾಗಿ ವಿಕಾಸಹೊಂದಿವೆ.

8. ಜೀವರ ಜನ್ಮಕ್ಕೆ ಕಾರಣವಾದ ವಾಸನಾರೂಪಕರ್ಮಕ್ಕೆ ಸಂಚಿತ ಕರ್ಮವೆಂದು ಹೆಸರು. ಜೀವನ ಹಿಂದಿನ ಅನೇಕ ಜನ್ಮಗಳ ಸಂಚಿತ (ಸಂಗ್ರಹ) ವಾದ ಅನಂತವಾಸನೆಗಳಲ್ಲಿ ಫಲವನ್ನು ಕೊಡುವದಕ್ಕೆ ಯಾವ ವಾಸನೆಗಳು ತೀವ್ರವಾಗಿ ಪರಿಪಕ್ವವಾಗಿವೆಯೋ ಅವುಗಳನ್ನು ಅನುಭವಿಸುವದಕ್ಕಾಗಿಯೇ ಈ ದೇಹವು ಬರುವದರಿಂದ, ಈ ದೇಹವೇ ಪ್ರಾರಬ್ಧ. ಈ ದೇಹದಿಂದ ಮಾಡುವ ಪುಣ್ಯ-ಪಾಪಕರ್ಮಗಳೂ ಅನುಭವಿಸುವ ಸುಖ- ದುಃಖ ಫಲಗಳೂ ಇವುಗಳಿಗೆ ಪ್ರೇರಕವಾಗಿ ಮನಸ್ಸಿನ ಒಳಗಿರುವ ವಾಸನೆಗಳೂ ಪ್ರಾರಬ್ಧಕರ್ಮದೊಳಗೇ ಸೇರಿವೆ. 'ಬುದ್ಧಿಃ ಕರ್ಮಾನುಸಾರಿಣೀ' ಈಗಿನ ಬುದ್ಧಿವೃತ್ತಿಗಳೂ ನಮ್ಮ ಹಿಂದಿನ ಕರ್ಮಗಳಿಗೆ ಅನುಸಾರವಾಗಿಯೇ ಪ್ರೇರಣೆಯಾಗುತ್ತವೆ. ಆದ್ದರಿಂದ, ಆ ಪ್ರಬಲಶಕ್ತಿಪ್ರವಾಹದ ದಿಶೆಯನ್ನು ಈಗ ಬದಲಾಯಿಸುವದಕ್ಕೆ, ನಮಗಿರುವ ಇಚ್ಛಾಸ್ವಾತಂತ್ರ್ಯ, ಬಹಳ ಪರಿಮಿತವಾದುದು. ಕರ್ಮವೆಂದರೆ, ಮನಸ್ಸಿನ ಉದ್ದೇಶಪೂರ್ವಕವಾದ ಕರ್ಮ. (Motivated action.)

9. ನಮ್ಮ ಮನಸ್ಸು ಒಂದು ಸರೋವರದಂತೆ ಇದೆ. ಸರೋವರದ ನೀರಿಗೆ ನಾವು ಜೋರಾಗಿ ಒಂದು ಕಲ್ಲನ್ನು ಹೊಡೆದರೆ, ಅಷ್ಟೇ ಜೋರಾಗಿ ನೀರು ಅದರ ವಿರುದ್ಧ ದಿಶೆಯಲ್ಲಿ ಹಾರುತ್ತದೆ. ಅಲ್ಲಿ ಒಂದು ತರಂಗವು ಹುಟ್ಟಿ, ಅದರಿಂದ ಇನ್ನೊಂದು ತರಂಗವೂ, ಅದರಿಂದ ಮತ್ತೊಂದು ತರಂಗವೂ ಉತ್ಪನ್ನವಾಗಿ ಸರೋವರದ ತುಂಬಾ ನೀರಿನ ಮೇಲ್ಮೈಯನ್ನೆಲ್ಲಾ ತರಂಗಗಳು ಮುಚ್ಚಿಬಿಡುತ್ತವೆ. ಕೊನೆಕೊನೆಯ ತೆರೆಗಳು ಹೆಚ್ಚುಹೆಚ್ಚು ಸೂಕ್ಷ್ಮವಾಗಿರುತ್ತವೆ. ಕಿವಿಯಿಂದ ನಾವು ಒಂದು ಕೆಟ್ಟ ಮಾತನ್ನು ಕೇಳಿದರೆ, ಅಥವಾ ಕಣ್ಣಿನಿಂದ ಒಂದು ಕೆಟ್ಟ ವಿಷಯವನ್ನು ಕಂಡರೆ, ನಮ್ಮ ಮನಸ್ಸಿನ ಸ್ಥಿತಿಯೂ ಹೀಗೇ ಆಗುತ್ತದೆ. ಆದರಲ್ಲಿ ಏಳುವ ತೆರೆಗಳಿಗೆ ಮಿತಿಯೇ ಇಲ್ಲ. ಆ ತೆರೆಗಳು ಅಡಗಿದ ಮೇಲೆ ನೀರಿನ ತೆರೆಗಳಂತೆ ಆ ಮನೋವೃತ್ತಿಗಳು ಮತ್ತೆಂದೂ ಏಳದಂತೆ ಮುಗಿದುಹೋಗುವದಿಲ್ಲ. ಪ್ರತಿಯೊಂದು ಮನೋವೃತ್ತಿಯೂ (ಒಳ್ಳೆಯದಾಗಲೀ ಕೆಟ್ಟದಾಗಲೀ) ತೋರಿ ಅಡಗಿದ ಮೇಲೆ, ಮನಸ್ಸಿನ ಒಳ ಪದರಿನಲ್ಲಿ, ತಳದಲ್ಲಿ ಅದು ಸಂಸ್ಕಾರ ರೂಪವಾಗಿ ಉಳಿದುಬಿಡುತ್ತದೆ. ಹೀಗೆ ಸಹಸ್ರ-ಸಹಸ್ರ ಸಂಸ್ಕಾರಗಳು ಮನಸ್ಸಿನ ತಳದಲ್ಲಿ ಸೂಕ್ಷ್ಮವಾಗಿ ಸಂಚಿತವಾಗಿ ಗುಪ್ತವೂ ಸುಪ್ತವೂ ಆಗಿರುತ್ತವೆ. ಹರಿಯದೆ ಮಡುವಾಗಿ ನಿಂತು ಮಲೆತ ನೀರಿನಿಂದ ಆಗಾಗ ಗುಳ್ಳೆಗಳು ಏಳುತ್ತಿರುವಂತೆ, ಕೆಲವು ಸಂಸ್ಕಾರಗಳು ಮೇಲೆದ್ದು ನೆನಪಿಗೂ ಕನಸಿಗೂ ಬರುವದುಂಟು. ತೀವ್ರವಾದ ಕೆಲವು ಸಂಸ್ಕಾರಗಳು ಉತ್ತೇಜಕಸನ್ನಿವೇಶಗಳ ಪ್ರೇರಣೆಯಿಂದ ಪರಿಪುಷ್ಟಿಗೊಂಡು ವಾಸನಾರೂಪವಾಗಿ ಹೊರಹೊಮ್ಮುತ್ತವೆ. ಒಂದು ವ್ಯಕ್ತಿಯ ಗುಣ-ಸ್ವಭಾವ-ಶೀಲಗಳೆಂದರೆ, ಆ ಮನಸ್ಸಿನ ಸಂಸ್ಕಾರ- ವಾಸನಾ- ವೃತ್ತಿಗಳ ಸಂಕಲನವೇ ಆಗಿವೆ.

10. ಆಂಗ್ಲರಲ್ಲಿ ಒಂದು ಸೂಕ್ತಿ ಇದೆ :

"Sow a thought, reap an act ; Sow an act, reap a habit ; Sow a habit, reap a character ; Sow a character, reap a personality."

"ಒಂದು ವಿಶಿಷ್ಟ ಆಲೋಚನಾಬೀಜವನ್ನು ಬಿತ್ತಿದರೆ, ಅದಕ್ಕೆ ಸರಿಯಾದ ಮಾತು-ಕೃತಿಗಳೇ ಫಲ ; ಒಳ್ಳೆಯ ಅಥವಾ ಕೆಟ್ಟ ಮಾತು-ಕೃತಿಗಳನ್ನೇ ಮತ್ತೆ ಮತ್ತೆ ಆವರ್ತನೆಮಾಡುವದರಿಂದ ಅವುಗಳ ಪ್ರಬಲವಾದ ರೂಢಿಯಾಗುತ್ತದೆ ; ಒಂದು ರೂಢಿಗೆ ತಕ್ಕ ಶೀಲವು ರೂಪುಗೊಳ್ಳುತ್ತದೆ ; ಶೀಲದಂತೆ ವ್ಯಕ್ತಿತ್ವವು ನಿರ್ಮಾಣವಾಗುತ್ತದೆ." ಆದ್ದರಿಂದ, ಸಂಸ್ಕಾರ-ವಾಸನಾ-ಭಾವನಾ (ಆಲೋಚನಾ) ವೃತ್ತಿಗಳ ಸಂಕುಲವೇ ನಮ್ಮ ವ್ಯಕ್ತಿತ್ವ. ಹೀಗೆ, ಕಾರಣ- ಕಾರ್ಯ

ಭಾವಗಳ ಭದ್ರವಾದ ಈ ಸರಪಳಿಯಲ್ಲಿ, ತೀವ್ರವಾದ (ಪುರುಷಪ್ರಯತ್ನದ) ಬದಲಾವಣೆಗೆ, ಯಾವ ಕೊಂಡಿಯಲ್ಲಿ ಎಷ್ಟು ಸ್ವಾತಂತ್ರ್ಯವಿದೆ-ಸಾಧ್ಯವಿದೆ, ಎಂಬುದನ್ನು ತಿಳಿಯುವದು ಕಷ್ಟ. ಪ್ರಾರಂಭದ ಮನೋವ್ಯಾಪಾರದಲ್ಲಿ ಸ್ವಾತಂತ್ರ್ಯವಿದೆ-ಎನ್ನುವದಾದರೆ, ಅನಾದ್ಯನಂತವಾದ ಸಂಸಾರದಲ್ಲಿ ಮೊದಲು ಯಾವದು, ಕೊನೆ ಯಾವದು ?

11. ಕರ್ಮಗಳಲ್ಲಿ ಸಂಚಿತ, ಪ್ರಾರಬ್ಧ, ಆಗಾಮಿ-ಎಂದು ಮೂರು ಬಗೆಗಳಿವೆ. ಇವುಗಳ ಸತ್ತ್ವವನ್ನೂ ಸಂಬಂಧವನ್ನೂ ಒಂದು ದೃಷ್ಟಾಂತದಿಂದ ತಿಳಿಯಬಹುದು. ಹಣ್ಣಿಗಾಗಿ ಸಾವಿರಾರು ಬಲಿತ ಮಾವಿನಕಾಯಿಗಳನ್ನು ಹುಲ್ಲಿನಲ್ಲಿ ಒತ್ತೆಹಾಕಿದಾಗ, ಎಲ್ಲವೂ ಒಮ್ಮೆಗೇ ಹಣ್ಣಾಗುವದಿಲ್ಲವೆಂಬುದು ಎಲ್ಲರಿಗೂ ತಿಳಿದ ವಿಷಯ. ಆಯಾ ದಿನವೇ ತಿನ್ನಬೇಕಾದಷ್ಟು ಚೆನ್ನಾಗಿ ಮಾಗಿದ ಹಣ್ಣುಗಳನ್ನು ಮೊದಲು ಚುನಾಯಿಸಿ ತೆಗೆಯುತ್ತೇವೆ. ಅನಂತರ ಮರುದಿನ, ಮೂರನೇ ದಿನ, ನಾಲ್ಕನೇ ದಿನ, ಹೀಗೆ ಕ್ರಮೇಣ ಪಕ್ವವಾಗುವ ಹಣ್ಣುಗಳನ್ನೆಲ್ಲಾ ಆಯಾ ದಿನವೇ ಆಯ್ಕೆಮಾಡಿ ತೆಗೆದು ಉಪಯೋಗಿಸುತ್ತೇವೆ. ಚೆನ್ನಾಗಿ ಕಳಿತ ಹಣ್ಣುಗಳನ್ನು ಆಯಾ ದಿನವೇ ಉಪಯೋಗಿಸದಿದ್ದರೆ ಕೊಳೆತುಹೋಗುತ್ತವೆ. ಭೋಗಮಾಡದಿದ್ದರೆ, ದಾನಮಾಡಬೇಕು ಇಲ್ಲವಾದರೆ ವಿಕ್ರಯಿಸಬೇಕು; ಹೀಗೆ ಮಾಡದಿದ್ದರೆ ಹಣ್ಣು ಹಾಳಾಗುತ್ತವೆ. ಹಣ್ಣಿಗಾಗಿಯೇ ಒತ್ತೆಯಿಟ್ಟಿರುವ ಸಾವಿರಾರು ಬಲಿತ ಮಾವಿನ ಕಾಯಿಗಳಂತೆ ಸಾವಿರಾರು ಜನ್ಮಗಳಿಂದ ಸಂಗ್ರಹವಾಗಿ ಬಂದಿರುವ ನಮ್ಮ ವಾಸನಾರೂಪ ಸಂಚಿತಕರ್ಮವಿದೆ. ಆಯಾ ದಿನವೇ ತಿಂದು ಮುಗಿಸುವದಕ್ಕಾಗಿ ತೆಗೆದಿಟ್ಟಿರುವ ಪಕ್ವಫಲಗಳಂತೆ ಪ್ರಾರಬ್ಧಕರ್ಮವಿದೆ. ಸಂಚಿತಕರ್ಮಗಳಲ್ಲಿ ಭೋಗಕೊಡುವದಕ್ಕಾಗಿ ದೇಹರೂಪದಿಂದ ಸಿದ್ಧವಾಗಿರುವ ಅತ್ಯಂತಪರಿಪಕ್ವಕರ್ಮವೇ ಪ್ರಾರಬ್ಧವೆನಿಸುತ್ತದೆ. ಮುಂದೆ ಫಲವನ್ನು ಕೊಡುವದಕ್ಕಾಗಿ ಕಾದಿರುವ ಕರ್ಮವೇ ಆಗಾಮಿ. ಪ್ರಾರಬ್ಧಫಲವನ್ನು ಭೋಗಿಸುವ ಕಾಲದಲ್ಲಿ ಮಾಡುತ್ತಿರುವ ಸಂಕಲ್ಪಪೂರ್ವಕ ಕರ್ಮವು ಪುನಃ ವಾಸನಾಶಕ್ತಿಯು ಸಂಚಿತದೊಳಗೇ ಸೇರುತ್ತದೆ.

12. ಪ್ರಾರಬ್ಧಭೋಗಕ್ಕೆ ಕಾರಣವಾದ ಸಂಚಿತವು ಅತ್ಯಂತ ಸೂಕ್ಷ್ಮ ಸಂಸ್ಕಾರರೂಪದಿಂದ ಮನಸ್ಸಿನ ಆಳದಲ್ಲಿ ಅಡಗಿ ಕಣ್ಣಿಗೆ ಕಾಣದೆ, ಊಹೆಗೂ ನಿಲುಕದೇ ಇರುವದರಿಂದ ಅದು ಅದೃಷ್ಟವೆನಿಸುತ್ತದೆ. ಒಂದೊಂದು ಸಂಸ್ಕಾರವೂ ಮಿದುಳಿನಲ್ಲಿ ಗೆರೆಯನ್ನು ಎಳೆದಂತೆ ಗುರುತುಮಾಡಿರುವದರಿಂದಲೂ ಮನಸ್ಸು ಗ್ರಾಮಫೋನಿನ ಸೂಜಿಯಂತೆ ಸ್ವಾಭಾವಿಕವಾಗಿ ಆ ಗೆರೆಗಳಲ್ಲಿಯೇ ಹರಿಯುವದರಿಂದಲೂ ಪ್ರಾರಬ್ಧಕರ್ಮಕ್ಕೆ ಹಣೆಯಬರಹವೆಂದೂ ಹೇಳುತ್ತಾರೆ. ಪ್ರಾರಬ್ಧಕರ್ಮದ ಫಲವನ್ನು ಅನುಭವಿಸಲೇಬೇಕಾಗಿರುವದರಿಂದ ಇದಕ್ಕೆ ವಿಧಿನಿಯಮ

ವೆಂದೂ ಹೆಸರಾಗಿದೆ. ಜಗತ್ತಿನ ಸಮುಸ್ತ ಜೀವಚೈತನ್ಯಕ್ಕೂ ಅದರ ವ್ಯಾಪಾರ ಗಳಿಗೂ ಸೂರ್ಯಚೈತನ್ಯವೇ ಕಾರಣವಾಗಿರುವಂತೆ ಜೀವರ ಒಳಹೊರಗಿನ ಎಲ್ಲಾ ಕರ್ಮಗಳಿಗೂ ಅವುಗಳ ಫಲಭೋಗಕ್ಕೂ ಪ್ರೇರಕವಾಗಿ ದೈವ (ಈಶ್ವರ) ಶಕ್ತಿಯೇ ಕಾರಣವಾಗಿರುವದರಿಂದ ಪ್ರಾರಬ್ಧಕ್ಕೆ "ದೈವ" ಎಂಬ ಪ್ರಸಿದ್ಧಿಯೂ ಇದೆ. ಇದನ್ನೇ ಇಂಗ್ಲಿಷ್‌ನಲ್ಲಿ (Fate) ಫೇಟ್ ಅಥವಾ (Destiny) ಡೆಸ್ಟಿನಿ ಎನ್ನು ತ್ತಾರೆ. ಇದಕ್ಕೆ ಪ್ರತಿಯೋಗಿಯಾದ ಪುರುಷಪ್ರಯತ್ನಕ್ಕೆ (Personal Effort) 'Free-Will' ಇಚ್ಛಾಸ್ವಾತಂತ್ರ್ಯ-ಎನ್ನುತ್ತಾರೆ.

13. ಪ್ರಾರಬ್ಧಶಕ್ತಿಯ ಪ್ರಾಬಲ್ಯವೇ ಪರಮಾಧಿಕವಾದುದು-ಎಂಬದಕ್ಕೆ ಕಾವ್ಯಗಳಲ್ಲಿಯೂ ನಾಟಕಗಳಲ್ಲಿಯೂ ಪುರಾಣಗಳಲ್ಲಿಯೂ ಅನೇಕ ಉದಾಹರಣೆ ಗಳು ಸಿಕ್ಕುತ್ತವೆ; ಭರ್ತೃಹರಿಕವಿಯು ಹೇಳುವದೇನೆಂದರೆ :

ಬ್ರಹ್ಮಾ ಯೇನ ಕುಲಾಲವನ್ನಿಯಮಿತೋ ಬ್ರಹ್ಮಾಂಡಭಾಂಡೋದರೇ
ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ
ರುದ್ರೋ ಯೇನ ಕಪಾಲಪಾಣಿಪುಟಕೇ ಭಿಕ್ಷಾಟನಂ ಕಾರಿತಃ
ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ ತಸ್ಮೈ ನಮಃ ಕರ್ಮಣೇ.

ಕರ್ಮಾಧೀನನಾಗಿಯೇ ಸೃಷ್ಟಿಕರ್ತ ಬ್ರಹ್ಮನು- ಕುಂಬಾರನು ಮಡಕೆ ಗಳನ್ನು ಮಾಡಿದಂತೆ- ಜೀವರನ್ನು ಸೃಷ್ಟಿಮಾಡುತ್ತಾನೆ. ವೈಕುಂಠಪತಿಯಾದ ವಿಷ್ಣುವು ಕೂಡ ಪ್ರಾರಬ್ಧಾಧೀನನಾಗಿಯೇ ಗಹನವಾದ ದಶಾವತಾರವೆಂಬುವ ಮಹಾಸಂಕಷ್ಟದಲ್ಲಿ ಎಸೆಯಲ್ಪಟ್ಟನು ; ಮಹೇಶ್ವರನಾದ ರುದ್ರನಾದರೂ ದೈವಾ ಧೀನನಾಗಿಯೇ ಬ್ರಹ್ಮಕಪಾಲದಲ್ಲಿ ಭಿಕ್ಷಾಟನೆ ಮಾಡುವಂತಾದನು ; ಮಹಾ ತೇಜಸ್ವಿಯಾದ ಸೂರ್ಯನು ಕೂಡ ವಿಧಿವಶನಾಗಿಯೇ ಬಿಡುವಿಲ್ಲದೆ ನಿತ್ಯವೂ ಅಂತರಿಕ್ಷದಲ್ಲಿ ಭ್ರ ಮಿ ಸು ವಂ ತಾ ದ ನು. ಆದ್ದರಿಂದ, "**ತಸ್ಮೈ ನಮಃ ಕರ್ಮಣೇ !**" (ನೀ. ಶ. -೯೩). ಅಸಾಧಾರಣಸಾಮರ್ಥ್ಯವುಳ್ಳ ಆ ಪ್ರಾರಬ್ಧಕರ್ಮಕ್ಕೆ ಅನಂತನಮಸ್ಕಾರಗಳು !

14. ವಿಧಿವಿಲಾಸವು ದುಷ್ಟರನ್ನು ಶಿಷ್ಟರನ್ನಾಗಿಯೂ ಶಿಷ್ಟರನ್ನು ದುಷ್ಟ ರನ್ನಾಗಿಯೂ ಮೂರ್ಖರನ್ನು ಪಂಡಿತರನ್ನಾಗಿಯೂ ಪಂಡಿತರನ್ನು ಮೂರ್ಖ ರನ್ನಾಗಿಯೂ ಶತ್ರುಗಳನ್ನು ಮಿತ್ರರನ್ನಾಗಿಯೂ ಮಿತ್ರರನ್ನು ಶತ್ರುಗಳನ್ನಾಗಿ ಯೂ ವಿಷವನ್ನು ಅಮೃತವನ್ನಾಗಿಯೂ ಅಮೃತವನ್ನು ವಿಷವನ್ನಾಗಿಯೂ ಮಾಡಬಲ್ಲದು. (ನೀ-೯೪).

15. ಇಂದ್ರನು ದೇವಾಧಿದೇವನಾದ ದೇವೇಂದ್ರ; ಬುದ್ಧಿಶಾಲಿಗಳಿಗೆಲ್ಲಾ ಅಧಿದೇವನಾದ ಬೃಹಸ್ಪತಿಯೇ ಅವನ ಮಂತ್ರಿ ; ಭಯಂಕರವಾದ ವಜ್ರಾಯುಧ ಉಳ್ಳ, ಐರಾವತವೇ ವಾಹನವುಳ್ಳ, ದೇವೇಂದ್ರನಿಗೆ ದೇವತೆಗಳೇ ಸೈನಿಕರು ಸ್ವರ್ಗವೇ ಅವನ ಭದ್ರವಾದ ದುರ್ಗ ; ಈ ಸಕಲಬಲಕ್ಕೂ ಕಲಶವಿಟ್ಟಂತೆ ಅವ ನಿಗೆ ಸಾಕ್ಷಾತ್ ಶ್ರೀಹರಿಯ ಅನುಗ್ರಹ ; ದೇವೇಂದ್ರನಿಗೆ ಇಷ್ಟೆಲ್ಲಾ ಆಶ್ಚರ್ಯ ಕರವಾದ ಶಕ್ತಿ ಇದ್ದರೂ ಅನೇಕ ಸಂದರ್ಭಗಳಲ್ಲಿ- ದೈವ ದುರ್ವಿಪಾಕದಿಂದ- ಅವನು ದೈತ್ಯರಿಂದ ಪರಾಜಿತನಾಗಬೇಕಾಯಿತು.

"ತದ್ ವ್ಯಕ್ತಂ ನನು ದೈವಮೇವ ಶರಣಂ ಧಿಗ್‌ಧಿಗ್ ವೃಥಾ
ಪೌರುಷಮ್ ॥ ನೀ-೮೨ ॥

ಆದ್ದರಿಂದ, "ಅದೃಷ್ಟ ಒಂದೇ ಸಕಲರಿಗೂ ರಕ್ಷಕವೆಂದು ನಿಶ್ಚಯವಾಗುತ್ತದೆ ಪೌರುಷವನ್ನೇ ನಂಬಿದ್ದರೆ ಪ್ರಯೋಜನವಿಲ್ಲ ; ಅದು ವ್ಯರ್ಥವೇ ಸರಿ."

16. **ರಾಮಾಯಣ :**

ಇನ್ನು ರಾಮಾಯಣವನ್ನು ತೆಗೆದುಕೊಳ್ಳೋಣ :

ಸಾಮ್ರಾಜ್ಯಪಟ್ಟಾಭಿಷಿಕ್ತನಾಗಬೇಕಾಗಿದ್ದ ಸಮಯದಲ್ಲಿ ಕೈಕೇಯಿಯು ಬೇಡಿದ ವರದಂತೆ ಶ್ರೀರಾಮಚಂದ್ರನು ಜಟಾಧಾರಿಯಾಗಿ, ನಾರುಬಟ್ಟೆಯನ್ನು ಉಟ್ಟು, ಹದಿನಾಲ್ಕು ವರ್ಷಗಳು ದಂಡಕಾರಣ್ಯದಲ್ಲಿ ವಾಸಮಾಡಲು ತೆರಳಬೇಕಾ ಯಿತು. ವಿಧಿವಿಲಾಸದ ವೈಪರೀತ್ಯಕ್ಕೆ ಪ್ರಪಂಚದಲ್ಲಿ ಇದಕ್ಕಿಂತಲೂ ಹೆಚ್ಚಿನ ನಿದರ್ಶನ ಯಾವದೂ ಇರಲಾರದು. ಆ ಸಂಕಟಸಂದರ್ಭದಲ್ಲಿ ಶ್ರೀರಾಮನು ಯಾವಾಗಲೂ ಪೌರುಷವಾದಿಯಾದ ಲಕ್ಷ್ಮಣನಿಗೆ ಹೀಗೆ ಹೇಳುತ್ತಾನೆ :

"ಲಕ್ಷ್ಮಣ ! ನನ್ನನ್ನು ವನವಾಸಕ್ಕೆ ಕಳಿಸಲು ವಿಧಿಯೇ ಸಂಕಲ್ಪಿಸಿದೆ ಎಂದು ತಿಳಿ ; ಕೈಗೆ ಬಂದ ರಾಜ್ಯವನ್ನು ಪುನಃ ಕಿತ್ತುಕೊಳ್ಳಲು ವಿಧಿಯೇ ಕಾರಣ. ವಿಧಿಯ ಪ್ರೇರಣೆಯಿಂದ ಕೈಕೇಯಿಗೆ ದೈವಿಕವಾಗಿ ಇಂಥಾ ಭಾವನೆ ಬಂದಿತು ; ಇಲ್ಲದಿದ್ದರೆ ನನಗೆ ತೊಂದರೆಕೊಡಲು ಅವಳಿಗೆ ಬುದ್ಧಿಯೇಕೆ ಬರು ತ್ತಿತ್ತು? ನನ್ನನ್ನೂ ಭರತನನ್ನೂ ಸಮಾನಪ್ರೇಮದಿಂದ ಕಾಣುತ್ತಿದ್ದ ಕೈಕೇಯಿ ನನ್ನ ಪಟ್ಟಾಭಿಷೇಕವನ್ನು ನಿಲ್ಲಿಸಬೇಕೆಂದೂ ನಾನು ಕಾಡಿಗೆ ಹೋಗಬೇಕೆಂದೂ ಆಡಬಾರದ ಉಗ್ರವಾದ ಮಾತುಗಳನ್ನಾಡುವದಕ್ಕೆ **ದೈವವೇ** ಕಾರಣವಲ್ಲದೆ ಇನ್ನೊಂದು ಕಾರಣವನ್ನು ನಾನು ಸಮರ್ಥಿಸಲಾರೆ............**ದೈವದ ಪ್ರಭಾವ** ಅಚಿಂತ್ಯವಾದದು. **"ಯದಚಿಂತ್ಯಂ ತು ತದ್ದೈವಂ"**......(ಸ. ೨೨-೨೦) ಸಮಸ್ತ ಜಂತುಗಳಲ್ಲಿಯೂ ದೈವದ ಗತಿಗೆ ತಡೆಯಿಲ್ಲ........ಲಕ್ಷ್ಮಣ! **ಅದೃಷ್ಟ ದೊಡನೆ** ಯಾವ ಪುರುಷನು ಹೋರಾಡಿಯಾನು? ಫಲದಿಂದ ಮಾತ್ರ ಅದನ್ನು

ಊಹಿಸಿ ನಿಶ್ಚಯಿಸಬಹುದೇ ಹೊರತು ಅದೃಷ್ಟವು ನಮಗೆ ಗೋಚರಿಸುವದಿಲ್ಲ. ....ಉಗ್ರವಾದ ತಪಸ್ಸನ್ನಾಚರಿಸುವ ಋಷಿಗಳೂ ಸಹ ದೈವಕ್ಕೆ ಅಧೀನರಾಗಿ ಕಠೋರನಿಯಮಗಳನ್ನು ಬದಿಗೊತ್ತಿ ಕಾಮಕ್ರೋಧಗಳಿಗೆ ವಶರಾಗುತ್ತಾರೆ.

ಋಷಯೋಽಪ್ಯುಗ್ರತಪಸೋ ದೈವೇನಾಭಿಪ್ರಪೀಡಿತಾಃ ।
ಉತ್ಸೃಜ್ಯ ನಿಯಮಾಂಸ್ತೀವ್ರಾನ್ ಭ್ರಶ್ಯಂತೇ ಕಾಮಮನ್ಯುಭಿಃ ॥
ಅಸಂಕಲ್ಪಿತಮೇವೇಹ ಯದಕಸ್ಮಾತ್ ಪ್ರವರ್ತತೇ । (ಸ. ೨೨-೨೩)
ನಿವರ್ತ್ಯಾರಂಭಮಾರಬ್ಧಂ ನನು ದೈವಸ್ಯ ಕರ್ಮ ತತ್ ॥ (೨೪)

17. "............ಲೋಕದಲ್ಲಿ ಆರಂಭಿಸಿದ ಕಾರ್ಯವು ಹಠಾತ್ತನೆ ನಿಂತು ಹೋಗಿ ಊಹಾತೀತವಾದ ಇನ್ನೊಂದು ಘಟನೆಯು ಸಂಭವಿಸಿದರೆ ಅದು ದೈವದ ಕೆಲಸವಲ್ಲದೆ ಇನ್ನೇನು ?"............

18. ಶ್ರೀರಾಮನ ಈ ದೈವವಾದವನ್ನು ಲಕ್ಷ್ಮಣನು ಎಷ್ಟುಮಾತ್ರವೂ ಒಪ್ಪದೆ ಉಗ್ರವಾಗಿ ಖಂಡಿಸುತ್ತಾನೆ :

ವಿಕ್ಲಬೋ ವೀರ್ಯಹೀನೋ ಯಃ ಸ ದೈವಮನುವರ್ತತೇ ।
ವೀರಾಃ ಸಂಭಾವಿತಾತ್ಮಾನೋ ನ ದೈವಂ ಪರ್ಯುಪಾಸತೇ॥ ೨೩-೧೭
ದೈವಂ ಪುರುಷಕಾರೇಣ ಯಃ ಸಮರ್ಥಃ ಪ್ರಬಾಧಿತುಮ್ ।
ನ ದೈವೇನ ವಿಪನ್ನಾರ್ಥಃ ಪುರುಷಃ ಸೋಽವಸೀದತಿ ॥೧೮॥
ಅದ್ಯ ಮತ್ಪೌರುಷಹತಂ ದೈವಂ ದ್ರಕ್ಷ್ಯಂತಿ ವೈ ಜನಾಃ ॥
ಯದ್ದೈವಾದಾಹತಂ ತೇಽದ್ಯ ದೃಷ್ಟಂ ರಾಜ್ಯಾಭಿಷೇಚನಮ್ ॥೨೦॥

ಕೈಲಾಗದ ಹೇಡಿಯು ದೈವವನ್ನು ನಂಬುತ್ತಾನೆ. ವೀರರು- ಧೀರರು ದೈವವನ್ನು ಲೆಕ್ಕಿಸುವದಿಲ್ಲ. ಯಾವ ಪುರುಷನು ತನ್ನ ಪೌರುಷದಿಂದ ದೈವವನ್ನು ತುಳಿಯಬಲ್ಲನೋ ಅವನು ಎಂದಿಗೂ ಕಷ್ಟಕ್ಕೆ ಸಿಕ್ಕುವದಿಲ್ಲ. ದೈವವು ಅವನ ಕಾರ್ಯವನ್ನು ಕೆಡಿಸುವದಿಲ್ಲ .... ಈ ದಿನ ನನ್ನ ಪೌರುಷದಿಂದ ದೈವವು ಉರುಳಿಬೀಳುವದನ್ನು ಜನರು ನೋಡಲಿ ! ಅಣ್ಣಾ, ಈ ಪಟ್ಟಾಭಿಷೇಕವು ದೈವದಿಂದ ನಿಂತುಹೋಯಿತೆಂದು ನೀನು ಭಾವಿಸಿದ್ದೀಯಷ್ಟೆ. ಅಂಕುಶಕ್ಕೆ ಬಗ್ಗದೆ, ಸರಪಳಿಯನ್ನು ಹರಿದೆಸೆದು, ಬಲಗರ್ವಿತವಾದ ಮದ್ದಾನೆಯಂತೆ ಓಡುತ್ತಿರುವ ಈ ದೈವವನ್ನು ನನ್ನ ಪೌರುಷದಿಂದ ಜಗ್ಗಿ ನಿಲ್ಲಿಸಿ ಎಳೆದು ತರುತ್ತೇನೆ. (೨೧) ದಿಕ್ಪಾಲಕರೆಲ್ಲರೂ ಒಟ್ಟಾಗಿ ಬಂದರೂ ಮೂರು ಲೋಕವೇ ಅಡ್ಡಗಟ್ಟಿದರೂ, ರಾಮ, ನಿನ್ನ ಪಟ್ಟಾಭಿಷೇಕವನ್ನು ತಡೆದು ನಿಲ್ಲಿಸಲಾರರು............"

ಎಂದನು. ಲಕ್ಷ್ಮಣನ ಈ ವೀರಪೌರುಷವಾದವನ್ನು ರಾಮನು ಒಪ್ಪಿಕೊಳ್ಳದೆ, ಆವನನ್ನು ಸಮಾಧಾನಮಾಡಿ, "ಲಕ್ಷ್ಮಣ! ನಾನು ತಂದೆಯ ಆಜ್ಞೆಯನ್ನು ಮೀರತಕ್ಕವನಲ್ಲ. ಇದು ನನ್ನ ನಿರ್ಧಾರವೆಂದು ತಿಳಿ. ಇದೇ ಸಜ್ಜನರು ಅನುಸರಿಸಬೇಕಾದ ಮಾರ್ಗ" ಎಂದು ಹೇಳಿದನು.

19. ಹೀಗೆ ಶ್ರೀರಾಮನು ತಂದೆಯ ಆಜ್ಞೆಯನ್ನು ಪಾಲಿಸಬೇಕೆಂದು ದೃಢನಿರ್ಧಾರಮಾಡಿರುವುದನ್ನು ಕಂಡು, ಕೌಸಲ್ಯೆಯು ಕಣ್ಣೀರುತುಂಬಿ ಬಿಕ್ಕುತ್ತ ಧರ್ಮಶೀಲನಾದ ರಾಮನಿಗೆ ಹೀಗೆ ಹೇಳಿದಳು : "............ನೀನು ಮಹಾಸದ್ಗುಣವಂತನಾಗಿ, ಮಹಾರಾಜನಿಗೆ ಪ್ರಿಯಪುತ್ರನೆನಿಸಿಕೊಂಡು, ರಘುಕುಲೋತ್ತಮನಾದವನು ರಾಜ್ಯಭ್ರಷ್ಟನಾಗಿ ಕಾಡಿಗೆ ಹೋಗಬೇಕಾಯಿತೆಂದರೆ, ಈ ಮಾತನ್ನು ಯಾರು ನಂಬಬಹುದು?........ನಿಜವಾಗಿಯೂ ಲೋಕದಲ್ಲಿ ದೈವವೇ ಬಲಶಾಲಿ, ಸಕಲವನ್ನೂ ಅದೇ ನಿಯಮಿಸುತ್ತದೆ............"

ನೂನಂ ತು ಬಲವಾನ್ ಲೋಕೇ ಕೃತಾಂತಃ ಸರ್ವಮಾದಿಶೇತ್ ||

ಅಯೋ. ೨೪-೫

ಪುನಃ ಕೌಸಲ್ಯೆಯು "....ವತ್ಸ, ಹೊರಟುಹೋಗಲು ನೀನು ದೃಢವಾಗಿ ಸಂಕಲ್ಪಿಸಿದ್ದೀಯೆ, ನಿನ್ನನ್ನು ತಡೆಯಲು ನನಗೆ ಶಕ್ತಿಯಿಲ್ಲ.

............**ನೂನಂ ಕಾಲೋ ದುರತ್ಯಯಃ ॥ ಸ. ೨೪-೩೩**

ಕಾಲಗತಿಯನ್ನು ಮೀರಲು ಯಾರಿಗೂ ಸಾಧ್ಯವಿಲ್ಲ............

ಕೃತಾಂತಸ್ಯ ಗತಿಃ ಪುತ್ರ ದುರ್ವಿಭಾವ್ಯಾ ಸದಾ ಭುವಿ ||೩೫||

"ಪ್ರಪಂಚದಲ್ಲಿ ವಿಧಿಯ ಸಂಕಲ್ಪವು ಯಾರಿಗೂ ತಿಳಿಯದು. ಆ ವಿಧಿಯು ನನ್ನ ಮಾತನ್ನು ಕಟ್ಟಿಸಿ, ವನಕ್ಕೆ ಹೋಗೆಂದು ನಿನ್ನನ್ನು ಪ್ರೇರಿಸುತ್ತಿದೆ.

20. ರಾವಣನ ಸಂಹಾರವಾದಮೇಲೆ ಶ್ರೀರಾಮನ ಸಮೀಪದಲ್ಲಿ ಬಂದು ನಮ್ರಳಾಗಿ ನಿಂತಿದ್ದ ಸೀತೆಯನ್ನು ನೋಡಿ ರಾಮನು,

ಯಾ ತ್ವಂ ವಿರಹಿತಾ ನೀತಾ ಚಲಚಿತ್ತೇನ ರಕ್ಷಸಾ ।
ದೈವಸಂಪಾದಿತೋ ದೋಷೋ ಮಾನುಷೇಣ ಮಯಾ ಜಿತಃ ॥
ಸಂಪ್ರಾಪ್ತಮವಮಾನಂ ಯಸ್ತೇಜಸಾ ನ ಪ್ರಮಾರ್ಜತಿ ।
ಕಸ್ತಸ್ಯ ಪುರುಷಾರ್ಥೋಽಸ್ತಿ ಪುರುಷಸ್ಯಾಲ್ಪತೇಜಸಃ || ೬

(ವಾ. ರಾ. ಯುದ್ಧಕಾಂಡ ಸರ್ಗ ೧೧೫)

ಚಪಲಚಿತ್ತನಾದ ಆ ರಾಕ್ಷಸನು ನನ್ನಿಂದ ಅಗಲಿಸಿ ನಿನ್ನನ್ನು ಅಪಹರಿಸಿದ ನಷ್ಟ ; ದೈವದಿಂದಾದ ಆ ಅವಮಾನವನ್ನು ಪೌರುಷದಿಂದ ನಾನು ನಿರ್ಮೂಲ ಗೊಳಿಸಿದ್ದೇನೆ. ಒದಗಿ ಬಂದ ಅವಮಾನವನ್ನು ಯಾವನು ತನ್ನ ತೇಜಸ್ಸಿನಿಂದ ಅಳಿಸಿಹಾಕಲಾರನೋ, ಅಂತಹ ತೇಜೋಹೀನನಿಗೆ ಯಾವ ಪುರುಷಾರ್ಥವು ತಾನೇ ಕೈಗೂಡೀತು ? ಎಂದು ಹೇಳಿದನು.

21. ರಾಘವನ ವಾಗ್ಬಾಣಗಳಿಂದ ಅತ್ಯಂತ ದುಃಖಿತಳಾದ ಸೀತೆಯು ಗಳಗಳನೆ ಅಳುತ್ತಾ,

ಯದ್ಯಹಂ ಗಾತ್ರಸಂಸ್ಪರ್ಶಂ ಗತಾಸ್ಮಿ ವಿವಶಾ ಪ್ರಭೋ ।
ಕಾಮಕಾರೋ ನ ಮೇ ತತ್ರ ದೈವಂ ತತ್ರಾಪರಾಧ್ಯತಿ ॥
(ವಾ. ರಾ. ಯು. ೧೧೯-೮)

"ಓ ನನ್ನ ಸ್ವಾಮಿಯೆ ! ನಾನು ದಿಕ್ಕಿಲ್ಲದೆ ಪರಾಧೀನಳಾದಾಗ ರಾವಣನ ದೇಹಸ್ಪರ್ಶವು ನನಗಾಗಿರಬಹುದು. ಅದರಲ್ಲಿ ನನ್ನ ಇಚ್ಛೆ ಏನಿದೆ ? ಅದು ದೈವದಿಂದಾದ ಅಪರಾಧ. ನನಗೆ ಅಧೀನವಾದುದು ನನ್ನ ಹೃದಯ ; ಅದು ಸದಾ ನಿನ್ನಲ್ಲಿಯೇ ನೆಲೆಸಿದೆ. ಈ ದೇಹವು ಪರಾಧೀನವಾದಾಗ ನಾನೇನು ಮಾಡಲು ಸಾಧ್ಯವಿತ್ತು ? ದೇಹಸ್ಪರ್ಶವಾಗದಂತೆ ತಡೆಯಲು ನನಗೆ ಸಾಮರ್ಥ್ಯ ವಿತ್ತೆ ?........ನನ್ನ ಮಾನರಕ್ಷಣೆ ನಿನ್ನದಾಗಿರಲಿಲ್ಲವೆ ?........"

22. **ಮಹಾಭಾರತ :** ಈಗ ಮಹಾಭಾರತ ಗ್ರಂಥವನ್ನು ತೆಗೆದು ಕೊಂಡು ವಿಚಾರಮಾಡಿದರೆ ಮಹಾಭಾರತದಲ್ಲಿ ಕಷ್ಟಪಡದವರಾರು ? ದುಃಖವಿಲ್ಲ ದವರಾರು ? ಶಂತನುವಿನಿಂದ ಮೊದಲುಮಾಡಿಕೊಂಡು ಶ್ರೀಕೃಷ್ಣನ ವರೆಗೆ ಎಲ್ಲರೂ ಕಷ್ಟವನ್ನು ಅನುಭವಿಸಿದವರೇ. ಪ್ರಪಂಚದಲ್ಲಿ ಕಷ್ಟವಿದೆ; ಅದು ಎಲ್ಲರಿಗೂ ಬರುತ್ತದೆ ; ಶ್ರೀಮನ್ನಾರಾಯಣನ ಅವತಾರವೆನಿಸಿಕೊಂಡ ಶ್ರೀರಾಮ ಚಂದ್ರನಿಗೆ ಸಾಮ್ರಾಜ್ಯಪಟ್ಟಾಭಿಷೇಕವು ತಪ್ಪಿ ವನವಾಸಾದಿ ದುಃಖಪರಂಪರೆ ಗಳು ಪ್ರಾಪ್ತವಾದಂತೆ, ಪರಮಾತ್ಮನ ಪೂರ್ಣಾವತಾರವೆನ್ನಿಸಿಕೊಂಡ ಶ್ರೀಕೃಷ್ಣ ನೂ ಸಹ ಸೋಲನ್ನೂ ಸಂಕಟಗಳನ್ನೂ ಅನುಭವಿಸಬೇಕಾಯಿತು. ಮಹಾ ದುಷ್ಟನಾದ ಜರಾಸಂಧನೊಡನೆ ಹದಿನೆಂಟುಸಲ ಯುದ್ಧಮಾಡಿದ ಕೃಷ್ಣನು ಒಂದು ಸಲ ಸೋತು, ಸಾಮಾನ್ಯಮನುಷ್ಯನಂತೆ ಭಯದಿಂದ ಮಥುರೆಯನ್ನು ಬಿಟ್ಟು ದ್ವಾರಕೆಗೆ ಓಡಿಹೋದನು. ಆದರೆ, ಸಮಯವನ್ನು ಕಾದು, ಕೃಷ್ಣನು ಭೀಮನಿಂದ ಜರಾಸಂಧನನ್ನು ಉಪಾಯದಿಂದ ಕೊಲ್ಲಿಸಿದನು.

23. "ದೇವತೆಗಳಿಗೂ ಕಷ್ಟ ತಪ್ಪಿದ್ದಲ್ಲ" ಎಂದು ಮಹಾಭಾರತದ ವ್ಯಕ್ತಿ ಗಳೆಲ್ಲರೂ ನಿರ್ಧರಿಸಿಕೊಂಡಂತೆ ಕಾಣುತ್ತದೆ. ಕೃಷ್ಣ-ದ್ರೌಪದಿಯಂಥವರೂ

ಕಷ್ಟವನ್ನು ಅನುಭವಿಸುವುದಕ್ಕೆ ಸಿದ್ಧರಾಗಿದ್ದರಲ್ಲದೆ, ಅದನ್ನು ನಿವಾರಿಸಿಕೊಳ್ಳುವ ಪ್ರಯತ್ನಮಾಡುತ್ತಾ, ಕಷ್ಟಗಳನ್ನು ಕಳೆದುಳಿದರೆ ಸುಖವನ್ನು ಅನುಭವಿಸ ಬಹುದು ಎಂಬ ಆಶೆಯನ್ನೂ ಇಟ್ಟುಕೊಂಡಿದ್ದರು.

24. ಪ್ರಪಂಚದಲ್ಲಿ ಕಷ್ಟನಿಷ್ಠುರಗಳೂ ದುಃಖದೌರ್ಜನ್ಯಗಳೂ ಯಾರಿಗೂ ಬೇಡವಾದರೂ ಅವು ಯಾವಾಗಲೂ ಇದ್ದು ಬಿಟ್ಟಿವೆ. ಬೇಡವೆಂದರೆ ಅವು ತಪ್ಪುವಂತಿಲ್ಲ; ಎಲ್ಲರಿಗೂ ಇಷ್ಟವಾದ ಸುಖಸಂತೋಷಗಳು ಬೇಕೆಂದರೆ ಬರುವಂತಿಲ್ಲ. ಕೆಲವರಿಗೆ ಬಂದ ಕಷ್ಟ ಪರಿಹಾರವಾಗುತ್ತದೆ; ಕೆಲವರಿಗೆ ಕಡಿಮೆ ಆಗುತ್ತದೆ; ಕೆಲವರಿಗೆ ಏನುಮಾಡಿದರೂ ಕಷ್ಟ ತಪ್ಪುವದೇ ಇಲ್ಲ. ರೋಗಕ್ಕೆ ಔಷಧಿಯಿಂದ ಪರಿಹಾರವಿರುವಂತೆ ಕೆಲವುಕಷ್ಟಗಳಿಗೂ ಪರಿಹಾರವಿರುವಂತೆ ಕಾಣು ತ್ತದೆ. ಆದರೆ ಎಷ್ಟೋ ರೋಗಗಳಿಗೆ ಔಷಧವಿಲ್ಲದಂತೆ, ಔಷಧ ತಿಳಿಯದಂತೆ, ಅಥವಾ ಯಾವ ಔಷಧವೂ ಆಂಟದಂತೆ, ಪ್ರಪಂಚದ ಬಹುಭಾಗದ ಕಷ್ಟಕ್ಕೆ ಪ್ರತಿಕ್ರಿಯೆಯೇ ಕಾಣುವದಿಲ್ಲ. ಅದು ಬಂದಾಗ ಬರುತ್ತದೆ, ಹೋದಾಗ ಹೋಗುತ್ತದೆ; ಅದು ಯಾವ ಯೋಗಿಯನ್ನೂ ಜ್ಞಾನಿಯನ್ನೂ ಮಹಾತ್ಮ ನನ್ನೂ ಮಹರ್ಷಿಯನ್ನೂ ಬಿಡುವದಿಲ್ಲ- ಎನ್ನಿಸುತ್ತದೆ. ಗುರುಪರಂಪರೆಯ ಮೂರ್ಧನ್ಯನಾಗಿರುವ ವಸಿಷ್ಠಮಹರ್ಷಿಯೂ ವಿಶ್ವಾಮಿತ್ರನ ದ್ವೇಷಾನಲಕ್ಕೆ ಆಹುತಿಯಾದ ನೂರುಜನ ಮಕ್ಕಳನ್ನು ಕಳೆದುಕೊಂಡು ಗೋಳಾಡಬೇಕಾಯಿತು. ಇವಕ್ಕೆಲ್ಲಾ ದೈವಸಂಕಲ್ಪವೋ ಮನುಷ್ಯನ ಕರ್ಮವೋ ವಿಧಿಯ ವಕ್ರತೆಯೋ ಪುರುಷಪ್ರಯತ್ನದಲ್ಲಿ ನ್ಯೂನತೆಯೋ ಕಾರಣವಾಗಿ ಕಾಣುತ್ತದೆ. ಆದರೆ- ಇವುಗಳಲ್ಲಿ ಯಾವದು ನಮ್ಮ ದುಃಖಕ್ಕೆ ಎಷ್ಟರಮಟ್ಟಿಗೆ ಕಾರಣವೋ ಅಥವಾ ಎಲ್ಲವೂ ಒಟ್ಟು ಸೇರಿದ ಕಾರಣವೋ ಹೇಳುವದು ಸುಲಭವಲ್ಲ.

25. ಮಹಾಭಾರತದಲ್ಲಿ ಮನುಷ್ಯಪ್ರಯತ್ನವು ವ್ಯರ್ಥವೆನ್ನುವದಿಲ್ಲ. 'ಮನುಷ್ಯನು ತನ್ನನ್ನು ತಾನು ಎಂದೂ ನಿರಾಕರಿಸಿಕೊಳ್ಳಬಾರದು ; ತನ್ನನ್ನು ತಾನು ಅಲ್ಲಗಳೆದುಕೊಳ್ಳುವವನಿಗೆ ಸುಖವಿಲ್ಲ' ಎಂದು ಅದು ಹೇಳುತ್ತದೆ. ಆದರೆ ಕೆಲವು ಸಣ್ಣಸಣ್ಣ ವಿಷಯಗಳಲ್ಲಿ ನಮ್ಮ ಇಷ್ಟದಂತೆ ನಡೆಯುವದಕ್ಕೂ ಪಡೆಯು ವದಕ್ಕೂ ನಮಗೆ ಸ್ವಾತಂತ್ರ್ಯವಿರುವಂತೆ ಕಂಡರೂ ಆ ಸಾಧನೆಯೂ ಕೂಡ ದೈವದ ಅಧೀನದಲ್ಲಿಯೇ ನಡೆದಿಲ್ಲವೆನ್ನುವದಕ್ಕೆ ಯಾವ ಪ್ರಮಾಣ ಇದೆ ?

ಧೃಷ್ಟದ್ಯುಮ್ನನು ಧನುರ್ವಿದ್ಯೆ ಕಲಿಯಲೆಂದು ದ್ರೋಣಾಚಾರ್ಯನ ಹತ್ತಿ ರಕ್ಕೆ ಹೋದಾಗ, ಈ ಶಿಷ್ಯನಾದ ದ್ರುಪದಪುತ್ರನು ತನ್ನನ್ನು ಕೊಲ್ಲುವದಕ್ಕಾ ಗಿಯೇ ಹುಟ್ಟಿದವನೆಂಬದನ್ನು ತಿಳಿದಿದ್ದರೂ ಸಹ ದ್ರೋಣಾಚಾರ್ಯನು "ದೈವಸಂಕಲ್ಪವಿದ್ದಂತಾಗಲಿ ! ಅದನ್ನು ಮೀರುವದು ಯಾರಿಗೆ

ಸಾಧ್ಯ !" ಎಂದು ತನ್ನಲ್ಲಿಯೇ ಯೋಚಿಸಿ ಅವನನ್ನು ತನ್ನ ಶಿಷ್ಯನನ್ನಾಗಿ ಪರಿಗ್ರಹಿಸಿದನು.

26. ಧೃತರಾಷ್ಟ್ರನಿಂದ ಪಗಡೆಯಾಟಕ್ಕೆ ಎರಡನೆಯ ಸಲ ಪಾಂಡವರಿಗೆ ಕರೆ ಬಂದಾಗ, ಯುಧಿಷ್ಠಿರನು, "ಪ್ರಾಣಿಗಳಿಗೆ ಶುಭಾಶುಭಗಳು ಬ್ರಹ್ಮಸಂಕಲ್ಪದಂತೆ ಒದಗುತ್ತವೆ; ಅವುಗಳು ಯಾರಿಗೂ ತಪ್ಪಿದ್ದಲ್ಲ. ಇನ್ನೊಂದು ಸಾರಿ ಆಟವಾಡಬೇಕೆಂದು ಹಿರಿಯನಾದ ಧೃತರಾಷ್ಟ್ರನು ಹೇಳಿಕಳಿಸಿದ್ದಾನೆ; ಆದ್ದರಿಂದ ಅದು ಕೇವಲ ವಿನಾಶಕರವೆಂದು ತಿಳಿದಿದ್ದರೂ ಸಹ ಅವನ ಮಾತನ್ನು ಮೀರುವದಕ್ಕೆ ಇಷ್ಟವಿಲ್ಲ!" ಎಂದು ಹೇಳಿ, ಶಕುನಿಯ ಮೋಸವು ತಿಳಿದಿದ್ದರೂ, ತಮ್ಮಂದಿರನ್ನು ಕರೆದುಕೊಂಡು ಹಿಂದಿರುಗಿ ಬಂದನು. ದೈವಪ್ರೇರಿತರಾಗಿ ಅವರು ಮತ್ತೆ ಜೂಜಿಗೆ ತೊಡಗಿದರು.

27. ಎರಡನೆಯ ಸಲವೂ ಜೂಜಿನಲ್ಲಿ ಸೋತು, ಪಾಂಡವರೂ ದ್ರೌಪದಿಯೂ ಕೃಷ್ಣಾಜಿನಧಾರಿಗಳಾಗಿ ಕಾಡಿಗೆ ಹೊರಟಾಗ ಕುಂತಿಯು ಬಹಳ ದುಃಖದಿಂದ ಅವರನ್ನು ಕುರಿತು "ಸದಾ ಧರ್ಮದಲ್ಲಿ ನಡೆದುಕೊಳ್ಳುತ್ತ, ಉದಾರಮನಸ್ಕರೂ ದೈವಭಕ್ತರೂ ಆದ ನಿಮಗೆ ಎಂಥ ಕಷ್ಟ ಬಂತು ! ಇದು ಎಂಥಾ ವಿಧಿವಿಪರ್ಯಾಸ !..........."ಎಂದು ಹೇಳಿ ಬಗೆಬಗೆಯಿಂದ ಗೋಳಾಡಿದಳು.

28. ಮೈತ್ರೇಯ ಮಹರ್ಷಿಯ ಹಿತೋಪದೇಶವನ್ನು ದುರ್ಯೋಧನನು ತಿರಸ್ಕರಿಸಿ ತನ್ನ ತೊಡೆಯನ್ನು ತಟ್ಟಲು, ಮೈತ್ರೇಯನು ಕೋಪಗೊಂಡು ವಿಧಿಪ್ರೇರಿತನಾಗಿ "ನೀನು ನನ್ನನ್ನು ಗರ್ವದಿಂದ ನಿರಾಕರಿಸಿದ್ದಕ್ಕಾಗಿ, ಯುದ್ಧದಲ್ಲಿ ಭೀಮನು ಗದೆಯ ಏಟುಗಳಿಂದ ನಿನ್ನ ಈ ತೊಡೆಯನ್ನು ಮುರಿಯುತ್ತಾನೆ" ಎಂದು ಶಾಪಕೊಟ್ಟನು.

29. ಹಿಂದೆ ಒಂದು ದಿನ ಪಾಂಡುವು ತನ್ನ ಹೆಂಡಿರೊಡನೆ ಕಾಡಿಗೆ ಹೋಗಿದ್ದು ಅಲ್ಲಿ ಒಂದು ಗಂಡು ಜಿಂಕೆಯೂ ಒಂದು ಹೆಣ್ಣು ಜಿಂಕೆಯೂ ಕೂಡಿಕೊಂಡಿದ್ದದ್ದನ್ನು ನೋಡಿ, ಅವುಗಳನ್ನು ಐದು ಬಾಣಗಳಿಂದ ಹೊಡೆದು ಕೆಡವಿದನು. ಗಂಡು ವಿಲವಿಲನೆ ನೆಲದ ಮೇಲೆ ಬಿದ್ದು ಒದ್ದಾಡುತ್ತ ಮನುಷ್ಯರಂತೆ ಮಾತನಾಡುತ್ತ, 'ಎಲೈ ರಾಜನೆ, ಧರ್ಮಾತ್ಮರಾದವರ ವಂಶದಲ್ಲಿ ಹುಟ್ಟಿಯೂ ಏಕೆ ಕಾಮಲೋಭಗಳಿಗೆ ವಶವಾಗಿ ನಿನ್ನ ಬುದ್ಧಿ ಕೆಟ್ಟುಹೋಯಿತು ?

ನ ವಿಧಿಂ ಗ್ರಸತೇ ಪ್ರಜ್ಞಾ ಪ್ರಜ್ಞಾಂ ತು ಗ್ರಸತೇ ವಿಧಿಃ ।
ವಿಧಿಪರ್ಯಾಗತಾನರ್ಥಾನ್ ಪ್ರಾಜ್ಞೋ ನ ಪ್ರತಿಪದ್ಯತೇ ॥

(ಮಹಾ. ಭಾ. ಆ. ಪ. ೧೧೭-೧೦)

"ವಿಧಿಯು ಬುದ್ಧಿಯನ್ನು ತಪ್ಪಿಸಿಬಿಡುತ್ತದೆ ; ಬುದ್ಧಿಯು ವಿಧಿಯನ್ನು ತಪ್ಪಿಸಲಾರದು..........."

"ಗೆಡ್ಡೆಗೆಣಸುಗಳನ್ನು ತಿಂದುಕೊಂಡು ಅರಣ್ಯದಲ್ಲಿ ಸಂಚರಿಸುತ್ತಿದ್ದ ನಾನು ನಿನಗೆ ಏನು ಅಪರಾಧ ಮಾಡಿದೆ ? ರತ್ಯಾಸಕ್ತರಾಗಿದ್ದ ನಮ್ಮನ್ನು ಹೀಗೆ ಕ್ರೂರನಾಗಿ ಕೊಂದದ್ದರಿಂದ ನಿನ್ನ ಜೀವಿತವೂ ಹೀಗೆಯೇ ಕೊನೆಗಾಣುತ್ತದೆ"-ಎಂದು ಹೇಳಿ ಆ ಜಿಂಕೆಯು ಪ್ರಾಣಬಿಟ್ಟಿತು.

30. ಹೀಗಿರಲು, ಒಂದು ಸಾರಿ ವಸಂತ ಋತುವಿನಲ್ಲಿ, ಪಾಂಡುವು ಹರ್ಷಚಿತ್ತನಾಗಿ ಮಾದ್ರಿಯೊಡನೆ, ಆ ಅರಣ್ಯಸೌಂದರ್ಯವನ್ನು ನೋಡುತ್ತ ತಿರುಗಾಡುತ್ತಿರಲು ಅವನಲ್ಲಿ ಕಾಮವು ಹುಟ್ಟಿ, ಕಿಚ್ಚಿನಂತೆ ಹಬ್ಬಿ ಒಂದು ಏಕಾಂತ ಸ್ಥಳದಲ್ಲಿ ಮಾದ್ರಿಯನ್ನು ಹಿಡಿದುಕೊಂಡನು. ಅವಳು ಎಷ್ಟು ಪ್ರಯತ್ನದಿಂದ ಅವನನ್ನು ತಡೆದರೂ ಅವನು ಕಾಮಪರವಶನಾಗಿದ್ದದ್ದರಿಂದ ಶಾಪವನ್ನು ಲಕ್ಷ್ಯ ಮಾಡದೆ ಬಲಾತ್ಕಾರವಾಗಿ ಅವಳನ್ನು ಕೂಡಿಬಿಟ್ಟನು ; **ಅಂತ್ಯಕಾಲ ಒದಗಿ ಬಂದು ಬುದ್ಧಿ ಮೋಸಹೋಯಿತು.** ಪಾಂಡುವು ಪ್ರಾಣವನ್ನು ನೀಗಿದನು.

........ಶಾಪಜಂ ಭಯಮುತ್ಸೃಜ್ಯ ವಿಧಿನಾ ಸಂಪ್ರಚೋದಿತಃ ||
........ತಸ್ಯ ಕಾಮಾತ್ಮನೋ ಬುದ್ಧಿಃ ಸಾಕ್ಷಾತ್ ಕಾಲೇನ ಮೋಹಿತಾ ||
(ಆ. ಪ. ೧೨೪,೧೦-೧೧-೨೨)

31. ಪಾಂಡವರು ಮಹಾವೈಭವದಿಂದ ನಡೆಸಿದ ರಾಜಸೂಯಯಾಗವನ್ನು ನೋಡಿ ಹಿಂದಿರುಗುತ್ತಿದ್ದಾಗ ದಾರಿಯಲ್ಲಿ ದುರ್ಯೋಧನನು ಶಕುನಿಯನ್ನು ಕುರಿತು, "ಮಾವ ! ಅರ್ಜುನನ ಅಸ್ತ್ರಪರಾಕ್ರಮಗಳಿಂದ ಭೂಮಂಡಲವೇ ಯುಧಿಷ್ಠಿರನ ವಶವಾಗಿರುವವನ್ನೂ ದೇವೇಂದ್ರನು ನಡೆಸಿದಂತಿದ್ದ ಆ ಮಹಾ ವೈಭವದ ಯಾಗವನ್ನೂ ನೋಡಿ, ನನ್ನ ಹೊಟ್ಟೆ ಬೇಯುತ್ತಿದೆ; ಕೃಷ್ಣನು ಶಿಶುಪಾಲನನ್ನು ಕೊಂದರೆ, ಅದನ್ನು ಪ್ರತಿಭಟಿಸಲು ಒಬ್ಬ ಗಂಡಸೂ ಇರಲಿಲ್ಲ ! ....ಬೆಂಕಿಗೆ ಬೀಳಲೇ, ವಿಷ ತಿನ್ನಲೇ, ನೀರಿನಲ್ಲಿ ಮುಳುಗಿಹೋಗಲೇ-ಎನ್ನಿಸುತ್ತಿದೆ........ನಾನು ಹೆಂಗಸಿಗೆ ಹೆಂಗಸಲ್ಲ, ಗಂಡಸಿಗೆ ಗಂಡಸಲ್ಲ........ಸಹಾಯಕ್ಕೆ ಯಾರನ್ನೂ ಕಾಣೆ. ....**ದೈವವೇ ದೊಡ್ಡದು ; ಪೌರುಷ ವ್ಯರ್ಥ !** ನಾನು ಹಿಂದೆ ಪಾಂಡವರನ್ನು ಕೊಲ್ಲಲು ಎಷ್ಟೆಷ್ಟೋ ಪ್ರಯತ್ನಮಾಡಿದೆ. ಅವರು ....ಸಂಪತ್ಸಮೃದ್ಧರಾದರು........

32. ಆ ಸಂದರ್ಭದಲ್ಲಿಯೇ ವಿದುರನನ್ನು ಕರೆಸಿ, ಧೃತರಾಷ್ಟ್ರನು ಅವನನ್ನು ಕುರಿತು, "........ಶಕುನಿಯ ಸಲಹೆಯಂತೆ ಪಗಡೆಯಾಟಕ್ಕಾಗಿ ಪಾಂಡವ

ರನ್ನು ಕರೆದುಕೊಂಡು ಬರಲು, ರಥವನ್ನು ತೆಗೆದುಕೊಂಡು ನೀನೇ ಖಾಂಡವ ಪ್ರಸ್ಥಕ್ಕೆ ಹೋಗು........ಒಳ್ಳೆಯದೋ ಕೆಟ್ಟದೋ, ಹಿತವೋ ಅಹಿತವೋ ಇದು ದೈವಸಂಕಲ್ಪವೆಂದು ತೋರುತ್ತದೆ........" ಎಂದನು.

ವೈಶಂಪಾಯನ ಉವಾಚ :

ಏವಮುಕ್ತ್ವಾ ಧೃತರಾಷ್ಟ್ರೋ ಮನೀಷೀ ।
ದೈವಂ ಮತ್ವಾ ಪರಮಂ ದುಸ್ತರಂ ಚ ।
ಶಶಾಸೋಚ್ಚೈಃ ಪುರುಷಾನ್ ಪುತ್ರವಾಕ್ಯೇ ।
ಸ್ಥಿತೋ ರಾಜಾ ದೈವಸಂಮೂಢಚೇತಾಃ ॥ (ಸಭಾ. ೫೬-೧೭)

33. ವಿದುರನು ಇಂದ್ರಪ್ರಸ್ಥಕ್ಕೆ ಹೋಗಿ ಯುಧಿಷ್ಠಿರನಿಗೆ ತಾನು ಬಂದ ವಿಷಯವನ್ನು ತಿಳಿಸಲು, ಯುಧಿಷ್ಠಿರನು,

ದೈವಂ ಹಿ ಪ್ರಜ್ಞಾಂ ಮುಷ್ಣಾತಿ ಚಕ್ಷುಸ್ತೇಜ ಇವಾಪತತ್ ।
ಧಾತುಶ್ಚ ವಶಮನ್ವೇತಿ ಪಾಶೈರಿವ ನರಸ್ಸಿತಃ ॥ (ಸಭಾ ಪ ; ೫೮-೧೮)
ವಿಧಿಶ್ಚ ಬಲವಾನ್ ರಾಜನ್ ದಿಷ್ಟಸ್ಯಾಸ್ಮಿ ವಶೇ ಸ್ಥಿತಃ ॥
(ಸಭಾ ಪ ; ೫೯-೧೮)

'ಪ್ರಕಾಶವಾದ ತೇಜಸ್ಸು ಕಣ್ಣಿನ ಶಕ್ತಿಯನ್ನು ಅಡಗಿಸಿಬಿಡುವಂತೆ, ದೈವವು ಮನುಷ್ಯನ ವಿವೇಕವನ್ನು ಅಡಗಿಸಿಬಿಡುತ್ತದೆ. ಮನುಷ್ಯನು ಹಗ್ಗ ಹಾಕಿ ಎಳೆಯಲ್ಪಟ್ಟವನಂತೆ ವಿಧಿಯ ಹಿಂದೆ ಹೋಗುತ್ತಾನೆ!' ಎನ್ನುತ್ತ ವಿದುರ ನೊಡನೆ ಹೊರಟನು. ಅವನೊಡನೆ ದ್ರೌಪದಿಯೂ ಮಿಕ್ಕ ಪಾಂಡವರೂ ಹೊರಟರು.

34. ಹಸ್ತಿನಾಪುರಕ್ಕೆ ಪಾಂಡವರು ಹೋದ ಮರುದಿನ ಶಕುನಿಯ ಮಾತಿಗೆ ಯುಧಿಷ್ಠಿರನು 'ಆಟಕ್ಕೆ ಕರೆದ ಮೇಲೆ ನಾನು ಹಿಂಜರಿಯುವದಿಲ್ಲ ; ಇದು ನನ್ನ ವ್ರತ. ವಿಧಿಯೇ ಬಲವಾದುದು ; ನಾನು ಆ ವಿಧಿಗೆ ವಶನಾಗಿ ದ್ದೇನೆ.......' ಎಂದನು.

35. ಪಾಂಡವರು ದ್ಯೂತದಲ್ಲಿ ಸೋತು, ಪಣದಿಂದ ಸಕಲವನ್ನೂ ಕಳೆದುಕೊಂಡು, ತಮ್ಮ ಪ್ರತಿಜ್ಞೆಯಂತೆ ಒಡವೆ-ವಸ್ತುಗಳೂ ಬಟ್ಟೆಬರಿಗಳೂ ಇಲ್ಲದೆ, ಕೇವಲ ಕೃಷ್ಣಾಜಿನಧಾರಿಗಳಾಗಿ, ನಾಚಿಕೆಯಿಂದ ತಲೆತಗ್ಗಿಸಿಕೊಂಡು, ದ್ರೌಪದಿಯೊಡನೆ ಕಾಡಿಗೆ ಹೊರಟಿರಲು, ಇಷ್ಟಮಿತ್ರರು ಸಂತಪಿಸುತ್ತಲೂ ಶತ್ರುಗಳು ಸಂತೋಷಪಡುತ್ತಲೂ ಇರುವದನ್ನು ಕುಂತಿಯು ನೋಡಿ, ಅತಿಯಾಗಿ ಸಂಕಟಪಡುತ್ತಾ ಅವರನ್ನು ತಬ್ಬಿಕೊಂಡು,

ಕಥಂ ಸದ್ಧರ್ಮಚಾರಿತ್ರಾನ್ ವೃತ್ತಸ್ಥಿತಿ ವಿಭೂಷಿತಾನ್ ।
ಅಕ್ಷುದ್ರಾನ್ ದೃಢಭಕ್ತಾಂಶ್ಚ ದೈವತೇಜ್ಯಾಪರಾನ್ ಸದಾ ॥
ವ್ಯಸನಂ ವಃ ಸಮಭ್ಯಾಗಾತ್ ಕೋಽಯಂ ವಿಧಿವಿಪರ್ಯಯಃ ।
(ಸಭಾ ಪ ೭೯-೧೩, ೧೪)

"ಸದಾ ಧರ್ಮದಲ್ಲಿ ನಡೆದುಕೊಳ್ಳುತ್ತಾ ಉದಾರಮನಸ್ಕರೂ ದೈವಭಕ್ತರೂ ಆದ ನಿಮಗೆ ಎಂಥ ಕಷ್ಟ ಬಂತು ! ಇದು ಏನು ವಿಧಿವಿಪರ್ಯಾಸ !"........ "ವೀರ್ಯ, ಸತ್ತ್ವ, ಬಲ, ಉತ್ಸಾಹ, ತೇಜಸ್ಸು ಇವು ಯಾವುಗಳಲ್ಲಿಯೂ ಕಡಿಮೆ ಇಲ್ಲದ ನಿಮಗೆ ಎಂಥ ಅರಣ್ಯವಾಸ ಬಂದಿತಲ್ಲ !"........ಎಂದು ಬಗೆಬಗೆಯಾಗಿ ಗೋಳಾಡಿದಳು.

36. ಉದ್ಯೋಗಪರ್ವದಲ್ಲಿ, ಮದ್ರರಾಜನಾದ ಶಲ್ಯನು ಯುಧಿಷ್ಠಿರನನ್ನು ಕುರಿತು,

ಸರ್ವಂ ದುಃಖಮಿದಂ ವೀರ ಸುಖೋದರ್ಕಂ ಭವಿಷ್ಯತಿ ।
ನಾತ್ರ ಮನ್ಯುಸ್ತ್ವಯಾ ಕಾರ್ಯೋ ವಿಧಿರ್ಹಿ ಬಲವತ್ತರಃ ॥
ದುಃಖಾನಿ ಹಿ ಮಹಾತ್ಮಾನಃ ಪ್ರಾಪ್ನುವಂತಿ ಯುಧಿಷ್ಠಿರ ।
ದೇವೈರಪಿ ಹಿ ದುಃಖಾನಿ ಪ್ರಾಪ್ತಾನಿ ಜಗತೀಪತೇ ॥
(ಉದ್ಯೋಗ ಪ. ೮,೫೨-೫೩)

ನೀವೂ ಕೃಷ್ಣೆಯೂ ಜೂಜಿನಲ್ಲಿ ದುಃಖವನ್ನು ಅನುಭವಿಸಿದ್ದು, ಕರ್ಣನಿಂದ ಕಠೋರವಾದ ಮಾತುಗಳನ್ನು ಕೇಳಿದ್ದು........ಎಲ್ಲವನ್ನೂ ನಾನು ಬಲ್ಲೆ. "ಈ ದುಃಖವೆಲ್ಲಾ ಮುಂದೆ ಸುಖದಲ್ಲಿ ಮುಗಿಯುತ್ತದೆ. ಆದಕ್ಕಾಗಿ ವ್ಯಥೆಪಡಬೇಡ ; **ವಿಧಿ ಬಲವತ್ತರವಾದುದು. ದೇವತೆಗಳಿಗೂ ಕಷ್ಟ ತಪ್ಪಿದ್ದಲ್ಲ.** ಸಾಕ್ಷಾತ್ ದೇವೇಂದ್ರನೂ ಅವನ ಹೆಂಡತಿ ಶಚೀದೇವಿಯೂ ತುಂಬ ಕಷ್ಟಕ್ಕೆ ಸಿಕ್ಕಿ ನರಳಿದರು" ಎಂದು ಸಮಾಧಾನಮಾಡಿದನು.

37. ಧೃತರಾಷ್ಟ್ರನು ವಿದುರನನ್ನು ಕುರಿತು,

ನ ದಿಷ್ಟಂ ಅಭ್ಯತಿಕ್ರಾಂತುಂ ಶಕ್ಯಂ ಭೂತೇನ ಕೇನಚಿತ್ ।
ದಿಷ್ಟಮೇವ ಧ್ರುವಂ ಮನ್ಯೇ ಪೌರುಷಂ ತು ನಿರರ್ಥಕಮ್ ॥
(ಉ.ಪ. ೪೦-೩೨)

"ವಿದುರ ! ನೀನು ಹೇಳುವದೆಲ್ಲಾ ಸರಿ........... ದುರ್ಯೋಧನನನ್ನು ಕಂಡೆನೆಂದರೆ ನನ್ನ ಮನಸ್ಸೆಲ್ಲಾ ಬದಲಾಗಿ ಬಿಡುತ್ತದೆ ; ಏನು ಮಾಡುವದು ?

ವಿಧಿಯನ್ನು ನಿರುವದಕ್ಕೆ ಯಾವ ಮನುಷ್ಯನ ಕೈಯಲ್ಲೂ ಆಗುವದಿಲ್ಲ. ದೈವವೇ ದೊಡ್ಡದು ; ಪುರುಷಪ್ರಯತ್ನ ವ್ಯರ್ಥ !" ಎಂದನು.

38. ಶ್ರೀಕೃಷ್ಣನು ಕೌರವರೊಡನೆ ಶಾಂತಿಸಂಧಾನವನ್ನು ಸಾಧಿಸಲು ಹೊರಡುವ ಮುಂಚೆ, ಭೀಮನನ್ನು ಕುರಿತು,

ಜಿಜ್ಞಾಸಂತೋ ಹಿ ಧರ್ಮಸ್ಯ ಸಂದಿಗ್ಧಸ್ಯ ವೃಕೋದರ ।
ಪರ್ಯಾಯಂ ನಾಧ್ಯವಸ್ಯಂತಿ ದೇವಮಾನುಷಯೋರ್ಜನಾಃ ॥

(ಉ. ಪ-೭೭-೫)

ಸ ಏವ ಹೇತುರ್ಭೂತ್ವಾ ಹಿ ಪುರುಷಸ್ಯಾರ್ಥಸಿದ್ಧಿಷು ।
ವಿನಾಶೇಽಪಿ ಸ ಏವಾಸ್ಯ ಸಂದಿಗ್ಧಂ ಕರ್ಮ ಪೌರುಷಮ್ ॥ ೭ ॥
ಸುಮಂತ್ರಿತಂ ಸುನೀತಂ ಚ ನ್ಯಾಯತಶ್ಚೋಪಪಾದಿತಮ್ ।
ಕೃತಂ ಮಾನುಷ್ಯಕಂ ಕರ್ಮ ದೈವೇನಾಪಿ ವಿರುಧ್ಯತೇ ॥ ೮ ॥
ದೈವಮಪ್ಯಕೃತಂ ಕರ್ಮ ಪೌರುಷೇಣ ವಿಹನ್ಯತೇ ।
ಶೀತಮುಷ್ಣಂ ತಥಾ ವರ್ಷಂ ಕ್ಷುತ್‌ಪಿಪಾಸೇ ಚ ಭಾರತ ॥ ೯ ॥
ಏವಂ ಬುದ್ಧಿಃ ಪ್ರವರ್ತೇತ ಫಲಂ ಸ್ಯಾತ್ ಉಭಯಾನ್ವಯೋ ।
ಯ ಏವಂ ಕೃತಬುದ್ಧಿಃ ಸ ಕರ್ಮಸ್ವೇವ ಪ್ರವರ್ತತೇ ॥ ೧೧ ॥
ನಾಸಿದ್ಧಾ ವ್ಯಥತೇ ತಸ್ಯ ನ ಸಿದ್ಧಾ ಹರ್ಷಮಶ್ನುತೇ ॥ ೧೨ ॥

"........ನಿನ್ನ ಬಲ ಪರಾಕ್ರಮಗಳನ್ನೂ ಸಾಹಸಕಾರ್ಯಗಳನ್ನೂ ಕಂಡೂ ಕಂಡೂ ನಿನ್ನನ್ನು ತಿರಸ್ಕರಿಸಲೆ ? ದೈವ- ಪುರುಷಪ್ರಯತ್ನ, ಇವುಗಳ ಬಲಾಬಲಗಳನ್ನು ನಿರ್ಧಾರಮಾಡುವದಕ್ಕಾಗುವದಿಲ್ಲ ; ಏಕೆಂದರೆ, ಯಾವುದು ಕಾರ್ಯಸಾಧಕವಾಗುತ್ತದೆಯೋ ಅದೇ ಕಾರ್ಯನಾಶಕವೂ ಆಗುವದುಂಟು ; ಮನುಷ್ಯಪ್ರಯತ್ನದ ಫಲಾಫಲಗಳು ಸಂದೇಹ ; ಬುದ್ಧಿವಂತರಾದವರು ಯೋಚಿಸಿದ್ದು ಕೂಡ, ಗಾಳಿಬೀಸುವಂತೆ, ಎತ್ತಲೋ ತಿರುಗಿಬಿಡುವದುಂಟು ; ಚೆನ್ನಾಗಿ ಯೋಚನೆಮಾಡಿ ನಡೆಸಿದ ಮತ್ತು ನ್ಯಾಯವಾದ ಕೆಲಸಕ್ಕೂ ದೈವವು ವಿರೋಧವಾಗಬಹುದು. ಹಾಗೆಯೇ ಶೀತ-ಉಷ್ಣ, ಮಳೆ, ಹಸಿವು, ನೀರಡಿಕೆ ಮುಂತಾದ ದೈವಕೃತವಾದ ವಿಷಯಗಳನ್ನು ಮನುಷ್ಯಪ್ರಯತ್ನದಿಂದ ಹೋಗಲಾಡಿಸಿಕೊಳ್ಳಲೂ ಬಹುದು. ಮನುಷ್ಯನು ತಾನಾಗಿ ಕೈಕೊಂಡ ಕೆಲಸಗಳಲ್ಲಿಯೂ ಕೆಲವು ವೇಳೆ ಅಡ್ಡಿಯೇನೂ ಬರುವದಿಲ್ಲ ; ಆದ್ದರಿಂದ ಲೋಕವು ಕರ್ಮಮಾಡದೆ ವಿಧಿಯಿಲ್ಲ. ಹೀಗೆ ದೈವ, ಪುರುಷಕಾರ-ಎರಡನ್ನೂ ಹೊಂದಿಸಿಕೊಂಡು ಕರ್ಮದಲ್ಲಿ ತೊಡಗುವ ವಿವೇಕಿಗೆ, ಕಾರ್ಯವಾಗಲಿಲ್ಲವೆಂಬ ವ್ಯಥೆಯಿರುವದಿಲ್ಲ. ಆಯಿತೆಂಬ ಹರ್ಷವಿರುವದಿಲ್ಲ. ನನ್ನ ಅರ್ಥ ಇದು : ಕೌರವರೊಡನೆ ಯುದ್ಧ

ಒದಗಿದರೆ ಜಯವೇ ಬರುತ್ತದೆಂಬ ನಿಶ್ಚಯವಿಲ್ಲ ; ಏನಾದರೂ ಎಡವಟ್ಟಾದರೆ ಶೋಕಿಸುತ್ತ ಕುಳಿತುಕೊಳ್ಳಬಾರದು........ಪ್ರಪಂಚದ ಕೆಲಸಗಳೆಲ್ಲಾ ದೈವ ಮತ್ತು ಮನುಷ್ಯಪ್ರಯತ್ನ ಇವೆರಡರಿಂದಲೂ ನಡೆಯಬೇಕಾದವುಗಳು. ರೈತನು ನೆಲವನ್ನು ಸರಿಪಡಿಸಿ ಗೊಬ್ಬರಗೋಡು ಹಾಕಿದರೂ ಮಳೆ ಬರದೆ ಫಸಲಿಲ್ಲ ; ಕೈ ನೀರೆರೆದರೂ ದೈವವು ಪಯಿರನ್ನು ಒಣಗಿಸಬಹುದು. ಆ ನೀರೂ ದೊರೆಯದಂ ತಾಗಬಹುದು. ನಾನೇನೋ ಪುರುಷಪ್ರಯತ್ನದಿಂದ ಏನು ಆಗಬಹುದೋ ಅದನ್ನು ಮಾಡುತ್ತೇನೆ ; ದೈವ ನನ್ನ ಅಧೀನವಲ್ಲ. ಆ ದುರ್ಯೋಧನನ ಬುದ್ಧಿ ದುರ್ಬುದ್ಧಿ. ಅವನಿಗೆ ಸತ್ಯ ಬೇಡ; ಧರ್ಮ ಬೇಡ........ಅದಕ್ಕೆ ವಧೆಯೇ ಮದ್ದು........"

39. ಕೃಷ್ಣಸಂಧಾನವು ಮುರಿದು, ಎರಡು ಕಡೆಗಳಲ್ಲಿಯೂ ಯುದ್ಧ ಸಿದ್ಧತೆಯು ಪೂರ್ಣವಾಗಿ, ಪಾಂಡವ–ಕೌರವರ ಪಕ್ಷಗಳಲ್ಲಿ ಧೃಷ್ಟದ್ಯುಮ್ನನೂ ಭೀಷ್ಮನೂ ಸೇನಾಪತಿಗಳಾಗಿರಲು ಬಲರಾಮನು ಪಾಂಡವರಲ್ಲಿಗೆ ಬಂದು ಸತ್ಕೃತ ನಾಗಿ ಹೇಳಿದ್ದೇನೆಂದರೆ, "ಭಯಂಕರವಾದ ಜನಕ್ಷಯವು ಪ್ರಾಪ್ತವಾಗಿಬಿಟ್ಟಿದೆ. ಇದು ದೈವಸಂಕಲ್ಪ ! ಯಾರಿಂದಲೂ ಮೀರುವದಕ್ಕೆ ಸಾಧ್ಯವಿಲ್ಲ ; ನಿಮಗೆ ಜಯವು ಸಿದ್ಧವಾಗಿದೆ !........ಯುದ್ಧಾರಂಭದಲ್ಲಿ ಶೋಕಾವಿಷ್ಟನಾದ ಅರ್ಜುನ ನಿಗೆ ಕೃಷ್ಣನು "........ಇದು ಲೋಕಕ್ಷಯಕಾಲ ; ಆದ್ದರಿಂದ ನೀನಿಲ್ಲದಿದ್ದರೂ ಇವರೆಲ್ಲರೂ ಸಾಯುತ್ತಾರೆ. ಸತ್ತೇ ಇದ್ದಾರೆ........" ಎಂದನು.

40. ಶರಶಯ್ಯೆಯಲ್ಲಿ ಮಲಗಿದ್ದ ಮಹಾತ್ಮನಾದ ಭೀಷ್ಮನನ್ನು ಕಾಣಲು ಕರ್ಣನು ಬಂದಾಗ, ಅವನನ್ನು ಕುರಿತು ಭೀಷ್ಮನು,

"........ನೀನು ಕೌಂತೇಯ ; ರಾಧೇಯನಲ್ಲ. ನಿನ್ನಲ್ಲಿ ನನಗೆ ದ್ವೇಷವಿಲ್ಲ. ....ನೀನು ನಿಷ್ಕಾರಣವಾಗಿ ಪಾಂಡವರನ್ನು ದ್ವೇಷಿಸುತ್ತೀಯೆ. ಅದಕ್ಕೋ ಸ್ಕರ ಅನೇಕ ವೇಳೆ ನಿನ್ನೊಡನೆ ಕ್ರೂರವಾಗಿ ಮಾತನಾಡಬೇಕಾಯಿತು. ನಿನ್ನ ಹೆಮ್ಮೆಯನ್ನು ತಗ್ಗಿಸುವ ನಿಮಿತ್ತದಿಂದ ನಾನು ಕಠಿಣವಾದ ಮಾತನಾಡಿದೆ. ....ನಿನ್ನ ರಣವೀರ್ಯವನ್ನೂ ದಾನಶೌರ್ಯವನ್ನೂ ನಾನು ಬಲ್ಲೆ........

ದೈವಂ ಪುರುಷಕಾರೇಣ ನ ಶಕ್ಯಮತಿವರ್ತಿತುಮ್ ||

(ಭೀ.ಪ. ೧೨೨–೨೦)

"ಆದರೆ, ಮನುಷ್ಯಪ್ರಯತ್ನವು ದೈವವನ್ನು ಮೀರುವದು ಅಸಾಧ್ಯ........ ಪಾಂಡವರು ನಿನ್ನ ಸೋದರರು ; ನನಗೆ ಸಂತೋಷವುಂಟುಮಾಡಬೇಕೆಂದಿದ್ದರೆ ನೀನು ಹೋಗಿ ಅವರೊಡನೆ ಸೇರಿಕೊ ; ನನ್ನೊಡನೆ ವೈರವೆಲ್ಲಾ ಹೋಗಿ, ಸಮಸ್ತ ರಾಜರೂ ಸುಖವಾಗಿರಿ !" ಎಂದನು.

41. ಕರ್ಣನು, 'ಅಜ್ಜ ! ನಾನು ಕೌಂತೇಯ, ರಾಧೇಯನಲ್ಲ-ಎಂದು ನೀನು ಹೇಳಿದ್ದನ್ನು ನಾನೂ ಬಲ್ಲೆ. ಆದರೆ, ಕುಂತಿಯು ನನ್ನನ್ನು ಬಿಸಾಟು ಬಿಟ್ಟಾಗ ಸೂತನು ನನ್ನನ್ನು ಬೆಳೆಸಿದನು ; ದುರ್ಯೋಧನನು ನನ್ನನ್ನು ಐಶ್ವರ್ಯವಂತನನ್ನಾಗಿ ಮಾಡಿದನು. ಈಗ ಅದನ್ನೆಲ್ಲಾ ಸುಳ್ಳು ಮಾಡಲಾರೆ ; ನನ್ನ ಸಂಪತ್ತು, ಶರೀರ, ಯಶಸ್ಸು ಎಲ್ಲವನ್ನೂ ದುರ್ಯೋಧನನಿಗಾಗಿ ಧಾರೆ ಎರೆದಿದ್ದೇನೆ.

ಅವಶ್ಯಂ ಭಾವೀ ಹ್ಯರ್ಥೋಽಯಂ ಯೋ ನ ಶಕ್ಯೋ ನಿವರ್ತಿತುಮ್॥
(ಭೀ.ಪ ೧೨೨-೨೭)
ದೈವಂ ಪುರುಷಕಾರೇಣ ಕೋ ನಿವರ್ತಯಿತುಮುತ್ಸಹೇತ್ ॥ ೨೮ ॥

"ಅವಶ್ಯವಾಗಿ ನಡೆಯಲೇಬೇಕಾದದ್ದನ್ನು ಯಾರೂ ವ್ಯತ್ಯಾಸಮಾಡುವದಕ್ಕಾಗುವದಿಲ್ಲ. ಪುರುಷಪ್ರಯತ್ನದಿಂದ ದೈವವನ್ನು ತಿರುಗಿಸಲು ಯಾರಿಗೆ ಧೈರ್ಯವಿದ್ದೀತು ?" ಎಂದನು.

42. ಜಯದ್ರಥನನ್ನು ಅರ್ಜುನನು ಸಂಹರಿಸಿದ ಮೇಲೆ, ಆ ಸೈಂಧವನನ್ನು ರಕ್ಷಿಸಿಕೊಳ್ಳಲಾರದೆ ಬಿಟ್ಟದಕ್ಕಾಗಿ ದುರ್ಯೋಧನನು ದ್ರೋಣನನ್ನು ಆಕ್ಷೇಪಿಸಲು, ಕರ್ಣನು, "ದುರ್ಯೋಧನ ! ಆಚಾರ್ಯನನ್ನು ಆಕ್ಷೇಪಿಸಬೇಡ. ಆ ಬ್ರಾಹ್ಮಣ ತನ್ನ ಶಕ್ತಿಬಲಗಳನ್ನೆಲ್ಲಾ ಉಪಯೋಗಿಸಿ, ಪ್ರಾಣದ ಮೇಲೆ ಲಕ್ಷ್ಯವಿಲ್ಲದೆ, ಉತ್ಸಾಹದಿಂದ ಕಾದುತ್ತಿದ್ದಾನೆ. ಆದರೆ ಅವನು ಎಷ್ಟಾದರೂ ಮುದುಕನಾದುದರಿಂದ, ತರುಣನೂ ವೀರನೂ ಕೃಷ್ಣನ ಸಾರಥ್ಯವುಳ್ಳವನೂ ಆದ ಅರ್ಜುನನನ್ನು ತಡೆಯಲಾರದಾದನು. ಇದು ಅವನ ತಪ್ಪಲ್ಲ........

ದೈವಾದಿಷ್ಟೇಽನ್ಯಥಾ ಭಾವೋ ನ ಮನ್ಯೇ ವಿದ್ಯತೇ ಕ್ವಚಿತ್ ।
ಯತೋ ನೋ ಯುಧ್ಯಮಾನಾನಾಂ ಪರಂ ಶಕ್ತ್ಯಾ ಸುಯೋಧನ ॥
(ದ್ರೋ.ಪ ೧೫೨-೨೩)
ಸೈಂಧವೋ ನಿಹತೋ ಯುದ್ಧೇ ದೈವಮತ್ರ ಪರಂ ಸ್ಮೃತಮ್ ।
ಹತ್ವಾಽಸ್ಮಾಕಂ ಪೌರುಷಂ ವೈ ದೈವಂ ಪಶ್ಚಾತ್ ಕರೋತಿ ನಃ ॥೨೪॥
ದೈವೋಪಸೃಷ್ಟಃ ಪುರುಷೋ ಯತ್ ಕರ್ಮ ಕುರುತೇ ಕ್ವಚಿತ್ ।
ಕೃತಂ ಕೃತಂ ಹಿ ತತ್‌ಕರ್ಮ ದೈವೇನ ವಿನಿಪಾತ್ಯತೇ ॥ ೨೬ ॥

"ನಾವೆಲ್ಲರೂ ಯುದ್ಧಮಾಡುತ್ತಾ ನಿಂತಿದ್ದರೂ ಸೈಂಧವನು ಹತನಾದನೆಂದರೆ, ದೈವವೇ ಪ್ರಬಲವಾದದ್ದೆಂದು ಹೇಳಬೇಕು. ಮನುಷ್ಯನು ತಾನು ಮಾಡುವ ಪ್ರಯತ್ನವನ್ನು ಮಾಡಿ, ಸಿದ್ಧಿಯನ್ನು ದೈವೇಚ್ಛೆಗೆ ಬಿಡಬೇಕು..... ಎಂದನು.

43. ಕರ್ಣಾರ್ಜುನರ ಸಮರಸಮಯದಲ್ಲಿ, ಕರ್ಣನ ವಧಕಾಲವು ಸಮೀಪಿಸಿದ್ದರಿಂದ ಅವನ ಸರ್ಪಾಸ್ತ್ರ ವ್ಯರ್ಥವಾದದ್ದಲ್ಲದೆ, ಪರಶುರಾಮನು ಹೇಳಿಕೊಟ್ಟ ಮಹಾಸ್ತ್ರವೂ ಮರೆತುಹೋಯಿತು ; ಅವನ ರಥದ ಎಡಚಕ್ರವು ನೆಲದಲ್ಲಿ ಹೂತುಕೊಂಡು ರಥವು ಹೊರಳಿತು ; ಕುದುರೆಗಳು ಮುಗ್ಗರಿಸಿದವು ; ಸಾರಥಿ ಮುಮ್ಮಡಿಯಾದನು. ಹೀಗೆ, ಒಂದರ ಮೇಲೆ ಒಂದರಂತೆ ಬಂದ ವಿಪತ್ತನ್ನು ನೋಡಿ ಕರ್ಣನು ವ್ಯಥೆಗೊಂಡು ಕೈಕೈ ಕೊಡವಿಕೊಳ್ಳುತ್ತಾ "........ ಅಯ್ಯೋ ಪಾರ್ಥ ! ಒಂದು ಘಳಿಗೆ ತಾಳು; ಈ ಚಕ್ರವನ್ನು ಎತ್ತುತ್ತೇನೆ........ ಅಷ್ಟರೊಳಗೆ ಕುತ್ಸಿತಜನರ ಮಾರ್ಗವನ್ನು ಹಿಡಿದು ಹೊಡೆಯಬೇಡ. ನೀನು ಯುದ್ಧಧರ್ಮ ಬಲ್ಲವನು ;........" ಎಂದು ಕೇಳಿಕೊಂಡನು.

44. ಆಗ ಕೃಷ್ಣನು, "ಕರ್ಣ ! ಅದೃಷ್ಟವಶದಿಂದ ಈಗ ಧರ್ಮವನ್ನು ಜ್ಞಾಪಿಸಿಕೊಳ್ಳುತ್ತಿದ್ದೀಯೆ ! ಸಾಧಾರಣವಾಗಿ ಕೀಳುಜನರು ಕಷ್ಟದಲ್ಲಿ ಮುಳುಗಿ ಹೋದಾಗ ಅದಕ್ಕೆ **ದೈವವನ್ನು ದೂಷಿಸುತ್ತಾರೆ ; ತಮ್ಮ ದುಷ್ಕೃತ್ಯವನ್ನು ದೂಷಿಸಿಕೊಳ್ಳುವದಿಲ್ಲ.** ನೀನೂ ದುರ್ಯೋಧನ ದುಶ್ಶಾಸನ ಶಕುನಿಗಳೂ ಒಂಟಿಬಟ್ಟೆಯಲ್ಲಿದ್ದ ಕೃಷ್ಣೆಯನ್ನು ಸಭೆಗೆ ಎಳೆದು ತಂದಾಗ ಧರ್ಮ ಏಕೆ ಬೇಡವಾಯಿತು ?........ ಪಗಡೆಯಾಟವನ್ನರಿಯದ ಧರ್ಮರಾಜನನ್ನು ಸಭೆಗೆ ಕರೆತಂದು ಮೋಸದಿಂದ ಗೆದ್ದಿರಲ್ಲಾ, ಆಗ ನಿನ್ನ ಧರ್ಮ ಎಲ್ಲಿ ಹೋಗಿತ್ತು ? ....ಬಹುಜನ ಮಹಾರಥರು ಸುತ್ತ ಮುತ್ತಿಕೊಂಡು ಬಾಲನಾದ ಅಭಿಮನ್ಯುವನ್ನು ಯುದ್ಧದಲ್ಲಿ ಕೊಂದಿರಲ್ಲಾ, ಆಗ ನಿನ್ನ ಧರ್ಮ ಎಲ್ಲಿ ಹೋಗಿತ್ತು ?" ಎಂದು ಕೇಳಿದನು.

ಕರ್ಣನು ನಾಚಿ ತಲೆ ತಗ್ಗಿಸಿಕೊಂಡು ಯಾವ ಮಾತೂ ಆಡದೆ,.......... ರಥದಿಂದ ಕೆಳಕ್ಕೆ ಧುಮುಕಿ ರಥವನ್ನು ಎರಡು ತೋಳುಗಳಿಂದಲೂ ಎತ್ತಿದನು. ಅವನು ಅಷ್ಟು ಬಲಶಾಲಿಯಾಗಿದ್ದರೂ **ವಿಧಿಗೆ ಅನುಸಾರವಾಗಿ,** ಅದು ಏಳಲಿಲ್ಲ............

45. ಅರ್ಜುನನ ಬಾಣದಿಂದ ಕರ್ಣನ ವಧೆಯಾದ ಮೇಲೆ, ಶಲ್ಯನು ಬರಿಯದಾಗಿದ್ದ ರಥವನ್ನು ಹಿಂದಕ್ಕೆ ಶಿಬಿರಕ್ಕೆ ತೆಗೆದುಕೊಂಡು ಹೋಗಿ ಕರ್ಣನ ವೀರಕಾರ್ಯವನ್ನು ಹೊಗಳಿ **"ದೈವವು ಪಾಂಡವರಿಗೆ ಸಹಾಯಮಾಡುತ್ತಿದೆ ; ನಮಗೆ ವಿರುದ್ಧವಾಗಿದೆ;** ಏನು ಮಾಡೋಣ !" ಎಂದು ದುರ್ಯೋಧನನನ್ನು ಸಮಾಧಾನಪಡಿಸಿದನು.

46. ಕೌರವ–ಪಾಂಡವ ಸೈನ್ಯವೆಲ್ಲಾ ನಾಶವಾಗಿ ದುರ್ಯೋಧನನೂ ಸತ್ತ ಮೇಲೆ, ಧರ್ಮರಾಜನ ಪ್ರಾರ್ಥನೆಯಂತೆ ಕೃಷ್ಣನು ರಥದಲ್ಲಿ ಹಸ್ತಿನಗರಕ್ಕೆ

ಹೋಗಿ, ಧೃತರಾಷ್ಟ್ರನಿಗೂ ಗಾಂಧಾರಿಗೂ ನಮಸ್ಕರಿಸಿ, ಅತ್ಯಂತ ಸಂತಪ್ತ ಹೃದಯಳಾದ ತಪಸ್ವಿನೀಗಾಂಧಾರಿಯನ್ನು ಸಮಾಧಾನಮಾಡಲು ಒಂದು ಗಳಿಗೆಯವರೆಗೆ ಅಳುತ್ತಿದ್ದು, ಆಮೇಲೆ ಕಣ್ಣನ್ನು ತೊಳೆದುಕೊಂಡು ತುಂಬಾ ನಮ್ರತೆಯಿಂದ ಧೃತರಾಷ್ಟ್ರನನ್ನು ಕುರಿತು, "ಪ್ರಭೂ! ನಿನಗೆ ತಿಳಿಯದೇ ಇರುವದು ಯಾವದೂ ಇಲ್ಲ; **ಕಾಲಗತಿ ಎಲ್ಲವೂ ತಿಳಿದೇ ಇದೆ;**........ಪಾಂಡವರು ಏನೇನೋ ಕಷ್ಟಪಟ್ಟರು: ಯುದ್ಧವನ್ನು ತಪ್ಪಿಸುವದಕ್ಕಾಗಿ ನಾನೇ ಬಂದು ಐದು ಊರುಗಳನ್ನು ಕೇಳಿದೆ; **ಕಾಲಪ್ರೇರಿತನಾಗಿ** ನೀನು ಕೊಡಲು ಒಪ್ಪಲಿಲ್ಲ; ಆದರಿಂದ ಈಗ ಕ್ಷತ್ರಿಯಕುಲವೆಲ್ಲಾ ನಾಶವಾಯಿತು. ಭೀಷ್ಮಾದಿಗಳು ಶಾಂತಿಯನ್ನು ಬೋಧಿಸುತ್ತಲೇ ಇದ್ದರೂ ಅದು ನಿನ್ನ ಮನಸ್ಸಿಗೆ ಬರಲಿಲ್ಲ. ಏನು ಮಾಡುವದು? **ಕಾಲ ಬಂದರೆ ಯಾರಿಗಾದರೂ ಬುದ್ಧಿ ಮೋಸ ಹೋಗುತ್ತದೆ.** ನೀನು ತಿಳಿದವನು. ಆದ್ದರಿಂದ ಪಾಂಡವರ ಮೇಲೆ ತಪ್ಪು ಹೊರಿಸಬೇಡ............ಅಮ್ಮಾ! ಸುವ್ರತೆ ಗಾಂಧಾರಿ!...........ವಿವೇಕದಿಂದ ದುಃಖವನ್ನು ಸಹಿಸಿಕೋ ತಾಯಿ! ಎಂದೂ ಪಾಂಡವರಿಗೆ ಕೇಡುಕನ್ನು ಕೋರಬೇಡ........ತಪಶ್ಶಕ್ತಿಯಿಂದ ಮೂರು ಲೋಕನನ್ನೂ ನೀನು ಸುಟ್ಟುಹಾಕಿಬಿಡಬಲ್ಲೆ!........" ಎಂದನು.

47. ಅಶ್ವತ್ಥಾಮನು ಕೃಪ-ಕೃತವರ್ಮರೊಡನೆ, ಮುರಿದು ಬಿದ್ದ ಮಹಾವೃಕ್ಷದಂತೆ ನೆಲದ ಮೇಲೆ ಬಿದ್ದಿದ್ದ ದುರ್ಯೋಧನನನ್ನು ಸಮಾಧಾನಮಾಡುತ್ತಿರಲು, ದುರ್ಯೋಧನನು ಕಣ್ಣನ್ನು ಒರಸಿಕೊಳ್ಳುತ್ತಾ ಅವನನ್ನು ಕುರಿತು, "........ಬ್ರಹ್ಮನು ನಿಯಮಿಸಿರುವ ಲೋಕಸ್ವಭಾವವೇ ಹೀಗೆ............ನಾನು ಕ್ಷತ್ರಿಯಧರ್ಮದಲ್ಲಿದ್ದುದ್ದರಿಂದ ನೀವು ನನಗಾಗಿ ವ್ಯಥೆಪಡಬೇಡಿ. ನೀವೂ ನಿಮ್ಮ ಕೈಲಾದದ್ದನ್ನೆಲ್ಲಾ ಮಾಡಿ ಜಯ ದೊರಕಿಸಲು ಯತ್ನಮಾಡಿದಿರಿ. **ಆದರೆ ದೈವಕ್ಕೆ ಯಾರು ಹೊಣೆ?"** ಎಂದು ಕಣ್ಣಿನಲ್ಲಿ ನೀರು ತಂದುಕೊಂಡು ಸುಮ್ಮನಾದನು.

48. ಸೌಪ್ತಿಕಪರ್ವದಲ್ಲಿ, ಕೃಪನು ಅಶ್ವತ್ಥಾಮನನ್ನು ಕುರಿತು,

"ಯಾವ ಕೆಲಸಕ್ಕಾದರೂ ದೈವಸಹಾಯವು ಬೇಕು; ದೈವಸಹಾಯವಿದ್ದು ಮನುಷ್ಯನು ದಕ್ಷತೆ- ದಾಕ್ಷಿಣ್ಯಗಳಿಂದ ಕೆಲಸಮಾಡಿದರೆ, ಕಾರ್ಯ ಸಿದ್ಧಿಸುತ್ತದೆ........**ನಾವು ಮಾಡುವ ಪ್ರಯತ್ನವನ್ನು ಮಾಡಿ, ದೈವವು ವಿರುದ್ಧವಾಗಿ ಬಂದರೆ, ಅದಕ್ಕೆ ಚಿಂತೆಮಾಡಬೇಕಾಗಿರುವುದಿಲ್ಲ"** ಎಂದನು.

49. ಸಂತೋಷದಲ್ಲಿ ಕವಚವನ್ನು ಬಿಚ್ಚಿಹಾಕಿ, ನಿಶ್ಚಿಂತೆಯಿಂದ ಮಲಗಿ ನಿದ್ರೆಮಾಡುತ್ತಿರುವ ಪಾಂಚಾಲರನ್ನು ಕೊಂದು ಬಂದರೆ, ತನ್ನ ಮನಸ್ಸಿಗೆ ಶಾಂತಿ ದೊರೆಯುವದಲ್ಲದೆ, ತನ್ನ ತಂದೆಯ ಋಣ ತೀರಿ, ದುರ್ಯೋಧನ, ಕರ್ಣ, ಭೀಷ್ಮ ಮೊದಲಾದವರ ಮರಣಕ್ಕೆ ಪ್ರತೀಕಾರವಾಗುವದೆಂದು ಅಶ್ವತ್ಥಾಮನು ಹೇಳಿದಾಗ, ಕೃಪನು 'ದೈವಸಂಕಲ್ಪದಿಂದ ನಿನಗೆ ಈ ಪ್ರತೀಕಾರ ಬುದ್ಧಿ ಬಂದಿದೆ. ಅದನ್ನು ಯಾರೂ ತಪ್ಪಿಸುವದಕ್ಕೆ ಆಗುವುದಿಲ್ಲ............." ಎಂದನು.

50. (ಸ್ತ್ರೀ ಪರ್ವದಲ್ಲಿ) ಸರ್ವನಾಶವಾದುದಕ್ಕಾಗಿ ಧೃತರಾಷ್ಟ್ರನು ದುಃಖಪಡುತ್ತಿರಲು, ವಿದುರನು ಅವನನ್ನು ಸಮಾಧಾನಮಾಡುತ್ತಾ "ಕಾಲ ಬಂದರೆ, ಯುದ್ಧಮಾಡದಿರುವವನೂ ಸಾಯುತ್ತಾನೆ ; ಬರದಿದ್ದರೆ, ಯುದ್ಧಮಾಡುವವನೂ ಬದುಕಿಕೊಳ್ಳುತ್ತಾನೆ. ಕಾಲವನ್ನು ಯಾರೂ ಮೀರುವದಕ್ಕೆ ಆಗುವದಿಲ್ಲ. ಅದು ಎಲ್ಲರನ್ನೂ ತನ್ನ ಹತ್ತಿರಕ್ಕೆ ಎಳೆದುಕೊಳ್ಳುತ್ತದೆ. ಅದಕ್ಕೆ ಬೇಕಾದವರಿಲ್ಲ, ಬೇಡದವರಿಲ್ಲ........" ಎಂದನು.

51. ಗಾಂಧಾರಿಯು ದ್ರೌಪದಿಯನ್ನು ಉದ್ದೇಶಿಸಿ, "ಅಳಬೇಡ ತಾಯಿ! ನನ್ನನ್ನು ನೋಡಿ ನೀನು ಸಮಾಧಾನಮಾಡಿಕೊ ! ಇದು ಲೋಕಕ್ಷಯದ ಕಾಲ; ಆದ್ದರಿಂದ ಅವಶ್ಯವಾಗಿ ನಡೆಯಲೇಬೇಕಾದದ್ದು ನಡೆದುಹೋಯಿತು. ಅದು ನಮ್ಮ ಅಧೀನವಲ್ಲ. ನಿನ್ನ ಮಕ್ಕಳೂ ಯುದ್ಧದಲ್ಲಿ ಸತ್ತರು ; ನನ್ನ ಮಕ್ಕಳೂ ಸತ್ತರು. ಅವರಿಗಾಗಿ ಅಳಬೇಡ........." ಎಂದಳು.

52. ರಣರಂಗದಲ್ಲಿ ಸತ್ತು ಬಿದ್ದಿದ್ದ ತಮ್ಮ ತಮ್ಮ ಗಂಡಂದಿರನ್ನೂ ಮಕ್ಕಳನ್ನೂ ಹುಡುಕುತ್ತಾ ಹೋಗುತ್ತಿದ್ದಾಗ, ಗಾಂಧಾರಿಯು ದುರ್ಯೋಧನ ಮೊದಲಾದವರನ್ನು ಕಂಡು ಬಹಳ ದುಃಖದಿಂದ ಕೃಷ್ಣನನ್ನು ಕುರಿತು, 'ಈ ಸರ್ವನಾಶವನ್ನು ತಪ್ಪಿಸಲು ನಿನಗೆ ಶಕ್ತಿ ಸಾಮರ್ಥ್ಯಬಲಗಳಿದ್ದರೂ ಉಪೇಕ್ಷಿಸಿದ್ದರಿಂದ, ನೀನೂ ನಿನ್ನ ಬಂಧುಬಾಂಧವರನ್ನೆಲ್ಲಾ ಕಳೆದುಕೊಂಡು ಗೋಳಾಡುವಂತಾಗಲಿ !' ಎಂದು ಶಪಿಸಿದೊಡನೆ, ಆ ಘೋರವಾದ ವಾಕ್ಯವನ್ನು ಕೇಳಿ ಕೃಷ್ಣನು, ನಸುನಗುತ್ತಾ "ಅಮ್ಮಾ ಕ್ಷತ್ರಿಯೆ ! ಇದನ್ನು ನಾನು ಬಲ್ಲೆ. ದೈವನಿಯಮದಂತೆ ಯಾದವರೂ ತಮ್ಮತಮ್ಮಲ್ಲಿಯೇ ಹೊಡೆದಾಡಿ ನಾಶವಾಗುತ್ತಾರೆ. ಅವರೂ ನನ್ನಿಂದಲೇ ಸಾಯಬೇಕು ; ಮತ್ತಾರೂ ಅವರನ್ನು ಕೊಲ್ಲಲಾರರು! ಅದಿರಲಿ; ದುಃಖಿಸುವದನ್ನು ಬಿಟ್ಟೇಳು; ನಿನ್ನ ತಪ್ಪನ್ನು ನನ್ನ ಮೇಲೆ ಹಾಕಬೇಡ. ನಿನ್ನಿಂದಲೇ ಕುರುವಂಶ ನಾಶವಾದದ್ದು.

ನಿನ್ನ ಮಗ ದುರಾತ್ಮ, ದುರಭಿಮಾನಿ, ಮತ್ಸರಿ, ದ್ವೇಷಿ ; ನಿನ್ನಂಥ ವಳು ಅಂಥವನನ್ನು ಪಡೆದುದು ಸಹಜವಾಗಿಯೇ ಇದೆ !...." ಎಂದನು.

53. ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮನನ್ನು ಕುರಿತು, ಧರ್ಮರಾಜನು "ನಿನ್ನ ಮೈಯಲ್ಲೆಲ್ಲಾ ಬಾಣಗಳು ನೆಟ್ಟುಕೊಂಡು ರಕ್ತಸುರಿಯುವಂತೆ ನನ್ನಿಂದ ಆಯಿತಲ್ಲ ! ದುರ್ಯೋಧನನ ಮೇಲಣ ಕೋಪದಿಂದಲೂ ರಾಜ್ಯದ ಮೇಲಣ ಆಶೆಯಿಂದಲೂ ನಾವು ಈ ನೀಚಕೃತ್ಯವನ್ನು ಮಾಡಿದೆವಲ್ಲಾ. ನನಗಾವ ದುರ್ಗ ತಿಯಿದೆಯೋ ಎಂದು ನನ್ನ ಮನಸ್ಸು ಅಶಾಂತವಾಗಿದೆ" ಎಂದನು. ಇದಕ್ಕೆ ಭೀಷ್ಮನು ಹೇಳಿದ್ದೇನೆಂದರೆ, "ಇದರಲ್ಲಿ ನಿನ್ನ ಯತ್ನವೇನಿದೆ ಯುಧಿಷ್ಠಿರ? ಇದಕ್ಕೆ ಕಾರಣ ಕರ್ಮ; (ವಿಧಿ-ಪ್ರಾರಬ್ಧ) ಅದು ಕಣ್ಣಿಗೆ ಗೋಚರವಲ್ಲ (ಅದೃಷ್ಟ) ; ಅದು ಬಹು ಸೂಕ್ಷ್ಮ. ಈ ಸಂದರ್ಭಕ್ಕೆ ಒಂದು ಕಥೆಯನ್ನು ನಿನಗೆ ಹೇಳುತ್ತೇನೆ. 'ವೃದ್ಧಳೂ ಶಾಂತಳೂ ಆಗಿದ್ದ ಗೌತಮಿ ಎಂಬೊಬ್ಬಳ ಮಗನು ಹಾವು ಕಡಿದು ಸತ್ತುಹೋದನು. ಒಬ್ಬ ಬೇಡನು ಆ ಹಾವನ್ನು ಹಿಡಿದು ಹಗ್ಗದಿಂದ ಕಟ್ಟಿ ತಂದು ಬೇಕಾದರೆ ಕೊಲ್ಲುವದಾಗಿಯೂ ಸುಡುವದಾಗಿಯೂ ಹೇಳಿದನು. ಗೌತಮಿಯು ಒಪ್ಪದೆ, ಅದನ್ನು ದಯೆಯಿಂದ ಬಿಟ್ಟುಬಿಡಲು ಹೇಳಿದಳು. ಆದರೆ ಆ ವ್ಯಾಧನು ಅದನ್ನು ಕೊಲ್ಲುವದೇ ಧರ್ಮವೆಂದು ವಾದಮಾಡಿದನು. ಅದನ್ನು ಕೊಂದರೆ, ಸತ್ತವನು ಬದುಕುವದಿಲ್ಲವಾದ್ದರಿಂದ ಬಿಟ್ಟುಬಿಡಲು ಗೌತಮಿ ಮತ್ತೆ ಹೇಳಿದಳು. ವ್ಯಾಧನು ಅದಕ್ಕೆ ಒಪ್ಪಲಿಲ್ಲ. ಅಷ್ಟರಲ್ಲಿ ಆ ಹಾವು ಚೇತರಿಸಿ ಕೊಂಡು "ಕಚ್ಚಲು ನಾನು ಸ್ವತಂತ್ರನಲ್ಲ ; ಮೃತ್ಯುವು ನನ್ನನ್ನು ಪ್ರೇರಿಸಿದ್ದ ರಿಂದ ನಾನು ಅವನನ್ನು ಕಚ್ಚಿದೆ ; ನನ್ನದೇನು ತಪ್ಪು ? ಕಾಮ-ಕ್ರೋಧವಶ ನಾಗಿ ನಾನು ಕಚ್ಚಲಿಲ್ಲ. ಆದ್ದರಿಂದ ಅದು ಪಾಪಕಾರ್ಯವಾದರೆ, ಆ ಪಾಪ ಮೃತ್ಯುವಿಗೆ ಬರಬೇಕು" ಎಂದಿತು. ಆಗ ಮೃತ್ಯುವು ಬಂದು, "ಅಯ್ಯೊ, ಸರ್ಪರಾಜ ! ನಾನೂ ಸ್ವತಂತ್ರನಲ್ಲ; ನಾನು ಕಾಲದಿಂದ ಪ್ರೇರಿತನಾಗಿ ನಿನ್ನನ್ನು ಪ್ರೇರೇಪಿಸಿದೆ. ಈ ಜಗತ್ತೆಲ್ಲಾ ಕಾಲಕ್ಕೆ ಅಧೀನವಾಗಿದೆ. ನಾವು ಮಾಡುವದಕ್ಕಾಗಲೀ ಬಿಡುವದಕ್ಕಾಗಲೀ ಕಾಲವೇ ಕಾರಣ. ಸೂರ್ಯ ಚಂದ್ರ, ವೃಷ್ಟಿ, ಸಮುದ್ರ, ಭೂಮಿ, ಸಮಸ್ತವೂ ಕಾಲಾಧೀನವಾಗಿ ಇದೆ. ಆದ್ದರಿಂದ ನನ್ನ ತಪ್ಪೇನು ? ಎಂದಿತು. ಆಗ ಕಾಲವು ಬಂದು ಮೃತ್ಯುವನ್ನೂ ಸರ್ಪವನ್ನೂ ಆ ಬೇಡನನ್ನೂ ಕುರಿತು, 'ಈ ಹುಡುಗ ಸಾಯಲು ನಾನಾಗಲೀ ನೀವಾಗಲೀ ಕಾರಣರಲ್ಲ ; ಅವನು ಮಾಡಿದ್ದ ಕರ್ಮವೇ ಅವನನ್ನು ಕೊಂದಿತು. ನಾವೆಲ್ಲಾ ಕರ್ಮಕ್ಕೆ ವಶರು. ಕರ್ಮಗಳು ನಮ್ಮನ್ನು ಪ್ರೇರಿಸುತ್ತವೆ. ಅದರಿಂದ ನಾವು ಒಬ್ಬರ ನ್ನೊಬ್ಬರು ಪ್ರೇರಿಸುತ್ತೇವೆ. ಆದ್ದರಿಂದ ಇವನ ಸಾವಿಗೆ ನಾವು

ಯಾರೂ ಕಾರಣರಲ್ಲ ; ಇವನೇ–ಇವನ ಕರ್ಮವೇ ಕಾರಣ' ಎಂದಿತು. ಗೌತಮಿಯು, "ನನ್ನ ಕರ್ಮದಿಂದಲೂ ನನ್ನ ಮಗನ ಕರ್ಮದಿಂದಲೂ ಅವನು ಸತ್ತನು. ಅಯ್ಯೋ ವ್ಯಾಧ! ಈ ಹಾವನ್ನು ಬಿಟ್ಟುಬಿಡು ; ಕಾಲ– ಮೃತ್ಯು ಗಳಿರಾ, ನೀವೂ ಹೋಗಿ" ಎಂದಳು. "ಆದ್ದರಿಂದ ಯುಧಿಷ್ಠಿರ ! ಸುಮ್ಮನೆ ಕೊರಗಬೇಡ ; ಶಾಂತನಾಗು. ಈ ರಾಜರೆಲ್ಲಾ ಸತ್ತದ್ದು, ನಿನ್ನ ಕರ್ಮದಿಂದ ಲೂ ಅಲ್ಲ, ದುರ್ಯೋಧನನ ಕರ್ಮದಿಂದಲೂ ಅಲ್ಲ ; ಮುಖ್ಯವಾಗಿ ಅವರವರ ಕರ್ಮವಶದಿಂದಲೇ ಅವರವರು ಕಾಲಾಧೀನರಾದರು' ಎಂದನು.

ಪ್ರಸಿದ್ಧ ಯೋಗವಾಸಿಷ್ಠಗ್ರಂಥದಲ್ಲಿ ಬಂದಿರುವ ಪ್ರಾರಬ್ಧ ಮತ್ತು ಪೌರುಷಗಳ ವಿಚಾರ :

54. ಬ್ರಹ್ಮನಿಷ್ಠವರಿಷ್ಠರಾದ ವಸಿಷ್ಠಮಹರ್ಷಿಗಳು ಶ್ರೀರಾಮಚಂದ್ರನಿಗೆ ಮುಮುಕ್ಷುಗಳು ಮಾಡಬೇಕಾದ ಸಾಧನೆಗಳನ್ನು ಹೇಳುವಾಗ ದೈವವನ್ನು ಪೂರ್ಣವಾಗಿ ನಿರಾಕರಿಸಿ ಪುರುಷಪ್ರಯತ್ನದ ಮಹತ್ತ್ವವನ್ನೇ ಎತ್ತಿ ಹಿಡಿದು ವಿಸ್ತಾರವಾಗಿ ಬೋಧಿಸಿದ್ದಾರೆ.

ಪೌರುಷಂ ಸ್ಕಂಧಫಲವದ್ದೃಷ್ಟಂ ಪ್ರತ್ಯಕ್ಷತೋ ನ ಯತ್ ।
ಕಲ್ಪಿತಂ ಮೋಹಿತೈರ್ಮಂದೈರ್ದೈವಂ ಕಿಂಚಿನ್ನ ವಿದ್ಯತೇ ॥

ಮರದ ಕೊಂಬೆಯಲ್ಲಿ ಬಿಟ್ಟಿರುವ ಫಲದಂತೆ, ಪುರುಷಪ್ರಯತ್ನದ ಫಲವು ಪ್ರತ್ಯಕ್ಷವಾಗಿ ಎಲ್ಲರ ಕಣ್ಣಿಗೆ ಕಾಣಬರುವಂಥದು. ದೈವವಾದರೊ, ಹೀಗೆ ಯಾರ ಕಣ್ಣಿಗೂ ಕಾಣುವದಲ್ಲ ; ಮೂಢರು ದೈವವನ್ನು ಮೋಹದಿಂದ ಕಲ್ಪಿಸಿ ಕೊಳ್ಳುವದರಿಂದ ಅದು **ನಿಜವಾದುದಲ್ಲ**; ಆದ್ದರಿಂದ ದೈವವು ಎಷ್ಟು ಮಾತ್ರಕ್ಕೂ ಇಲ್ಲ.

ತಸ್ಮಾತ್ ಪ್ರಾಕ್‌ಪೌರುಷಾದ್ದೈವಂ ನಾನ್ಯತ್ತತ್ ಪ್ರೋಜ್ಝ್ಯ ದೂರತಃ।
ಸಾಧುಸಂಗಮಸಚ್ಛಾಸ್ತ್ರೈಃ ಜೀವಮುತ್ತಾರಯೇತ್ ಬಲಾತ್ ॥

55. ಹಿಂದೆ ನಾವೇ ಪ್ರಯತ್ನಪೂರ್ವಕ ಮಾಡಿರುವ ಪೌರುಷಕರ್ಮವೇ ದೈವವಲ್ಲದೆ, ದೈವವು ಬೇರೆ ಇಲ್ಲ. ನಮ್ಮ ಪೂರ್ವಪೌರುಷವೇ ನಮ್ಮ ದೈವ. ಅದರೆ ಅದು ಫಲವನ್ನು ಕೊಡುವದಕ್ಕೆ ಪ್ರಬಲವಾಗಿ ಪ್ರಾರಂಭವಾಗಿರುವದರಿಂದ ಅದು ಪ್ರಾರಬ್ಧ ಎನಿಸಿದೆ. ಆ ಫಲವು ಇಷ್ಟವೂ ಆಗಿರಬಹುದು ; ಅನಿಷ್ಟವೂ ಆಗಿರಬಹುದು ; ಅನಿಷ್ಟಫಲದಿಂದ ತಪ್ಪಿಸಿಕೊಳ್ಳುವದಕ್ಕಾಗಲೀ, ಅದನ್ನು ಮಾರ್ಪಡಿಸುವದಕ್ಕಾಗಲೀ ಈಗ ನಮ್ಮಿಂದ ಸಾಧ್ಯವಲ್ಲವಾದುದರಿಂದ ಅದರ

ಚಿಂತನೆಯನ್ನು ಬಿಟ್ಟುಬಿಡಬೇಕು. ಹೊರಗೆ ಬರುವ ಇಷ್ಟಫಲವನ್ನಾಗಲಿ ಅನಿಷ್ಟಫಲವನ್ನಾಗಲಿ ತಪ್ಪಿಸಿಕೊಳ್ಳುವದು ಭಕ್ತನಿಗೂ ಸಾಧ್ಯವಲ್ಲ, ಯೋಗಿಗೂ ಸಾಧ್ಯವಲ್ಲ, ಜ್ಞಾನಿಗೂ ಸಾಧ್ಯವಲ್ಲ. ಆದರೆ, ಇಷ್ಟಾನಿಷ್ಟಗಳು ನಮ್ಮ ಮನಸ್ಸಿನಲ್ಲಿ ಹರ್ಷ–ಶೋಕಗಳನ್ನು ಉಂಟುಮಾಡದಂತೆ ಪ್ರಯತ್ನಮಾಡಿ, ಮನಸ್ಸನ್ನು ವಿವೇಕ–ವೈರಾಗ್ಯಗಳ ಬಲದಿಂದ ಸಮತ್ವದಲ್ಲಿ ಇಟ್ಟುಕೊಳ್ಳುವದು ಮಾತ್ರ ನಮ್ಮಿಂದ ಸಾಧ್ಯ. ಇದಕ್ಕಾಗಿ ಸಜ್ಜನರ ಸಹವಾಸದಿಂದ ಸಚ್ಛಾಸ್ತ್ರ (ಉಪನಿಷತ್ತು) ಗಳನ್ನು ಅಭ್ಯಸಿಸಿ, ಸದ್ಗುರುಗಳ ಉಪದೇಶವನ್ನು ಪಡೆದು, ಅಧ್ಯಾತ್ಮ ಸಾಧನೆಯಿಂದ ನಮ್ಮನ್ನು ನಾವು ಉದ್ಧರಿಸಿಕೊಳ್ಳಬೇಕು.

ಅತ್ರೈಕಂ ಪೌರುಷಂ ಯತ್ನಂ ವರ್ಜಯಿತ್ವೇತರಾ ಗತಿಃ ।
ಸರ್ವದುಃಖಕ್ಷಯಪ್ರಾಪ್ತೌ ನ ಕಾಚಿದುಪಪದ್ಯತೇ ॥ (3–6–14)

ಸರ್ವದುಃಖಗಳನ್ನೂ ನಾಶಮಾಡುವದರಲ್ಲಿ ಸಾಮರ್ಥ್ಯವುಳ್ಳದ್ದು ಪುರುಷ ಪ್ರಯತ್ನ ಒಂದೇ ಸರಿ ; ಇದನ್ನು ಬಿಟ್ಟರೆ ಈ ಕಾರ್ಯಸಾಧನೆಗೆ ಬೇರೆ ಯಾವ ಉಪಾಯವೂ ಇಲ್ಲ.

ನ ತದಸ್ತಿ ಜಗತ್ಕೋಶೇ ಶುಭಕರ್ಮಾನುಪಾತಿನಾ ।
ಯತ್ ಪೌರುಷೇಣ ಶುದ್ಧೇನ ನ ಸಮಾಸಾದ್ಯತೇ ಜನೈಃ॥ (3–92–8)

ಸರಿಯಾದ ಪೌರುಷದಿಂದಲೂ ಶ್ರದ್ಧೆಯಿಂದಲೂ ಸಾಧಿಸಲಾಗದಿರುವ ಶುಭಕರ್ಮವು ಜಗತ್ತಿನಲ್ಲಿ ಯಾವದೂ ಇಲ್ಲ.

ಸರ್ವಮೇವೇಹ ಹಿ ಸದಾ ಸಂಸಾರೇ ರಘುನನ್ದನ ।
ಸಮ್ಯಕ್‌ಪ್ರಯುಕ್ತಾತ್ ಸರ್ವೇಣ ಪೌರುಷಾತ್ ಸಮವಾಪ್ಯತೇ॥
(2–4–8)

ಸರಿಯಾದ ಪುರುಷಪ್ರಯತ್ನದಿಂದ ಸಕಲಕಾರ್ಯಗಳೂ ಸರ್ವದಾ ಸರ್ವರಿಂದಲೂ ಸಂಪೂರ್ಣವಾಗಿ ಸಾಧಿಸಲು ಸಾಧ್ಯವಾಗುತ್ತದೆ.

ಯೋ ಯಮರ್ಥಂ ಪ್ರಾರ್ಥಯತೇ ತದರ್ಥಂ ಚೇಹತೇ ಕ್ರಮಾತ್ ।
ಅವಶ್ಯಂ ಸ ತಮಾಪ್ನೋತಿ ನ ಚೇದರ್ಧಾನ್ನಿವರ್ತತೇ ॥ (2–4–12)

ಪ್ರಯತ್ನಮಧ್ಯದಲ್ಲಿ ಕೈಬಿಡದೆ, ಪೂರ್ಣವಾಗಿ ಪ್ರಯತ್ನಮಾಡಿದರೆ, ಯಾರು ಯಾವುದನ್ನು ಬಯಸುವರೋ ಅವರು ಆ ಉದ್ದಿಷ್ಟಫಲವನ್ನು ನಿಶ್ಚಿತವಾಗಿ ಪಡೆದೇ ಪಡೆಯುವರು.

ಪುರುಷಾರ್ಥೇನ ದೇವಾನಾಂ ಗುರುರೇವ ಬೃಹಸ್ಪತಿಃ ।
ಶುಕ್ರೋ್ರೀ ದೈತ್ಯೇನ್ದ್ರ ಗುರುತಾಂ ಪುರುಷಾರ್ಥೇನ ಚಾಸ್ಥಿತಃ ॥
(2-7-7)

ಬೃಹಸ್ಪತಿಯು ದೇವತೆಗಳಿಗೆ ಗುರುವಾಗಿರುವದೂ ಶುಕ್ರಾಚಾರ್ಯನು ದೈತ್ಯರಿಗೆ ಗುರುವಾಗಿರುವದೂ ಅವರವರ ಸಮರ್ಥವಾದ ಪೌರುಷಪ್ರಯತ್ನ ದಿಂದಲೇ ಸರಿ.

ಪೌರುಷೇಣ ಜಿತಾ ದೈತ್ಯಾಃ ಸ್ಥಾಪಿತಾ ಭುವನಕ್ರಿಯಾಃ ।
ರಚಿತಾನಿ ಜಗನ್ತೀಹ ವಿಷ್ಣುನಾ ನ ಚ ದೇವತಃ ॥ (2-7-31)

ವಿಷ್ಣುವು ದೈತ್ಯರನ್ನು ಜಯಿಸಿದ್ದಾಗಲಿ, ವ್ಯವಸ್ಥಿತವಾಗಿ ಜಗತ್ತಿನ ಪಾಲನೆ ಯನ್ನು ಮಾಡುವದಾಗಲಿ, ಅವನ ಪೌರುಷತಪೋಬಲದಿಂದಲೇ ಹೊರತು ದೈವ (ಪ್ರಾರಬ್ಧ) ವನ್ನು ಆಶ್ರಯಿಸಿ ಅಲ್ಲ.

ದೈನ್ಯದಾರಿದ್ರ್ಯದುಃಖಾರ್ತಾ ಅಪ್ಯನ್ಯೇ ಪುರುಷೋತ್ತಮಾಃ ।
ಪೌರುಷೇಣೈವ ಯತ್ನೇನ ಯಾತಾ ದೇವೇನ್ದ್ರತುಲ್ಯತಾಮ್ ॥
(2-5-27)

ದಾರಿದ್ರ್ಯ- ದುಃಖಗಳ ಅತ್ಯಂತ ಹೀನ- ದೀನಸ್ಥಿತಿಯಿಂದ ದೇವೇಂದ್ರನ ಐಶ್ವರ್ಯ-ಸಂಪತ್ತುಗಳ ಅತ್ಯುನ್ನತಸ್ಥಿತಿಗೆ ಕೆಲವು ಉತ್ತಮರಾದ ಪುರುಷರು ತಮ್ಮ ಬಲಿಷ್ಠವಾದ ಪ್ರಯತ್ನದಿಂದಲೇ ಏರಿದ್ದಾರೆ.

ಈಶ್ವರಪ್ರೇರಿತೋ ಗಚ್ಛೇತ್ ಸ್ವರ್ಗಂ ನರಕಮೇವ ವಾ ।
ಸ ಸದೈವ ಪರಾಧೀನಃ ಪಶುರೇವ ನ ಸಂಶಯಃ ॥ (2-6-27)

ತನ್ನ ಕರ್ಮಕ್ಕೆ ಸಂಬಂಧಪಡದಿದ್ದರೂ ತಾನು ಸ್ವರ್ಗಕ್ಕಾಗಲೀ ನರಕಕ್ಕಾ ಗಲೀ ಸ್ವೇಚ್ಛೆಯಾದ ಈಶ್ವರಪ್ರೇರಣೆಯಿಂದಲೋ ದೈವಸಂಕಲ್ಪದಿಂದಲೋ ಹೋಗಬೇಕಾಗುತ್ತದೆ- ಎಂದು ಯಾವ ಮೂಢನು ಭಾವಿಸುತ್ತಾನೋ ಅವನ ಚಿತ್ತವು ಸರ್ವದಾ ಪರಾಧೀನವಾಗಿರುವದರಿಂದ ಅವನು ಸಾಕ್ಷಾತ್ ಪಶುವೇ ಸರಿ.

ದೈವಂ ನಾಮ ನ ಕಿಂಚನ ॥ (2-5-18) ; ದೈವಂ ನ ವಿದ್ಯತೇ ॥ (2-8-13) ; ದೈವಮಸತ್ಸದಾ ॥ (2-8-11)

ದೈವವೆಂದರೆ ಯಾವದೂ ಅಲ್ಲ ; ದೈವವೆಂಬಿದು ಇಲ್ಲವೇ ಇಲ್ಲ ; ದೈವವು ಎಂದೂ ಇಲ್ಲದ್ದು.

ಪೌರುಷೋಪನತಾ ನಿತ್ಯಮಿಷ್ಟಾನಿಷ್ಟಸ್ಯ ವಸ್ತುನಃ ।
ಪ್ರಾಪ್ತಿರಿಷ್ಟಾಽಪ್ಯನಿಷ್ಟಾ ವಾ ದೈವಶಬ್ದೇನ ಕಥ್ಯತೇ ॥ (2-9-5)

ನಾವೇ ಹಿಂದೆ ಮಾಡಿರುವ ಶುಭಾಶುಭಕರ್ಮಗಳ ಫಲವಾಗಿ ಈಗ ತಪ್ಪದೆ ನಾವು ಭೋಗಿಸಬೇಕಾದ ಇಷ್ಟಾನಿಷ್ಟಗಳಿಗೇ ದೈವ ಎನ್ನುತ್ತಾರೆ.

ಪ್ರಾಕ್ಸ್ವಕರ್ಮೇತರಾಕಾರಂ ದೈವಂ ನಾಮ ನ ವಿದ್ಯತೇ ।
ಪ್ರಾಕ್ತನಂ ಪೌರುಷಂ ತದ್ವೈ ದೈವಶಬ್ದೇನ ಕಥ್ಯತೇ ॥ (2–6–4)

ಈಗ ಫಲೋನ್ಮುಖವಾಗಿರುವ ನಮ್ಮ ಹಿಂದಿನ ಕರ್ಮವನ್ನು ಬಿಟ್ಟು ದೈವವೆಂಬಿದು ಬೇರೆ ಇಲ್ಲ. ನಮ್ಮ ಹಿಂದಿನ ಕರ್ಮದ ಫಲವೇ ಈಗ ದೈವ ಎನ್ನಿಸಿಕೊಂಡಿದೆ.

ದ್ವೌ ಹುಡಾವಿವ ಯುದ್ಧ್ಯೇತೇ ಪುರುಷಾರ್ಥೌ ಪರಸ್ಪರಮ್ ।
ಯ ಏವ ಬಲವಾಂಸ್ತತ್ರ ಸ ಏವ ಜಯತಿ ಕ್ಷಣಾತ್ ॥ (2–6–10)

ನಾವು ಯಾವದೊಂದು ದಿಶೆಯಲ್ಲಿ ಹಿಂದೆ ಮಾಡಿದ ಪ್ರಯತ್ನವೂ ಅದಕ್ಕೆ ವಿರುದ್ಧವಾಗಿ ಈಗ ಮಾಡಿದ ಪ್ರಯತ್ನವೂ ಒಂದನ್ನೊಂದು ಎದುರಿಸುವ ಕೊಬ್ಬಿದ ಟಗರುಗಳಂತೆ ಹೋರಾಡಿ, ಇವುಗಳಲ್ಲಿ ಹೆಚ್ಚು ಬಲಶಾಲಿಯು ಗೆದ್ದು ನಿಲ್ಲುತ್ತದೆ.

ಪ್ರಾಕ್ತನಃ ಪುರುಷಾರ್ಥೋಽಸೌ ಮಾಂ ನಿಯೋಜಯತೀತಿ ಧೀಃ ।
ಬಲಾದಧಸ್ಪದೀಕಾರ್ಯಾ ಪ್ರತ್ಯಕ್ಷಾದಧಿಕಾ ನ ಸಾ ॥ (2–5–10)

ನನ್ನ ಹಿಂದಿನ ಕರ್ಮವಾಸನಾಬಲವು ಈಗ ನನ್ನನ್ನು ದುಷ್ಟಮಾರ್ಗದಲ್ಲಿ ನಡೆಯುವಂತೆ ನನ್ನ ಬುದ್ಧಿಯನ್ನು ಪ್ರೇರಿಸುತ್ತಿದೆ– ಎಂಬ ಭ್ರಾಂತಿಯನ್ನು ಪ್ರಯತ್ನಪೂರ್ವಕವಾಗಿ ತುಳಿದು, ವಿವೇಕದಿಂದ ನಿರ್ಮೂಲಮಾಡಬೇಕು.

ದೋಷಃ ಶಾಮ್ಯತ್ಯಸಂದೇಹಂ ಪ್ರಾಕ್ತನೋಽದ್ಯತನೈರ್ಗುಣೈಃ ॥
(2–5–12)

ಪೂರ್ವಾಭ್ಯಾಸದ ದೋಷಗಳು ಇಂದಿನ ಸದ್ಗುಣಗಳ ಅಭ್ಯಾಸಬಲದಿಂದ ನಿಸ್ಸಂದೇಹವಾಗಿಯೂ ನಾಶವಾಗುವವು.

ಉಚ್ಛಾಸ್ತ್ರಂ ಶಾಸ್ತ್ರಿತಂ ಚೇತಿ ದ್ವಿವಿಧಂ ಪೌರುಷಂ ಸ್ಮೃತಂ ।
ತತ್ರೋಚ್ಛಾಸ್ತ್ರಮನರ್ಥಾಯ ಪರಮಾರ್ಥಾಯ ಶಾಸ್ತ್ರಿತಮ್ ॥ 2-5-4

ಶಾಸ್ತ್ರವಿರೋಧಿಯಾದ ಪೌರುಷವೆಂದೂ ಶಾಸ್ತ್ರಸಮ್ಮತವಾದ ಪೌರುಷವೆಂದೂ ಪುರುಷಪ್ರಯತ್ನಗಳಲ್ಲಿ ಎರಡು ಬಗೆ; ಇವುಗಳಲ್ಲಿ ಅಶಾಸ್ತ್ರೀಯ ಪ್ರಯತ್ನದಿಂದ ಅನರ್ಥವೂ (ದುಃಖವೂ), ಶಾಸ್ತ್ರೀಯಪ್ರಯತ್ನದಿಂದ ನಿಜಸುಖ ಸಂಪತ್ತೂ ಪ್ರಾಪ್ತಿಯಾಗುತ್ತವೆ.

ದೈವಂ ಸಂಪ್ರೇರಯತಿ ಮಾಮಿತಿ ದಗ್ಧಧಿಯಾಂ ಮುಖಮ್ ।
ಅದೃಷ್ಟಶ್ರೇಷ್ಠದೃಷ್ಟೀನಾಂ ದೃಷ್ಟ್ವಾ ಲಕ್ಷ್ಮೀರ್ನಿವರ್ತತೇ ॥

ದೈವವು ನನ್ನನ್ನು ಪ್ರೇರಿಸಿದಂತೆ ನಾನು ನಡೆಯುತ್ತೇನೆ; ನನ್ನ ಸ್ವತಂತ್ರ ವೇನಿಲ್ಲ–ಎಂದು ನಂಬಿರುವ ಅದೃಷ್ಟದ ಬಲವೇ ಎಲ್ಲಕ್ಕಿಂತಲೂ ಹೆಚ್ಚೆಂಬ ಸಿದ್ಧಾಂತವುಳ್ಳ ಸುಟ್ಟಬುದ್ಧಿಯವನ ಮುಖವನ್ನು ನೋಡಿ ಲಕ್ಷ್ಮಿಯು ಹಿಂದಿರುಗುವಳು.

ತಸ್ಮಾತ್ ಪೌರುಷಮಾಶ್ರಿತ್ಯ ಸಚ್ಛಾಸ್ತ್ರೈಃ ಸತ್ಸಮಾಗಮೈಃ ।
ಪ್ರಜ್ಞಾಮಮಲತಾಂ ನೀತ್ವಾ ಸಂಸಾರಜಲಧಿಂ ತರೇತ್ ॥

ಆದ್ದರಿಂದ ಪುರುಷಪ್ರಯತ್ನವನ್ನು ಆಶ್ರಯಿಸಿ ಸಚ್ಛಾಸ್ತ್ರಗಳ ಅಭ್ಯಾಸದಿಂದಲೂ ಸತ್ಸಂಗದ ಪ್ರಭಾವದಿಂದಲೂ ನಿರ್ಮಲವೂ ನಿಶ್ಚಲವೂ ಆದ ಪ್ರಜ್ಞೆಯನ್ನು ಸಂಪಾದಿಸಿ ಸಂಸಾರಸಮುದ್ರವನ್ನು ದಾಟಬೇಕು.

ಸಾಧೂಪದಿಷ್ಟಮಾರ್ಗೇಣ ಯನ್ಮನೋಽಂಗವಿಚೇಷ್ಟಿತಮ್ ।
ತತ್ಪೌರುಷಂ ತತ್ಸಫಲಮನ್ಯದುನ್ಮತ್ತಚೇಷ್ಟಿತಮ್ ॥

ಪ್ರಾಜ್ಞಸಜ್ಜನರು ಉಪದೇಶಿಸಿದ ಮಾರ್ಗದಲ್ಲಿ ಮನಸ್ಸನ್ನೂ ದೇಹವನ್ನೂ ತೊಡಗಿಸಿ ಪ್ರಯತ್ನಮಾಡುವದೇ ಪೌರುಷವು. ಇದರಿಂದ ಉತ್ತಮಫಲವು ದೊರಕುವದು ; ಹೀಗಲ್ಲದೆ ಚಂಚಲವಾದ ಮಲಿನಮನಸ್ಸಿಗೆ ಬಂದಂತೆ ಕಾರ್ಯ ಮಾಡುವದು ಹುಚ್ಚರ ವ್ಯಾಪಾರವೇ ಸರಿ.

ಐಹಿಕಃ ಪ್ರಾಕ್ತನಂ ಹನ್ತಿ ಪ್ರಾಕ್ತನೋಽದ್ಯತನಂ ಬಲಾತ್ ।
ಸರ್ವದಾ ಪುರುಷಸ್ಪಂದಸ್ತತ್ರಾನುದ್ವೇಗವಾನ್ ಜಯೀ ॥

ಈ ಜನ್ಮದ ಪುರುಷಪ್ರಯತ್ನವು ಹಿಂದಿನ ಜನ್ಮದ ಪುರುಷಪ್ರಯತ್ನವನ್ನೂ, ಹಿಂದಿನ ಕರ್ಮವು ಹೆಚ್ಚು ಬಲವಾಗಿದ್ದರೆ, ಈ ಜನ್ಮದ ಪ್ರಯತ್ನವನ್ನೂ (ಪರಸ್ಪರ ವಿರೋಧಿಗಳಾದರೆ) ನಾಶಮಾಡುವವು. ಸಮಾಧಾನವಾದ ಮನಸ್ಸಿನಿಂದ ವಿಚಾರಪೂರ್ವಕವಾಗಿ ಮಾಡಿದ ಪ್ರಯತ್ನವು ಯಾವಾಗಲೂ ಗೆದ್ದೇಗೆಲ್ಲುತ್ತದೆ.

ಆಲಸ್ಯಂ ಯದಿ ನ ಭವೇಜ್ಜಗತ್ಯನರ್ಥಃ ।
ಕೋ ನ ಸ್ಯಾದ್ಬಹುಧನಕೋ ಬಹುಶ್ರುತೋ ವಾ ॥
ಆಲಸ್ಯಾದಿಯಮವನಿಃ ಸಸಾಗರಾಂತಾ ।
ಸಂಪೂರ್ಣಾ ನರಪಶುಭಿಶ್ಚ ನಿರ್ಧನೈಶ್ಚ ॥

(ಜಗತ್ತಿನಲ್ಲಿ ಕಾಣುವ ಅನರ್ಥಗಳಿಗೆ ಪ್ರಯತ್ನಹೀನವಾದ ಆಲಸ್ಯವೇ ಕಾರಣವಾದ್ದರಿಂದ) ಜಗತ್ತಿನಲ್ಲಿ ಆಲಸ್ಯವಿಲ್ಲದೇ ಇದ್ದಿದ್ದರೆ ಯಾವ ಅನರ್ಥವಿರುತ್ತಿತ್ತು ? ಯಾರು ಧನಿಕರಾಗದೆ ಇರುತ್ತಿದ್ದರು ? ಅಥವಾ ಯಾರು ಬಹುಶ್ರುತರೂ ಬಹುವಿಧಜ್ಞಾನಉಳ್ಳವರೂ ಆಗದೆ ಇರುತ್ತಿದ್ದರು ? ಆಲಸ್ಯವಿರುವದರಿಂದಲೇ (ಪ್ರಯತ್ನಶೀಲರಾಗದಿರುವದರಿಂದಲೇ) ಸಾಗರಗಳ ವರೆಗೆ ಹಬ್ಬಿರುವ ಇಷ್ಟು ವಿಸ್ತಾರವಾದ ಪೃಥ್ವಿಯು ನರಪಶುಗಳಿಂದಲೂ ಧನಹೀನರಿಂದಲೂ ತುಂಬಿದೆ.

56. ದೈವ (ಪ್ರಾರಬ್ಧ) ಪೌರುಷಗಳ ವಿಚಾರದಲ್ಲಿ ಯೋಗವಾಸಿಷ್ಠವು ತಳೆದಿರುವ ಅಸಾಧಾರಣವಾದ ವೀರವೈಖರಿ ಇದು. ಆದರೆ ಪುರುಷಪ್ರಯತ್ನದಲ್ಲಿರುವ ಈ ಬಗೆಯ ಅತಿಶಯವಾದ ಪಕ್ಷಪಾತದಿಂದ ಪೌರುಷಕ್ಕೆ ಹೆಚ್ಚಿನ ಪ್ರೋತ್ಸಾಹವೂ ಧೈರ್ಯವೂ ಆತ್ಮವಿಶ್ವಾಸವೂ ಬೆಳೆದರೂ ಸಹ ದೈವ- ಪೌರುಷಗಳ ದ್ವಂದ್ವಾತ್ಮಕವಿಲಾಸದ ಜೀವನಾನುಭವಗಳ ವ್ಯಾವಹಾರಿಕ ವಾಸ್ತವಿಕತೆಗೆ ಇದು ಬಹಳ ದೂರವೂ ವಿಲಕ್ಷಣವೂ ಆಗಿರುವಂತೆ ತೋರುತ್ತದೆ. ಈ ಧೋರಣೆಗೆ ವಿರುದ್ಧವಾಗಿ ರಾಮಾಯಣ-ಮಹಾಭಾರತಗಳಲ್ಲಿ ದೈವಪ್ರಾಬಲ್ಯದ ಪಕ್ಷಪಾತ ಭಾವನೆಯೇ ವಿಜೃಂಭಿಸುತ್ತಿದೆ. ಈ ಒಲವು ಲೋಕಾನುಭವಕ್ಕೆ ಹೆಚ್ಚು ಸಮ್ಮತವಾಗಿ ತೋರುತ್ತದೆ.

ಆದರೆ ಉಜ್ಜ್ವಲಪ್ರಚಂಡಪೌರುಷವಾದದ ವಾಸಿಷ್ಠದ ವರವಾಣಿ ಏನೆಂದರೆ :

ಯತ್ನವದ್ಭಿಃ ದೃಢಾಭ್ಯಾಸೈಃ ಪ್ರಜ್ಞೋತ್ಸಾಹಸಮನ್ವಿತೈಃ ।
ಮೇರವೋಽಪಿ ನಿಜೀರ್ಯನ್ತೇ ಕೈವ ಪ್ರಾಕ್ಪೌರುಷೇ ಕಥಾ ॥

ವಿಚಾರಪೂರ್ವಕವಾದ ನಿತ್ಯೋತ್ಸಾಹಭರಿತರು ಪ್ರಯತ್ನಶೀಲರಾಗಿ ಎಡೆಬಿಡದ ಅಭ್ಯಾಸಬಲದಿಂದ ಮೇರುಪರ್ವತವನ್ನಾದರೂ (ರೈಲುಗಳ ಸಂಚಾರಕ್ಕೆ 'ಟನಲ್ಸ್' ಮಾಡಲು) ಕೊರೆಯಬಲ್ಲವರಾಗಿರುವಾಗ ಕಳೆದುಹೋದ ಹಿಂದಿನ ಕರ್ಮದ ಫಲದ ಪಾಡೇನು ?

57. ಪ್ರಾರಬ್ಧ-ಪೌರುಷಗಳ ಸಂಬಂಧವಾಗಿ ಮುಕ್ತಿಕೋಪನಿಷತ್ತಿನಲ್ಲಿ ಹೇಳಿರುವದೇನೆಂದರೆ : ಇದರಲ್ಲಿ ಯೋಗವಾಸಿಷ್ಠದ ವಿಚಾರಕ್ರಮವನ್ನೇ ಅನುಸರಿಸಿದಂತಿದೆ :

............ಜ್ಯೋತಿಷ್ಟೋಮೇನ ಸ್ವರ್ಗಂ ತಥಾ ಪುರುಷಪ್ರಯತ್ನಸಾಧ್ಯವೇದಾನ್ತಶ್ರವಣಾದಿಜನಿತಸಮಾಧಿನಾ ಜೀವನ್ಮುಕ್ತ್ಯಾದಿಲಾಭೋ ಭವತಿ । ಸರ್ವವಾಸನಾಕ್ಷಯಯಾತ್ತಲ್ಲಾಭಃ । ಅತ್ರ ಶ್ಲೋಕಾ ಭವನ್ತಿ ।

ಉಚ್ಛಾಸ್ತ್ರಂ ಶಾಸ್ತ್ರಿತಂ ಚೇತಿ ಪೌರುಷಂ ದ್ವಿವಿಧಂ ಮತಮ್ ।
ತತ್ರೋಚ್ಛಾಸ್ತ್ರಮನರ್ಥಾಯ ಪರಮಾರ್ಥಾಯ ಶಾಸ್ತ್ರಿತಮ್ ॥೧॥

ಲೋಕವಾಸನಯಾ ಜನ್ತೋಃ ಶಾಸ್ತ್ರವಾಸನಯಾಪಿ ಚ ।
ದೇಹವಾಸನಯಾ ಜ್ಞಾನಂ ಯಥಾವನ್ನೈವ ಜಾಯತೇ ॥೨॥

ದ್ವಿವಿಧೋ ವಾಸನಾವ್ಯೂಹಃ ಶುಭಶ್ಚೈವಾಶುಭಶ್ಚ ತೌ ।
ವಾಸನೌಘೇನ ಶುದ್ಧೇನ ತತ್ರ ಚೇದನುನೀಯಸೇ ॥೩॥

ತತ್ಕ್ರಮೇಣಾಶು ತೇನೈವ ಮಾಮಕಂ ಪದಮಾಪುಹಿ ।
ಅಥ ಚೇದಶುಭೋ ಭಾವಸ್ತ್ವಾಂ ಯೋಜಯತಿ ಸಂಕಟೇ ॥೪॥

ಪ್ರಾಕ್ತನಸ್ತದಸೌ ಯತ್ನಾಜ್ಜೇತವ್ಯೋ ಭವತಾ ಕಪೇ ।
ಶುಭಾಶುಭಾಭ್ಯಾಂ ಮಾರ್ಗಾಭ್ಯಾಂ ವಹನ್ತೀ ವಾಸನಾಸರಿತ್ ॥೫॥

ಪೌರುಷೇಣ ಪ್ರಯತ್ನೇನ ಯೋಜನೀಯಾ ಶುಭೇ ಪಥಿ ।
ಅಶುಭೇಷು ಸಮಾವಿಷ್ಟಂ ಶುಭೇಷ್ವೇವಾವತಾರಯೇತ್ ॥೬॥

ಸಂದಿಗ್ಧಾಯಾಮಪಿ ಭೃಶಂ ಶುಭಮೇವ ಸಮಾಚರ ।
ಶುಭಾಯಾಂ ವಾಸನಾವೃದ್ಧೌ ನ ದೋಷಾಯ ಮರುತ್ಸುತ ॥೭॥

ವಾಸನಾಕ್ಷಯವಿಜ್ಞಾನಮನೋನಾಶಾ ಮಹಾಮತೇ ।
ಸಮಕಾಲಂ ಚಿರಾಭ್ಯಸ್ತಾ ಭವನ್ತಿ ಫಲದಾ ಮತಾಃ ॥೮॥

ತ್ರಯ ಏವಂ ಸಮಂ ಯಾವನ್ನಾಭ್ಯಸ್ತಾಶ್ಚ ಪುನಃ ಪುನಃ ।
ತಾವನ್ನ ಪದಸಂಪ್ರಾಪ್ತಿರ್ಭವತ್ಯಪಿ ಸಮಾಶತೈಃ ॥೯॥
ಏಕೈಕಶೋ ನಿಷೇವ್ಯನ್ತೇ ಯದ್ಯೇತೇ ಚಿರಮಪ್ಯಲಮ್ ।

ತನ್ನ ಸಿದ್ಧಿಂ ಪ್ರಯಚ್ಛನ್ತಿ ಮನ್ತ್ರಾಃ ಸಂಕೀರ್ತಿತಾ ಇವ ॥೧೦॥
ಜನ್ಮಾನ್ತರಶತಾಭ್ಯಸ್ತಾ ಮಿಥ್ಯಾ ಸಂಸಾರವಾಸನಾ ।

ಸಾ ಚಿರಾಭ್ಯಾಸಯೋಗೇನ ವಿನಾ ನ ಕ್ಷೀಯತೇ ಕ್ವಚಿತ್ ॥೧೧॥
ತಸ್ಮಾತ್ ಸೌಮ್ಯ ಪ್ರಯತ್ನೇನ ಪೌರುಷೇಣ ವಿವೇಕಿನಾ ।

ಭೋಗೇಚ್ಛಾಂ ದೂರತಸ್ತ್ಯಕ್ತ್ವಾ ತ್ರಯಮೇವ ಸಮಾಶ್ರಯ ॥೧೨॥
ತಸ್ಮಾದ್ವಾಸನಯಾ ಯುಕ್ತಂ ಮನೋ ಬದ್ಧಂ ವಿದುರ್ಬುಧಾಃ ।

ಸಮ್ಯಗ್ವಾಸನಯಾ ತ್ಯಕ್ತಂ ಮುಕ್ತಮಿತ್ಯಭಿಧೀಯತೇ ||
ಮನೋ ನಿರ್ವಾಸನೀಭಾವಮಾಚರಾಶು ಮಹಾಮತೇ ||೧೩||

ಸಮ್ಯಗಾಲೋಚನಾತ್ಸತ್ಯಾದ್ವಾಸನಾ ಪ್ರವಿಲೀಯತೇ |
ವಾಸನಾವಿಲಯೇ ಚೇತಃ ಶಮಮಾಯಾತಿ ದೀಪವತ್ ||೧೪||

ವಾಸನಾಂ ಸಂಪರಿತ್ಯಜ್ಯ ಮಯಿ ಚಿನ್ಮಾತ್ರವಿಗ್ರಹೇ |
ಯಸ್ತಿಷ್ಠತಿ ಗತವ್ಯಗ್ರಃ ಸೋಽಹಂ ಸಚ್ಚಿತ್ಸುಖಾತ್ಮಕಃ ||೧೫||

ಜ್ಯೋತಿಷ್ಟೋಮಯಾಗದಿಂದ ಹೇಗೆ ಸ್ವರ್ಗಪ್ರಾಪ್ತಿಯಾಗುವದೋ ಹಾಗೆಯೇ ಜೀವನ್ಮುಕ್ತಿ ಮೊದಲಾದ ಇಷ್ಟಫಲಗಳು ಪುರುಷಪ್ರಯತ್ನದಿಂದಲೇ ಸಾಧ್ಯವಾಗುವವು. ಜೀವನ್ಮುಕ್ತಿಗೆ ಶ್ರವಣಮನನಾದಿಗಳೇ ಸಾಕ್ಷಾತ್‌ಸಾಧನೆಗಳು. ಶ್ರವಣಾದಿಗಳ ಫಲವಾದ ಸಮಾಧಿರೂಪವಾದ ಬ್ರಾಹ್ಮೀಸ್ಥಿತಿಗೆ ಸರ್ವವಾಸನೆಗಳ ಕ್ಷಯವಾಗುವದೇ ಸಾಧನೆ. ಇದು ಹೇಗೆಂದರೆ :

ಶಾಸ್ತ್ರೀಯವಾದ ಕರ್ಮ ಮತ್ತು ಅಶಾಸ್ತ್ರೀಯವಾದ ಕರ್ಮ ಎಂದು ಪುರುಷಪ್ರಯತ್ನವು ಎರಡು ಬಗೆ. ಇವುಗಳಲ್ಲಿ ಅಶಾಸ್ತ್ರೀಯವಾದ ಕರ್ಮವು ಅನರ್ಥಕ್ಕೂ ಶಾಸ್ತ್ರೀಯಕರ್ಮವು ಪರಮಾರ್ಥಪ್ರಾಪ್ತಿಗೂ ಕಾರಣವಾಗಿವೆ. (೧)

ವಾಸನೆಗಳು ಮೂರುಬಗೆಯಾಗಿವೆ. ದೇಹವಾಸನಾ, ಲೋಕವಾಸನಾ ಮತ್ತು ಶಾಸ್ತ್ರವಾಸನಾ. ಇವುಗಳ ಪ್ರಭಾವದಿಂದಲೇ ನಮಗೆ ನಮ್ಮ ನಿಜಸ್ವರೂಪದ ಯಥಾರ್ಥಜ್ಞಾನವಾಗುವದಿಲ್ಲ. (೨)

ಅನಂತವಾಸನಾಸಮೂಹದಲ್ಲಿ ಪುನಃ ಶುಭವಾಸನಾ ಮತ್ತು ಅಶುಭವಾಸನಾ ಎಂದು ಎರಡು ಬಗೆ. ಇವುಗಳಲ್ಲಿ ಶುದ್ಧವಾಸನಾಪ್ರವಾಹವೇ ನಿನ್ನನ್ನು ಒಂದು ವೇಳೆ ಕೊಚ್ಚಿಕೊಂಡುಹೋಗುವದಾದರೆ, ಎಲೈ ಮಾರುತಿಯೆ ! ನೀನು ಅದರಿಂದಲೇ ಕ್ರಮೇಣ ನನ್ನ ಬ್ರಹ್ಮಪದವನ್ನು ಪಡೆಯುತ್ತಿ (೩). ಹೀಗೆಂದು ಶ್ರೀರಾಮಚಂದ್ರನು ಆಂಜನೇಯನಿಗೆ ಉಪದೇಶಿಸಿದನು. (ಇದೇ ಮುಂದುವರೆಯುವದು)

ಒಂದು ವೇಳೆ ಅಶುಭವಾಸನೆಯೇ ನಿನ್ನನ್ನು ಪ್ರೇರಿಸುವದಾದರೆ, ನೀನು ಸಂಕಟದಲ್ಲಿ ಸಿಕ್ಕಿಕೊಳ್ಳುತ್ತಿ (೪).

ಇದಕ್ಕೆ, ಎಲೈ ಕಪಿಯೆ ! ನಿನ್ನ ಪೂರ್ವಜನ್ಮಗಳ ಪ್ರಾರಬ್ಧಕರ್ಮವೇ ಕಾರಣ. ಇದರ ಬಲವನ್ನು ನಿನ್ನ ಈ ಜನ್ಮದ ಪೌರುಷದ ಹೆಚ್ಚಿನ ಬಲದಿಂದ

ಗೆಲ್ಲಬೇಕು. ವಾಸನಾನದಿಯ ಪ್ರವಾಹವು ಶುಭ ಮತ್ತು ಅಶುಭ ಎಂಬ ಎರಡು ಮಾರ್ಗಗಳಲ್ಲಿ ಹರಿಯುತ್ತದೆ (೫).

ಪೂರ್ವಜನ್ಮಗಳ ಪ್ರಾರಬ್ಧಕರ್ಮದ ಪ್ರಭಾವದಿಂದ ಅಶುಭಮಾರ್ಗದಲ್ಲಿ ಹರಿಯುತ್ತಿರುವ ವಾಸನಾಪ್ರವಾಹವನ್ನು (ಈಗ) ವರ್ತಮಾನಕಾಲದಲ್ಲಿ ಪ್ರಯತ್ನಪೂರ್ವಕವಾಗಿ ಶುಭಮಾರ್ಗದಲ್ಲಿಯೇ ಹರಿಯುವಂತೆ ಮಾಡಬೇಕು (೬)

ಸಂಪೂರ್ಣವಾಸನಾಕ್ಷಯವಾಗಬೇಕು-ಎನ್ನುವ ಮಾತಿನಲ್ಲಿ ಶುಭವಾಸನೆಗಳೂ ಸಹ ಕ್ಷಯವಾಗಬೇಕು-ಎನ್ನುವ ಅರ್ಥವು ಇದ್ದರೂ ಕೂಡ, ಒಂದುವೇಳೆ ಶುಭವಾಸನೆಗಳನ್ನು ಬೆಳಿಸಿಕೊಂಡರೆ, ಅಶುಭವಾಸನೆಗಳನ್ನು ಬೆಳಿಸಿಕೊಂಡಷ್ಟು ದೋಷವಲ್ಲ. (೭)

ತತ್ತ್ವಜ್ಞಾನದಿಂದಲೇ ಮೋಕ್ಷ- ಎನ್ನುವದು ನಿಜವಾದರೂ ಜ್ಞಾನವನ್ನು ಪಡೆಯುವ ಪ್ರಯತ್ನದ ಜೊತೆಜೊತೆಗೇ ಬಹಳಕಾಲದಿಂದಲೂ ವಾಸನಾಕ್ಷಯವನ್ನೂ ಮನೋನಾಶವನ್ನೂ ಅಭ್ಯಾಸಮಾಡುವದಾದರೆ, ಉತ್ತಮಫಲವನ್ನು ಕೊಡುತ್ತದೆ. (೮)

ಹೀಗೆ, ಆತ್ಮಜ್ಞಾನ-ಮನೋನಾಶ-ವಾಸನಾಕ್ಷಯ, ಈ ಮೂರು ಸಾಧನೆಗಳನ್ನೂ ಬಹಳಕಾಲ, ಜೊತೆಜೊತೆಗೇ ಏಕಕಾಲದಲ್ಲಿ ಅಭ್ಯಾಸಮಾಡದಿದ್ದರೆ, ನೂರು ವರ್ಷಗಳು ಪ್ರಯತ್ನಮಾಡಿದರೂ ಪ್ರಯೋಜನವಿಲ್ಲ. (೯)

ಯಾವದಾದರೊಂದು ಮಂತ್ರದ ಅರ್ಥವನ್ನು ಸಂತತವಾಗಿ ಅನುಸಂಧಾನ ಮಾಡದೆ, ಆ ಮಂತ್ರದ ಕೇವಲ ಜಪವನ್ನು ಯಾಂತ್ರಿಕವಾಗಿ ಮಾಡಿದರೆ, ಅದು ಹೇಗೆ ನಿಷ್ಫಲವಾಗುವದೋ ಹಾಗೆ, ವಾಸನಾಕ್ಷಯ ಮೊದಲಾದ ಮೂರು ಸಾಧನೆಗಳಲ್ಲಿ ಒಂದೊಂದನ್ನೇ ಬೇರೆಬೇರೆಯಾಗಿ ಬೇರೆಬೇರೆ ಕಾಲಗಳಲ್ಲಿ ಅಭ್ಯಾಸಮಾಡಿದರೆ ಆ ಪ್ರಯತ್ನವು ವ್ಯರ್ಥವೇ ಸರಿ. ಏಕೆಂದರೆ ವಾಸನಾಕ್ಷಯ ಮತ್ತು ಮನೋನಾಶ, ಇವುಗಳ ಅರ್ಥವೇನು, ಅಗತ್ಯವೇನು, ಮಹತ್ತ್ವವೇನು ? ಎಂಬ ಮರ್ಮವನ್ನು ತತ್ತ್ವಜ್ಞಾನದ ಬೆಳಕಿನಿಂದಲೇ ಕಂಡುಕೊಂಡು ಈ ಮೂರೂ ಹೇಗೆ ಪರಸ್ಪರ ಪೋಷಕವೂ ಪೂರಕವೂ ಆಗಿವೆ-ಎಂಬಿದನ್ನು ಅರಿತು ಈ ಮೂರನ್ನೂ ಒಟ್ಟಿಗೆ ಕೂಡಿ ಅಭ್ಯಾಸಮಾಡಿದರೆ ಮಾತ್ರ ಸಫಲವಾಗಿ ಜೀವನ್ಮುಕ್ತಿಗೆ ಸಹಾಯವಾಗುವದು.

ಶಾಸ್ತ್ರಾಚಾರ್ಯರ ಉಪದೇಶದ ಶ್ರವಣ-ಮನನಾದಿಗಳಿಂದ ಸಾಧನಚತುಷ್ಟಯಸಂಪನ್ನನಾದ ಜಿಜ್ಞಾಸುಭಕ್ತನಲ್ಲಿ ಉತ್ಪನ್ನವಾದ ತತ್ತ್ವಜ್ಞಾನವು ಪರಿಪಕ್ವವಾಗಿ ದೃಢವಾದ ಜ್ಞಾನನಿಷ್ಠೆಯಿಂದ ಈ ಸಾಧಕನ ಮನಸ್ಸು

ಆತ್ಮಾನಂದದಲ್ಲಿಯೇ ವಿಶ್ರಾಂತಿಯನ್ನು ಪಡೆಯಬೇಕಾದರೆ, ವಾಸನಾಕ್ಷಯ–ಮನೋನಾಶ (ಮನೋಲಯ) ಗಳೂ ಸಹಾಯವಾಗುತ್ತವೆ. ಇದರಿಂದ ತತ್ತ್ವಜ್ಞಾನವೇ ಮುಖ್ಯ ಎಂಬಿದು ಸ್ಪಷ್ಟವಾಗುತ್ತದೆ. ಆತ್ಮಜ್ಞಾನದ ಪ್ರಭಾವದಿಂದ ಮಿಕ್ಕ ಅನಾತ್ಮಗಳ ಹುಸಿತೋರಿಕೆಯೆಲ್ಲಾ ಅಸತ್ಯವೆಂದು ನಿರ್ಧರಿಸಿಕೊಂಡಾಗ ಎಲ್ಲಾ ತೋರಿಕೆಗಳಿಗೂ ಕಾರಣವಾದ ಮನಸ್ಸೂ, ಇದರ ವಾಸನೆಗಳೂ–ಎಲ್ಲಾ "ಬಾಧಿತವಾಗುತ್ತವೆ". ಆದರೆ ಹೀಗೆ ತೋರಿ ಅಡಗುತ್ತಿರುವ ಸಕಲಮಾಯಾ ವಿಲಾಸವನ್ನೂ ನಿರಂತರವಾಗಿ ಬೆಳಗುತ್ತಿರುವ ಏಕೈಕ ಸ್ವಯಂಜ್ಯೋತಿಸ್ವರೂಪವಾದ ಸಾಕ್ಷಿಚೈತನ್ಯವನ್ನು ಬಾಧಿಸುವ ಶಕ್ತಿಯು ಮೂರು ಲೋಕಗಳಲ್ಲಿ ಜಡವಾದ ಯಾವ ಅನಾತ್ಮಕ್ಕೂ ಇಲ್ಲ. ಗುರೂಪದೇಶದಿಂದ ಉದಿಸುವ ಆತ್ಮಾನಾತ್ಮ ವಿವೇಕವಿಚಾರವೇ ತತ್ತ್ವಜ್ಞಾನದ ಉತ್ಪತ್ತಿಗೆ ಸಾಕ್ಷಾತ್ ಸಾಧನೆ. (೧೨)

ನೂರಾರು–ಸಾವಿರಾರು ಜನ್ಮಗಳಿಂದ ಅಭ್ಯಾಸವಾಗಿ ಮೈಗೂಡಿರುವ ಮಿಥ್ಯಾಸಂಸಾರದ ಬಲವಾದ ವಾಸನೆಯು ಬಹುಕಾಲ ಎಡೆಬಿಡದೆ ಅಭ್ಯಾಸ ಮಾಡಿದ ಸದ್ವಿಚಾರ–ಸದಾಚಾರಯೋಗದಿಂದಲ್ಲದೆ ಬೇರೆ ಮಾರ್ಗದಿಂದ ಕ್ಷಯ–ವಾಗುವದಿಲ್ಲ. (೧೪)

ಆದ್ದರಿಂದ, ವಿಚಾರಶೀಲರಾದ ವಿವೇಕಿಗಳು, ಪೌರುಷಪ್ರಯತ್ನದಿಂದ ಮೊಟ್ಟಮೊದಲು ಭೋಗೇಚ್ಛೆಯನ್ನು ಬಿಟ್ಟು ವಾಸನಾಕ್ಷಯಾದಿ ಮೂರು ಸಾಧನೆಗಳನ್ನೇ ಆಶ್ರಯಿಸಬೇಕು. (೧೫)

ವ್ಯವಹಾರದೃಷ್ಟಿಯಿಂದ, ವಾಸನಾಕ್ಷಯಕ್ಕೇ ಹೆಚ್ಚು ಪ್ರಾಧಾನ್ಯತೆಯನ್ನು ಕೊಟ್ಟಾಗ, ವಾಸನಾಯುಕ್ತಮನಸ್ಸೇ ಬದ್ಧಮನಸ್ಸೆಂದೂ ಹೇಳಬಹುದು. ಆದ್ದರಿಂದ ನಿರ್ವಾಸನಾಭಾವವನ್ನೇ ಕೂಡಲೆ ಅಭ್ಯಸಿಸಬೇಕು. (ಆದರೆ, ಬಂಧಕ್ಕೆ ಮೂಲತಃ ಅಜ್ಞಾನವೇ ಕಾರಣವಾಗಿದೆ; ಮೋಕ್ಷಕ್ಕೆ ಸಮ್ಯಗ್‌ಜ್ಞಾನವೇ ಕಾರಣವಾಗಿದೆ). (೧೬)

ನಿಜವಾಗಿಯೂ ಆತ್ಮವಿಚಾರವನ್ನೇ ಸತತವಾಗಿಯೂ ಆಳವಾಗಿಯೂ ಚೆನ್ನಾಗಿಯೂ ಮಾಡಿದ್ದೇ ಆದರೆ, ವಾಸನೆಯು ನಿಶ್ಚಯವಾಗಿಯೂ ಲಯವಾಗಿಯೇ ಆಗುತ್ತದೆ; ವಾಸನಾವಿಲಯವಾದರೆ, ತೈಲವು ತೀರಿದ ದೀಪದಂತೆ ಮನಸ್ಸು ಪೂರ್ಣವಾಗಿ ಶಾಂತವಾಗುತ್ತದೆ. (೧೭)

ಮನಸ್ಸಿನ ಚಾಂಚಲ್ಯಕ್ಕೆ ಕಾರಣವಾದ ವಾಸನೆಗಳೆಲ್ಲಾ ನಾಶವಾಗಿ, ಪ್ರಶಾಂತವಾದ ಯಾರ ಮನಸ್ಸು ಸಚ್ಚಿದಾನಂದಸ್ವರೂಪನಾದ ನನ್ನಲ್ಲಿ ಸ್ಥಿರವಾಗಿ ನಿಲ್ಲುವದೋ, ಎಲೈ ಮಾರುತಿಯೆ! ಅವನೇ ನಾನು, ನಾನೇ ಅವನು– ಎಂದು ತಿಳಿ; ಹೀಗೆಂದು ಶ್ರೀರಾಮಚಂದ್ರನು ಮಾರುತಿಗೆ ಉಪದೇಶಮಾಡಿದನು. (೧೮)

58. ಈ ಮುಕ್ತಿಕೋಪನಿಷತ್ತಿನಲ್ಲಿ ಹೇಳಿರುವಂತೆ, ಯೋಗವಾಸಿಷ್ಠ ಮೊದಲಾದ ಕೆಲವು ಗ್ರಂಥಗಳಲ್ಲಿ ವಾಸನಾಕ್ಷಯಕ್ಕೇ ಅತಿಹೆಚ್ಚಿನ ಮಹತ್ತ್ವವನ್ನು ಕೊಟ್ಟಂತೆ ತೋರುತ್ತದೆ. ಶಂಕರಭಾಷ್ಯದ ದೃಷ್ಟಿಯಿಂದ ತತ್ತ್ವಜ್ಞಾನಕ್ಕೇ ನಿಜವಾದ ಮಹತ್ತ್ವವಿರುವದರಿಂದ, ಇದರ ಉಜ್ಜ್ವಲವಾದ ಪ್ರಕಾಶದಲ್ಲಿ ಅವಿದ್ಯಾಕಲ್ಪಿತವಾದ ಬುದ್ಧಿಯೂ ಮನಸ್ಸೂ ಇವುಗಳ ಆಶ್ರಯದಲ್ಲಿರುವ ವಾಸನೆಗಳೂ ಸ್ವತಂತ್ರ ಅಸ್ತಿತ್ವವಿಲ್ಲದ ಹುಸಿತೋರಿಕೆಗಳಾದ್ದರಿಂದ ನಿಸ್ಸತ್ತ್ವವೆನಿಸಿ, ಬಾಧಿತವಾಗುತ್ತವೆ.

ಸಕಲವಾಸನೆಗಳೂ ಸಂಪೂರ್ಣವಾಗಿ ನಾಶಹೊಂದುವದರಿಂದಲೇ ಮೋಕ್ಷವೆಂದಾದರೆ, ಹಾಗೆ ಮುಕ್ತಿ ಪಡೆದ ನಿಮಿಷದಿಂದಲೇ ಆ ಮುಕ್ತನ ವಾಸನಾಪ್ರಯುಕ್ತವಾದ ದೇಹೇಂದ್ರಿಯುಗಳ ವ್ಯವಹಾರವೆಲ್ಲಾ ನಿಂತುಹೋಗುವದರಿಂದ ಅವನು ತನ್ನ ಅನುಭವವನ್ನು ಇನ್ನೊಬ್ಬರಿಗೆ ಹೇಳಿಕೊಳ್ಳುವದೂ ಸಾಧ್ಯವಲ್ಲ. ಅವನಿಂದ ಉಪದೇಶವೂ ಸಾಧ್ಯವಲ್ಲ- ಎಂದಾಗುತ್ತದೆ. ಅಲ್ಲದೆ, ಮುಕ್ತಸ್ಥಿತಿಯನ್ನೂ ಅದಕ್ಕೆ ಸಾಧನೆಗಳನ್ನೂ ಇದುವರೆಗೆ ಶಿಷ್ಯರಿಗೆ ಉಪದೇಶಿಸಿರುವ, ಜೀವನ್ಮುಕ್ತರೆನಿಸಿಕೊಂಡಿರುವ ಯಾವ ಗುರುಗಳೂ ನಿಜವಾಗಿ ಮುಕ್ತರೇ ಅಲ್ಲ- ಎಂದೂ ನಿರ್ಣಯವಾಗುತ್ತದೆ. ಇದು ಅನುಭವಕ್ಕೆ ವಿರುದ್ಧವಾದ ತರ್ಕವಾದ್ದರಿಂದ ಇದು ನಿಜವಲ್ಲ. ಆದ್ದರಿಂದ, ಮೋಕ್ಷಕ್ಕೆ ತತ್ತ್ವಜ್ಞಾನ ಒಂದೇ ನಿಜವಾದ ಸಾಧನ. ಜಿಜ್ಞಾಸುವಿಗೆ ಸಾಧನಚತುಷ್ಟಯಸಂಪನ್ನತೆ ಒಂದೇ ಅನಿವಾರ್ಯವೂ ಅತ್ಯಗತ್ಯವೂ ಅತ್ಯಂತ ಮಹತ್ತ್ವವೂ ಆದ ಅರ್ಹತೆಯೇ ಹೊರತು, ಬೇರೆ ಯಾವುದರ ಹಂಗೂ ಅವನಿಗೆ ಇಲ್ಲ.

59. ಪ್ರಾರಬ್ಧ-ಪೌರುಷಗಳ ವಿಷಯವಾಗಿ ಬೃಹದಾರಣ್ಯಕ-ಉಪನಿಷತ್ತಿನಲ್ಲಿ ಹೇಳಿರುವದೇನೆಂದರೆ :

ಈಶ್ವರ. ದೇವತೆಗಳು, ಕಾಲ, ಪೂರ್ವಕರ್ಮ-ಇವಿಷ್ಟು ದೈವದ (ಪ್ರಾರಬ್ಧದ) ಪಕ್ಷ; ಮಣಿ, ಮಂತ್ರ, ಔಷಧ ಮತ್ತು ತಪಸ್ಸು ಇವಿಷ್ಟು ಪೌರುಷದ ಪಕ್ಷದಲ್ಲಿರುವ ಕ್ರಿಯಾಶೀಲಶಕ್ತಿಗಳು.

ಮನುಷ್ಯನು ಮಾಡುವ ಪ್ರಯತ್ನಕ್ಕೆ ಫಲವು ಬರುವಾಗ ಈ ಮೇಲೆ ಹೇಳಿರುವ ಫಲಪ್ರದವಾದ ಎಂಟು ಕಾರಕಗಳಲ್ಲಿ ಯಾವವುಗಳಿಗೆ ಎಷ್ಟೆಷ್ಟು ಬಲ ಹೆಚ್ಚಾಗಿ ಬಂದು, ಇಷ್ಟಾನಿಷ್ಟಫಲಗಳಲ್ಲಿ ಯಾವದು ಎಷ್ಟು ಬರಬಹುದೆಂದು ಮೊದಲೇ ತಿಳಿಯಲು ಅಥವಾ ಹೇಳಲು ಬಹಳ ಮಟ್ಟಿಗೆ ಯಾರಿಗೂ ಸಾಧ್ಯವಿಲ್ಲ. ಲೌಕಿಕವಾದ ಅಭ್ಯುದಯಫಲಕ್ಕೆ ಇಷ್ಟೆಲ್ಲಾ ಕಾರಕಗಳ ಅಗತ್ಯವೂ ಎಡೆತಡೆಗಳೂ ಆನುಕೂಲ್ಯವೂ ಇದ್ದರೂ ಪಾರಮಾರ್ಥಿಕವಾದ ಮೋಕ್ಷಫಲಕ್ಕೆ ಬ್ರಹ್ಮಜ್ಞಾನ ಒಂದೇ ಸಾಧನವಾಗಿರುವದರಿಂದಲೂ ಬ್ರಹ್ಮವು ಸಾಧಕನ ಆತ್ಮವೇ ಇದ್ದು

ಇದರ ಜ್ಞಾನಕ್ಕೆ ದೇಶ-ಕಾಲಾದಿಗಳ ವ್ಯವಧಾನವೇ ಇಲ್ಲದಿರುವದರಿಂದಲೂ ಇದು (ಮುಕ್ತಸ್ವರೂಪವು) ಸ್ವತಃಸಿದ್ಧವೂ ನಿತ್ಯಸಿದ್ಧವೂ ಸಹಜಸಿದ್ಧವೂ ಆಗಿದೆ. (ಬೃ. ಉ. ೧-೪-೧೦).

60. ಬೃಹದಾರಣ್ಯಕ ಉಪನಿಷತ್ತಿನಲ್ಲಿ ಬಂದಿರುವ, ಆದರೆ ಲೋಕಾನುಭವದಲ್ಲಿ ಅಷ್ಟು ಸಮಂಜಸವೆಂದು ತೋರದಿರುವ ಬಹಳ ಕುತೂಹಲಕರವಾದ ಒಂದು ವಿಷಯವೇನೆಂದರೆ :

...............ತಸ್ಮಾತ್ ಅವಿದ್ಯಾವನ್ತಂ ಪುರುಷಂ ಪ್ರತಿ ದೇವಾ ಈಶತ ಏವ ವಿಘ್ನಂ ಕರ್ತುಮ್, ಅನುಗ್ರಹಂ ಚ ಇತ್ಯೇತದ್ ದರ್ಶಯತಿ । ....ಇಮೇ ಇನ್ದ್ರಾದಯೋಽನ್ಯೇ ಮತ್ತಃ ಮಮೇಶಿತಾರಃ, ಭೃತ್ಯ ಇವ ಅಹಮೇಷಾಂ ಸ್ತುತಿನಮಸ್ಕಾರೇಜ್ಯಾದಿನಾ ಆರಾಧನಂ ಕೃತ್ವಾ ಅಭ್ಯುದಯಂ ನಿಃಶ್ರೇಯಸಂ ಚ ತತ್ಪ್ರತ್ತಂ ಫಲಂ ಪ್ರಾಪ್ಸ್ಯಾಮಿ ಇತ್ಯೇವಮಭಿಸಂಧಿಃ । ....ತಸ್ಮಾತ್ ಏಷಾಂ ದೇವಾನಾಂ ತನ್ನ ಪ್ರಿಯಮ್, ಕಿಂ ತತ್ ? ಯದೇತತ್ ಬ್ರಹ್ಮಾತ್ಮತತ್ತ್ವಂ ಕಥಂಚನ ಮನುಷ್ಯಾ ವಿದ್ಯುಃ ವಿಜಾನೀಯಯುಃ । .... ಅತೋ ದೇವಾಃ ಪಶೂನಿವ ವ್ಯಾಘ್ರಾದಿಭ್ಯೋ ಬ್ರಹ್ಮವಿಜ್ಞಾನಾತ್ ವಿಘ್ನಂ ಆಚಿಕೀರ್ಷನ್ತಿ ಅಸ್ಮದುಪಭೋಗ್ಯತ್ವಾತ್ ಮಾ ವ್ಯುತ್ತಿಷ್ಠೇಯುಃ ಇತಿ । ಯಂ ತು ಮುಮೋಚಯಿಷನ್ತಿ ತಂ ಶ್ರದ್ಧಾದಿಭಿರ್ಯೋಕ್ಷ್ಯನ್ತಿ ವಿಪರೀತಮ್ ಅಶ್ರದ್ಧಾದಿಭಿಃ । ತಸ್ಮಾತ್ ಮುಮುಕ್ಷುರ್ದೇವಾರಾಧನಪರಃ ಶ್ರದ್ಧಾಭಕ್ತಿಪರಃ ಪ್ರಣೇಯೋಽಪ್ರಮಾದೀ ಸ್ಯಾತ್ । ವಿದ್ಯಾಪ್ರಾಪ್ತಿಂ ಪ್ರತಿ ವಿದ್ಯಾಂ ಪ್ರತಿ ಇತಿ ವಾ ಕಾಕ್ವಾ ಏತದ್ದರ್ಶಿತಂ ಭವತಿ ದೇವಾಪ್ರಿಯವಾಕ್ಯೇನ । (ಬೃ. ಉ. ೧-೪-೧೦-೧೭೮).

.... ಆದ್ದರಿಂದ ಅವಿದ್ಯಾವಂತನಾದ ಪುರುಷನಿಗೆ ದೇವತೆಗಳು ಅಡ್ಡಿಯನ್ನೂ ಅನುಗ್ರಹವನ್ನೂ ಮಾಡುವದಕ್ಕೆ ಸಮರ್ಥರೇ ಆಗಿರುತ್ತಾರೆ-ಎಂಬಿದನ್ನು ಶ್ರುತಿಯು ತಿಳಿಸುತ್ತಿದೆ............ ಈ ಇಂದ್ರಾದಿಗಳು ನನಗಿಂತ ಬೇರೆ, ಇವರು ನನ್ನನ್ನು ಆಳುವವರು; ಭೃತ್ಯನಂತೆ ನಾನು ಇವರಿಗೆ ಸ್ತುತಿ, ನಮಸ್ಕಾರ, ಇಜ್ಯಾ- ಮುಂತಾದವುಗಳಿಂದ ಆರಾಧನೆಮಾಡಿ, ಅವರು ಕೊಟ್ಟ ಫಲವಾದ ಅಭ್ಯುದಯವನ್ನೂ ನಿಃಶ್ರೇಯಸವನ್ನೂ ಪಡೆದುಕೊಳ್ಳುವೆನು ಎಂಬಿದು (ಆ ಅಜ್ಞೋಪಾಸಕನ) ಅಭಿಪ್ರಾಯವು............(ಇಲ್ಲಿ ಲೋಕದಲ್ಲಿ, ಅನೇಕ ಪಶುಗಳುಳ್ಳವನಿಗೆ ಒಂದೇ ಪಶುವು ನಷ್ಟವಾದರೂ ಹೇಗೆ ಬಹಳ ಅಪ್ರಿಯವಾಗುವದೋ ಹಾಗೆ ದೇವತೆಗಳಿಗೆ ಸ್ವರೂಪಜ್ಞಾನ ಪಡೆಯುವ ನರಪಶುಗಳ ವಿಷಯದಲ್ಲಿ

ಸಂಕಟವಾಗುವದು). ಆದ್ದರಿಂದ ಈ ದೇವತೆಗಳಿಗೆ ಅದು ಪ್ರಿಯವಲ್ಲ ; ಅದು ಎಂದರೆ ಯಾವದು? ಈ ಬ್ರಹ್ಮಾತ್ಮತ್ವವನ್ನು ಮನುಷ್ಯನು ಹೇಗಾದರೂ ತಿಳಿದು ಕೊಂಡಾನು, ಅರಿತುಕೊಂಡಾನು- ಎಂಬಿದು............ ಆದ್ದರಿಂದ ದೇವತೆಗಳು -ಪಶುಗಳನ್ನು ಜನರು-ಹುಲಿ ಮುಂತಾದವುಗಳಿಂದ ಕಾಪಾಡಿಕೊಳ್ಳುವಂತೆ,- "ನಮಗೆ ಉಪಭೋಗ್ಯರಾಗಿರುವದರಿಂದ ಇವರು ಬಿಟ್ಟೇಳಬಾರದು" ಎಂದು ಮನುಷ್ಯರಿಗೆ ಬ್ರಹ್ಮವಿದ್ಯೆಯು ಪ್ರಾಪ್ತಿಯಾಗುವದಕ್ಕೆ ಅಡ್ಡಿಯನ್ನು ಮಾಡಲು ಇಚ್ಛಿಸುತ್ತಾರೆ. ಆದರೆ, ಇದಕ್ಕೆ ವಿಪರೀತವಾಗಿರುವ ಯಾರನ್ನು ಬಿಡುಗಡೆ ಮಾಡಬೇಕೆಂದಿಚ್ಛಿಸುವರೋ ಅವನನ್ನು ಶ್ರದ್ಧಾದಿಯುಕ್ತನನ್ನಾಗಿ ಮಾಡುತ್ತಾರೆ. ಆದ್ದರಿಂದ ಮುಮುಕ್ಷುವಾದವನು ದೇವತೆಗಳ ಆರಾಧನೆಯಲ್ಲಿ ತತ್ಪರನಾಗಿ, ಶ್ರದ್ಧಾಭಕ್ತಿಪರನಾಗಿಯೂ ದೇವತೆಗಳಿಗೆ ವಿಧೇಯನಾಗಿಯೂ ಇದ್ದು ವಿದ್ಯಾ ಪ್ರಾಪ್ತಿಯ ವಿಷಯಕ್ಕೆ ಎಚ್ಚರಿಕೆಯಿಂದ ಇರಬೇಕು............(ಬೃ. ಉ. ೧-೪-೧೦).

61. 1) ಪ್ರತ್ಯಕ್ಷಪ್ರಮಾಣಕ್ಕೆ ಗೋಚರವಾಗಿರುವ ಈ ಲೋಕವಲ್ಲದೆ, ಪುಣ್ಯವಂತರು ಮರಣಾನಂತರ ತಮ್ಮ ಪುಣ್ಯದ ಫಲವಾಗಿ ಸೇರಬಹುದಾದ ಸ್ವರ್ಗಾದಿ ಬೇರೆ (ಸೂಕ್ಷ್ಮ) ಲೋಕಗಳೂ ಇವೆ, ಪಾಪಿಗಳು ಸೇರಬಹುದಾದ ನರಕವೂ ಇದೆ-ಎಂದು ತಿಳಿದುಬಂದಿರುವದು ಶಾಸ್ತ್ರದಿಂದಲೇ.

2) ದೇವತೆಗಳನ್ನು ಮನುಷ್ಯರು ನಮಸ್ಕಾರ, ಸ್ತೋತ್ರ, ಹವನ-ಹೋಮಾದಿಗಳಿಂದ ಸಂತೋಷಪಡಿಸುತ್ತಿರಬೇಕು ; ಇಲ್ಲವಾದರೆ ದೇವತೆಗಳು ಮನುಷ್ಯರ ಧರ್ಮಸಾಧನೆಗೂ ಅದರ ಫಲವಾದ ಅಭ್ಯುದಯಪ್ರಾಪ್ತಿಗೂ ಬ್ರಹ್ಮ ಸಾಧನೆಗೂ ಅದರ ಫಲವಾದ ಮೋಕ್ಷಪ್ರಾಪ್ತಿಗೂ ವಿಘ್ನವನ್ನುಂಟುಮಾಡುವ ರೆಂದೂ ಶಾಸ್ತ್ರದಲ್ಲಿ ಹೇಳಿದೆ ; ಮತ್ತು ಹಾಲು, ಮೊಸರು, ಬೆಣ್ಣೆಗಳನ್ನು ಕೊಡತಕ್ಕಂಥ ಹಸುಗಳೂ ತಮ್ಮ ಮೈ-ಮಾಂಸವನ್ನೇ ಕೊಡತಕ್ಕಂಥ ಮೇಕೆ, ಕುರಿ, ಕೋಳಿಗಳೂ ಮನುಷ್ಯರಿಗೆ ಭೋಗ್ಯಪದಾರ್ಥಗಳಾಗಿರುವಂತೆ ಮನುಷ್ಯರು ದೇವತೆಗಳಿಗೆ ಭೋಗಪ್ರದರಾದ ಪಶುಗಳಾಗಿರುವರೆಂದೂ ಉ ಪ ನಿ ಷ ತ್ತಿ ನ ಲ್ಲಿ ಹೇಳಿದೆ. ಇದು ನಿಜವಾದರೆ, ದೇವರ ಇರುವಿಕೆಯನ್ನೇ ಒಪ್ಪದಿರುವ, ದೇವತೆಗಳ ಇರುವಿಕೆಯನ್ನೂ ಒಪ್ಪದೆ, ಆ ಕಲ್ಪನೆಯನ್ನೇ ಹಾಸ್ಯಮಾಡುತ್ತಿರುವ ಆಧುನಿಕ ಭೌತಿಕ ವಿಜ್ಞಾನಿಗಳು ರೇಡಿಯೋ, ಟೆಲಿವಿಷನ್, ವಿಮಾನ, ಹೆಲಿಕ್ಯಾಪ್ಟರ್, ರಾಕೆಟ್, ಸ್ಪುಟ್ನಿಕ್, ರಾಡಾರ್, ಕಂಪ್ಯೂಟರ್ಸ್, ಸಿನಿಮಾ ಮೊದಲಾದ ಅನೇಕ ಅದ್ಭುತಸಾಧನೆಗಳನ್ನು ಅತ್ಯಂತಯಶಸ್ವಿಯಾಗಿ ನಡೆಸುವದಕ್ಕೆ ಆ ದೇವತೆ ಗಳು ಹೇಗೆ ಅವಕಾಶಕೊಟ್ಟರು ? ದೇವತೆಗಳನ್ನು ಆರಾಧಿಸುವದಂತೂ ಇರಲಿ, ದೇವದೂಷಣೆಯನ್ನೇ ಮಾಡುತ್ತಿರುವ ಅಂಥಾ ನಾಸ್ತಿಕವಿಜ್ಞಾನಿಗಳ ಆಶ್ಚರ್ಯಕರ

ಸಾಧನೆಗಳಿಗೆ ದೇವತೆಗಳು (ಇರುವದು ನಿಜವಾದರೆ) ಏಕೆ ವಿಘ್ನಗಳನ್ನುಂಟು ಮಾಡಿ, ಅವರ ಯಾವ ಸಾಹಸವೂ ಫಲಿಸದಂತೆ ಏಕೆ ಮಾಡಲಿಲ್ಲ? ಎಲ್ಲಕ್ಕಿಂತಲೂ ಮಿಗಿಲೆನಿಸುವ, ಚಂದ್ರಲೋಕಕ್ಕೆ ಹೋಗಿ ಬರುವ ನಾಸ್ತಿಕವಿಜ್ಞಾನಿಯ ಅಮಾನುಷ ಸಾಹಸವು ಸಫಲವಾಗದಂತೆ ದೇವತೆಗಳು (ಇರುವದು ನಿಜವಾದರೆ) ಏಕೆ ವಿಘ್ನವನ್ನುಂಟುಮಾಡಲಿಲ್ಲ? ಧರ್ಮವನ್ನೇ ಅರಿಯದ, ದೇವರನ್ನೂ ದೂಷಿಸುವ ದೈತ್ಯಸಮಾನರಾದ ಲಕ್ಷೋಪಲಕ್ಷ ಮನುಷ್ಯರು, ಸಂಪತ್ತಿನಿಂದಲೂ ವೈಭವದಿಂದಲೂ ಅಧಿಕಾರಮದದಿಂದಲೂ ಮೆರೆಯುತ್ತಾ ಉರಿಯುತ್ತಾ ಅಟ್ಟಹಾಸದಿಂದ ಪರಮಹಿಂಸಕರೂ ವಂಚಕರೂ ಆಗಿ ವಿಜೃಂಭಿಸುತ್ತಲೇ ಇರುವದಕ್ಕೆ ದೇವತೆಗಳು ಸ್ವಲ್ಪವೂ ವಿಘ್ನವನ್ನೇ ಮಾಡದೆ, ಈ ಲೋಕದಲ್ಲಿ ಏಕೆ ಅವಕಾಶಕೊಟ್ಟಿದ್ದಾರೆ ?

ಅತ್ಯಂತ ಆಶ್ಚರ್ಯಕರವಾದ ವೈಜ್ಞಾನಿಕಶೋಧಗಳೂ ಸಾಧನೆಗಳೂ (ವೈದ್ಯಕೀಯ ಮೊದಲಾದ ಜೀವನದ ಬೇರೆ ಕ್ಷೇತ್ರಗಳಲ್ಲಿ ಸಹ) ಅತಿ ವೇಗದಿಂದ ಈ ಶತಮಾನದಲ್ಲಿ ಬೆಳೆದಿರುವ ದೃಷ್ಟಿಯಿಂದ ನಿರ್ಭಯವಾಗಿಯೂ ನಿರ್ದಾಕ್ಷಿಣ್ಯವಾಗಿಯೂ ಸತ್ಯೈಕನಿಷ್ಠೆಯ ಅಭಿಮಾನದಿಂದಲೂ ಶಾಸ್ತ್ರದ ದೇವತಾದಿಕಲ್ಪನೆಗಳನ್ನು ಪ್ರಶ್ನಿಸುವದಕ್ಕೆ ಈಗ ನಮಗೆ ಅವಕಾಶವೂ ಅಗತ್ಯವೂ ಧೈರ್ಯವೂ ಸ್ವಾತಂತ್ರ್ಯವೂ ಇರುವಂತೆ ಹಿಂದೆ ಇರಲಿಲ್ಲ. ಬೃಹತ್ತೂ ಮಹತ್ತೂ ಆದ ಈ ಪರಮೋಚಿತಪ್ರಶ್ನೆಗೆ ಅತಿಯಾದ ಶಾಸ್ತ್ರಶ್ರದ್ಧೆಯುಳ್ಳ ಆಸ್ತಿಕರ ಉತ್ತರವೇನಿರಬಹುದೆಂದು ಈಗ ನಾವು ಊಹಿಸಬಹುದು. ಸಮಂಜಸವೂ ನಿಜವಾಗಿ ಸಮಾಧಾನಕರವೂ ಸರ್ವಸಮ್ಮತವೂ ಆದ ಸದುತ್ತರವು ಹೊಳೆಯದಿರುವಾಗ ಕೋಪವೇ ಅವರ ಉತ್ತರವಾಗದಿದ್ದರೆ ಆ ಪುಣ್ಯವಂತರಿಗೆ ಧನ್ಯವಾದಗಳು.

ತಮ್ಮ ಪಶುಗಳಾದ ಮನುಷ್ಯರ ಯಾವ ಪ್ರಯತ್ನಕ್ಕಾದರೂ ವಿಘ್ನ ಮಾಡದೆ ಸಹಾಯಮಾಡಲು ದೇವತೆಗಳಿಗೆ ತಮ್ಮ ಆರಾಧನಾಸ್ವಾರ್ಥವೇ ಕಾರಣವಾದ್ದರಿಂದ, ದೇವತೆಗಳನ್ನು ಒಪ್ಪದಿದ್ದರೂ ಹಗಲಿರುಳೂ ನಿಸ್ವಾರ್ಥವಾಗಿ ಜನರ ಕಲ್ಯಾಣವನ್ನೇ ಸಾಧಿಸುತ್ತಿರುವ ಧರ್ಮಾತ್ಮರ ಲೋಕೋತ್ತರವಾದ ಕೈಂಕರ್ಯಕ್ಕೂ ಪಶುಪಾಲಕರಾದ ದೇವತೆಗಳು ತಮಗಿರುವ ಅಸಾಧಾರಣ ಈಶ್ವರೀಶಕ್ತಿಯಿಂದ ವಿಘ್ನವನ್ನೇ ಉಂಟುಮಾಡಬೇಕಲ್ಲವೆ ? ಇದು ನ್ಯಾಯವೆ ? ಸಾಧ್ಯವೆ ? ಈ ದೃಷ್ಟಿಯಿಂದ ವಿಚಾರಮಾಡಿದರೆ, ಶಾಸ್ತ್ರಕಲ್ಪನೆ ಸಮಂಜಸವಾಗಿ ತೋರುವದೆ?

ದೇವತೆಗಳು ತಮ್ಮ ಯಾವ ನರಕುರಿಗಳನ್ನು ಬಿಡುಗಡೆಮಾಡಲು ಇಚ್ಛಿಸುವರೋ ಅವರನ್ನು ಮಾತ್ರ ಶ್ರದ್ಧಾಭಕ್ತಿಯುಕ್ತರನ್ನಾಗಿ ಮಾಡುವರೆಂದೂ ಅವರ ಇಚ್ಛೆಗೂ ಹುಚ್ಚಿಗೂ ಮೆಚ್ಚಾಗದ ನರಪಶುಗಳನ್ನು ಮೋಕ್ಷಕಾರಣವಾದ ಶ್ರದ್ಧಾಭಕ್ತಿಧ್ಯಾನಯೋಗಾದಿಗಳಿಂದ ವಂಚಿತರನ್ನಾಗಿ ಮಾಡಿ ಬದ್ಧರನ್ನಾಗಿಯೇ ಉಳಿಸಿ

ಕೊಳ್ಳುವರೆಂದೂ ಶಾಸ್ತ್ರದಲ್ಲಿ ಹೇಳಿರುವದರಿಂದ ಮನುಷ್ಯನಿಗೆ ಇಚ್ಛಾಸ್ವಾತಂತ್ರ್ಯವೂ ಕರ್ತೃತ್ವಸ್ವಾತಂತ್ರ್ಯವೂ ಇಲ್ಲವೆಂದಾಗುತ್ತದೆ. ಇದರಿಂದ ದೇವತೆಗಳ ನಿರಂಕುಶಪ್ರಭುತ್ವದ ಸ್ವಚ್ಛಂದಪ್ರಭಾವದಲ್ಲಿ ಅವರಿಂದ ಕುಣಿಸಲ್ಪಡುತ್ತಿರುವ ನಿರ್ಜೀವಗೊಂಬೆಯಂತೆ ಮನುಷ್ಯನು ಅಸ್ವತಂತ್ರನಾಗಿ ವ್ಯವಹರಿಸುತ್ತಿರುವದರಿಂದ ಅವನು ಮಾಡುವ ಪುಣ್ಯಪಾಪಗಳಿಗೆ ಅವನು ಹೊಣೆಯೇ ಅಲ್ಲ- ಎಂದೂ ಆಗುತ್ತದೆ. ಇದು ನಿಜವಾದರೆ, ಮನುಷ್ಯನು ಅನುಭವಿಸುವ ಸುಖದುಃಖಗಳಿಗೆ ಕಾರಣವೇ ಇಲ್ಲವೆಂದಾಗುವದಿಲ್ಲವೆ? ಆಸ್ತಿಕಶಿರೋಮಣಿಗಳು ಇದನ್ನು ಗಂಭೀರವಾಗಿ ಆಲೋಚಿಸಬೇಕು.

62. ಇನ್ನು ಮುಮುಕ್ಷುಗಳ ವಿಚಾರ: ಮುಮುಕ್ಷು ಎಂದರೆ, ಮೋಕ್ಷೇಚ್ಛೆಯುಳ್ಳ ಮನುಷ್ಯ. ಇಲ್ಲಿ ಮನುಷ್ಯನ ಇಚ್ಛೆಯೇ ಪ್ರಧಾನ ; ದೇವತೆಗಳ ಇಚ್ಛೆಯಲ್ಲ. ನಿಜವಾದ ಮುಮುಕ್ಷು-ಎಂದರೆ, ವಿವೇಕವೈರಾಗ್ಯಾದಿಸಾಧನಚತುಷ್ಟಯಸಂಪನ್ನನೆಂದೇ ಅರ್ಥ. ಸಾಮಾನ್ಯವಾಗಿ ಶಾಸ್ತ್ರಪರಿಚಯವುಳ್ಳ ಮುಮುಕ್ಷುವು ವಿಶೇಷವಿಜ್ಞಾನಕ್ಕಾಗಿ ಬ್ರಹ್ಮಾನುಭವಿಯಾದ ಸದ್ಗುರುಗಳ ಬಳಿ ಸಾರಿ, ಶ್ರದ್ಧಾಭಕ್ತಿಸೇವಾದಿಗಳಿಂದ ಅವರ ಪ್ರೀತಿಯನ್ನೂ ಪ್ರಸನ್ನತೆಯನ್ನೂ ಸಂಪಾದಿಸಿ, ಅವರಿಂದ ಉಪದೇಶವನ್ನು ಪಡೆಯುತ್ತಾನೆ. ಸದ್ಗುರುವಿನ ಅಥವಾ ಶಾಸ್ತ್ರಾಚಾರ್ಯರ ಉಪದೇಶವನ್ನು ಸಾರಸಂಗ್ರಹಕ್ಕಾಗಿ ಒಂದೇ ವಾಕ್ಯದಲ್ಲಿ ಅಥವಾ ಮೂರು ನಾಲ್ಕು ವಾಕ್ಯಗಳಲ್ಲಿ ಅಡಕಮಾಡಬಹುದು.

1) ಪ್ರಜ್ಞಾನಂ ಬ್ರಹ್ಮ (ಪ್ರಜ್ಞಾನಮಾನಂದಂ ಬ್ರಹ್ಮ) 2) ಅಹಂ ಬ್ರಹ್ಮಾಸ್ಮಿ 3) ತತ್ತ್ವಮಸಿ 4) ಬ್ರಹ್ಮೈವ ಸತ್ಯಂ 5) ಸರ್ವಂ ಖಲ್ವಿದಂ ಬ್ರಹ್ಮ 6) ಬ್ರಹ್ಮ ಸತ್ಯಂ ಜಗನ್ಮಿಥ್ಯಾ ಜೀವೋ ಬ್ರಹ್ಮೈವ ನಾಪರಃ

1) ಪ್ರಜ್ಞಾನಘನವೇ, ಚೈತನ್ಯಘನವೇ ಬ್ರಹ್ಮ ಅಥವಾ ಚಿದ್ಘನವೇ ಸಚ್ಚಿದಾನಂದಘನವೇ ಬ್ರಹ್ಮ. 2) ಆ ಸಚ್ಚಿದಾನಂದ ಬ್ರಹ್ಮವೇ ನಿನ್ನ ಆತ್ಮವಾಗಿದೆ ; ನಿನ್ನ ಆತ್ಮವೇ ಆ ಬ್ರಹ್ಮವಾಗಿದೆ. 3) ಬ್ರಹ್ಮವು ಒಂದೇ ಸತ್ಯ ; ಪರಮಾತ್ಮ ಒಂದೇ ಸತ್ಯ. 4) ಈ ಸಕಲವೂ ಬ್ರಹ್ಮವೇ ; ಆದರೆ, ಈ ಸಕಲವೆನ್ನುವ ನಾಮರೂಪಾದಿಕಮಾಯಾಪ್ರಪಂಚವು ಬ್ರಹ್ಮದಲ್ಲಿ ಅವಿದ್ಯೆಯಿಂದ ಕಲ್ಪಿತವಾಗಿರುವ ಹುಸಿತೋರಿಕೆ ಮಾತ್ರವಾಗಿದೆ. ಆದ್ದರಿಂದ, 5) ಬ್ರಹ್ಮ ಒಂದೇ ಸತ್ಯ ; ಬ್ರಹ್ಮವನ್ನು ಬಿಟ್ಟು ಬೇರೆ ಸ್ವತಂತ್ರವಾದ ಇರುವಿಕೆಯಿಲ್ಲದ ಜಗತ್ತು ಮರುಮರೀಚಿಕೆಯಂತೆ (ಬಿಸಿಲ್‌ಕುದುರೆಯಂತೆ) ಹುಸಿತೋರಿಕೆಮಾತ್ರವಾಗಿದೆ. ಜೀವರೆಂದರೆ ದೇವರೇ ; ಬೇರೆಯಲ್ಲ.

ಏಕೋ ದೇವಃ ಸರ್ವಭೂತೇಷು ಗೂಢಃ ।
ಸರ್ವವ್ಯಾಪೀ ಸರ್ವಭೂತಾನ್ತರಾತ್ಮಾ ॥
ಕರ್ಮಾಧ್ಯಕ್ಷಃ ಸರ್ವಭೂತಾಧಿವಾಸಃ ।
ಸಾಕ್ಷೀ ಚೇತಾ ಕೇವಲೋ ನಿರ್ಗುಣಶ್ಚ ॥
(ಶ್ವೇತಾಶ್ವತರ ಉ. ೬-೧೧)

63. ಸ್ವಯಂಪ್ರಕಾಶನಾದ ಒಬ್ಬನೇ ದೇವನು ಎಲ್ಲಾ ಪ್ರಾಣಿಗಳಲ್ಲಿಯೂ ಅಡಗಿಕೊಂಡಿರುತ್ತಾನೆ. ಅವನು ಎಲ್ಲಾ ಪದಾರ್ಥಗಳಲ್ಲಿಯೂ ಪ್ರಾಣಿಗಳಲ್ಲಿಯೂ ವ್ಯಾಪಿಸಿಕೊಂಡಿರುತ್ತಾನೆ ! ಅವನು ಎಲ್ಲಾ ಪ್ರಾಣಿಗಳಿಗೂ (ಅವುಗಳಲ್ಲಿ) ತೀರಾ ಒಳಗಿರುವ ಆತ್ಮನಾಗಿರುತ್ತಾನೆ. ಅವನು ಕರ್ಮಕ್ಕೆ ಫಲವನ್ನು ಕೊಡುವ ಪ್ರಭುವು, ಒಡೆಯನು. ಅವನು ಸರ್ವಭೂತಗಳಲ್ಲಿ ಮೇಲಿದ್ದುಕೊಂಡಿರುವವನು ; ಸಾಕ್ಷಿಯು (ಇನ್ನೊಂದರ ಸಹಾಯವಿಲ್ಲದೆ, ಪ್ರಯತ್ನವಿಲ್ಲದೆ, ಸ್ವಾಭಾವಿಕವಾಗಿ, ನೇರಾಗಿ, ಎಲ್ಲವನ್ನೂ ಒಟ್ಟಾಗಿ, ಬೆಳಗುವವನು). ಸ್ವಯಂಪ್ರಕಾಶ-ಚೈತನ್ಯ ಸ್ವರೂಪನು, ಅದ್ವಿತೀಯನು, ಯಾವ ವಿಶೇಷಗುಣ- ಧರ್ಮಗಳೂ ಇಲ್ಲದವನು.

ಸದ್ಗುರುವಿನ ಈ ಬಗೆಯ ಪರಮಸತ್ಯವಾದ ಪರಮಾರ್ಥತತ್ತ್ವದ ಉಪದೇಶವನ್ನು ಶ್ರವಣಮಾಡಿದ ಮುಮುಕ್ಷುವು ಶ್ರುತ್ಯುಕ್ತವಾದ ತರ್ಕದಿಂದ ಯುಕ್ತಿಯುಕ್ತವಾಗಿ ಚಿಂತನಮಾಡಿ, ನಿಶ್ಚಿತವಾದ ಧ್ಯಾನದಿಂದ (ವಸ್ತುತಂತ್ರವಾಗಿ) ಅದ್ವಿತೀಯಬ್ರಹ್ಮಾತ್ಮವಿಜ್ಞಾನವನ್ನು ಪಡೆಯಬೇಕಾಗಿರುವಾಗ ಇಂದ್ರಾಗ್ನಿ ಮೊದಲಾದ ಸಾಮಾನ್ಯದೇವತೆಗಳ ಉಪಾಸನೆಗೆ ಅಗತ್ಯವಾದರೂ ಅವಕಾಶವಾದರೂ ಎಲ್ಲಿದೆ ? ದೇವಾಧಿದೇವನೂ ದೇವೋತ್ತಮನೂ ಆದ ಪರಮಾತ್ಮನ ಆಶ್ರಯವನ್ನೂ ಅನುಗ್ರಹವನ್ನೂ ಪಡೆಯಬೇಕಾದ ಮುಮುಕ್ಷುವಿಗೆ ಮಿಕ್ಕ ಸಾಮಾನ್ಯ ದೇವತೆಗಳ ಹಂಗೇನು ? ಸಾರ್ವಭೌಮನಾದ ಸಮ್ರಾಟನ ಆಶ್ರಯವನ್ನೂ ಅನುಗ್ರಹವನ್ನೂ ಪಡೆದಿರುವ ಜನನಾಯಕನಿಗೆ, ಮಂತ್ರಿ ಮೊದಲಾದ ಇತರ ಅಧಿಕಾರಿಗಳ ಒಲವನ್ನು ಸಂಪಾದಿಸುವ ಅಗತ್ಯವೇನಿದೆ ? ಇನ್ನೊಂದು ದೃಷ್ಟಿಯಿಂದ ಪರಮಾತ್ಮನೇ ಎಲ್ಲ ದೇವತೆಗಳ ಆತ್ಮನಾದ್ದರಿಂದ ಪರಮಾತ್ಮಭಕ್ತಿಯಲ್ಲಿ ಏಕನಿಷ್ಠೆಯುಳ್ಳ ಮುಮುಕ್ಷುವು ಯಾವ ದೇವತೆಗೂ ವಿರೋಧಿಯಲ್ಲ, ಯಾವ ದೇವತೆಯನ್ನೂ ತಿರಸ್ಕರಿಸುವದಿಲ್ಲ. ಅವನಿಗೆ ಬೇರೆ ದೇವತೆಯ ಒಲವನ್ನು ಸಂಪಾದಿಸುವ ಹಂಬಲವೂ ಇಲ್ಲ ; ಅದರ ಭಯವೂ ಇಲ್ಲ.

64. ಭಗವದ್ಗೀತೆಯಲ್ಲಿ, **ದೇವಾನ್ ಭಾವಯತಾನೇನ....(೩-೧೧)** ಪೂರ್ವದಲ್ಲಿ ಪ್ರಜಾಪತಿಯು ಯಜ್ಞಗಳೊಡನೆ ಪ್ರಜೆಗಳನ್ನು ಸೃಷ್ಟಿಸಿ ಹೇಳಿದ

ನೇನೆಂದರೆ, "ಇದರಿಂದ (ಯಜ್ಞದಿಂದ) ಅಭಿವೃದ್ಧಿಯನ್ನು ಹೊಂದಿರಿ ; ಇದು ನಿಮಗೆ ಇಷ್ಟಕಾಮಧೇನುವಾಗಲಿ ! (ಗೀ. ೩-೧೦).

ಈ ಯಜ್ಞಗಳಿಂದ ದೇವತೆಗಳನ್ನು ಸಂಭಾವಿಸಿರಿ; ಆ ದೇವತೆಗಳು ನಿಮ್ಮನ್ನು ಸಂಭಾವಿಸಲಿ! ಹೀಗೆ, ಒಬ್ಬರನ್ನೊಬ್ಬರು ಭಾವಿಸುತ್ತಿದ್ದರೆ ಪರಮಶ್ರೇಯಸ್ಸನ್ನು ಪಡೆಯುವಿರಿ. (ಗೀ. ೩-೧೧) ಯಜ್ಞಭಾವಿತರಾದ ದೇವತೆಗಳು ನಿಮಗೆ ಇಷ್ಟವಾದ ಭೋಗಗಳನ್ನು ಕೊಡುವರಲ್ಲವೆ !........(೩-೧೨) ಅನ್ನದಿಂದ ಪ್ರಾಣಿಗಳೂ (ಧಾನ್ಯದ ಬೆಳೆಯಿಂದ ಅನ್ನವೂ) ಮಳೆಯಿಂದ ಅನ್ನದ ಬೆಳೆಯೂ, ಯಜ್ಞದಿಂದ ಮಳೆಯೂ(೩-೧೪) ಆಗುವವು. ಯಜ್ಞದಿಂದ ಸಂಪ್ರೀತರಾದ ದೇವತೆಗಳು ಮಳೆಯನ್ನು ಕೊಡುತ್ತಾರೆ. ಹೀಗೆ ದೇವತೆಗಳು, ಯಜ್ಞ, (ದೇವತೆಗಳು) ಮಳೆ, ಬೆಳೆ-ಆಹಾರ, ಪ್ರಾಣಿಗಳು, (ಮನುಷ್ಯರಿಂದ ಪುನಃ ಯಜ್ಞ) ಇದೇ ಧರ್ಮಚಕ್ರ. ಈ ಧರ್ಮಚಕ್ರದ ಸಂತತವಾದ ಸಂಚಾಲನಕ್ಕೆ ಯಾರು ಭಾಗಿಗಳಾಗುವದಿಲ್ಲವೋ ಅವರು ಪಾಪಜೀವಿಗಳು ಎಂದು ಗೀತೆಯಲ್ಲಿ ಭಗವಂತನೇ ಹೇಳಿದ್ದಾನೆ. ಯಜ್ಞವೆಂದರೆ, ಅಗ್ನಿಯಲ್ಲಿ ಮಾಡುವ ಹವನಹೋಮಾದಿಗಳೇ ಸರಿ ; ಯಜ್ಞಕ್ಕೆ ಬೇರೇನೂ ಅರ್ಥವನ್ನು ಮಾಡುವಹಾಗಿಲ್ಲ ; ಏಕೆಂದರೆ,

ಅಗ್ನೌ ಪ್ರಾಸ್ತಾಹುತಿಃ ಸಮ್ಯಗಾದಿತ್ಯಮುಪತಿಷ್ಠತೇ ।
ಆದಿತ್ಯಾಜ್ಜಾಯತೇ ವೃಷ್ಟಿಃ ವೃಷ್ಟೇರನ್ನಂ ತತಃ ಪ್ರಜಾಃ ॥
(ಮನು. ೩--೭೬)

ಅಗ್ನಿಯಲ್ಲಿ ಸರಿಯಾಗಿ ಹಾಕಿದ ಹೋಮವು ಆದಿತ್ಯನನ್ನು ಹೋಗಿ ಮುಟ್ಟುತ್ತದೆ ; ಆದಿತ್ಯನಿಂದ ಮಳೆಯಾಗುತ್ತದೆ ; ಮಳೆಯಿಂದ ಆಹಾರದ ಬೆಳೆಯಾಗುತ್ತದೆ ; ಆಹಾರದಿಂದ ಪ್ರಜೆಗಳು ಜನಿಸುತ್ತಾರೆ. ಹೀಗೆ ಮನುಸ್ಮೃತಿಯಲ್ಲಿ ಹೇಳಿರುತ್ತದೆ.

ಈ ದೃಷ್ಟಿಯಿಂದ ಮಳೆಗೆ ಕಾರಣವಾದ ಯಜ್ಞಕ್ಕೆ ಇದೇ ಅರ್ಥವೇ ಹೊರತು, ಈಗಿನ ಕಾಲಕ್ಕೆ ಅನ್ವಯಿಸುವಂತೆ ಬೇರೆ ಅರ್ಥವನ್ನು ಮಾಡಬಾರದು. ದೇಶಕಾಲಗಳ ದೂರವನ್ನು ಮಿಂಚಿನವೇಗದಿಂದ ಮೀರುತ್ತಿರುವ ಆಧುನಿಕ ನಾಗರಿಕತೆಯ ವೈಜ್ಞಾನಿಕ ತಾಂತ್ರಿಕ ಬೆಳವಣಿಗೆಯ ಅದ್ಭುತಸನ್ನಿವೇಶದಲ್ಲಿ ಪರಮೋಚಿತ ಪ್ರಶ್ನೆ ಒಂದು ಏಳುತ್ತದೆ.

ನಾವು ಅಗ್ನಿಯಲ್ಲಿ ಹಾಕುವ ಆಹುತಿಯಿಂದ ಪ್ರೀತರಾದ ದೇವತೆಗಳಿಂದಲೇ ನಮಗೆ ಮಳೆಬೆಳೆಗಳಾಗುತ್ತಿರುವದು ನಿಜವಾದರೆ, ಬಹಳಮಟ್ಟಿಗೆ ದೇವತೆಗಳನ್ನು (ನಮ್ಮಂತೆ) ನಂಬದಿರುವ, ಮತ್ತು ಎಂದೂ ಹೋಮಹವನಾದಿಗಳನ್ನು

ಮಾಡದಿರುವ ಅಮೆರಿಕ-ರಷ್ಯಾ ಮೊದಲಾದ ದೇಶಗಳಿಗೆ ಮಳೆಯೇ ಬರಬಾರದಾಗಿತ್ತು, ಅಲ್ಲಿ ಆಹಾರಧಾನ್ಯಗಳೇ ಬೆಳೆಯಬಾರದಾಗಿತ್ತು ಅಲ್ಲವೆ? ಆದರೆ ಇದರ ವಿರುದ್ಧವಾಗಿ, ಇಡೀ ಜಗತ್ತಿನ ಆಹಾರದ ಆವಶ್ಯಕತೆಯನ್ನು ಪೂರೈಸುವಷ್ಟು ಆ ದೇಶಗಳಲ್ಲಿ ಮಳೆಬೆಳೆಗಳಾಗುತ್ತಿರುವವೆಂದೂ "ವರ್ಲ್ಡ್ ಮಾರ್ಕೆಟ್ ರೇಟನ್ನು ಕಂಟ್ರೋಲ್" ಮಾಡುವದಕ್ಕಾಗಿ ಹೆಚ್ಚಾಗಿ ಬೆಳೆದ ಗೋಧಿ ಮೊದಲಾದ ಧಾನ್ಯಗಳನ್ನು ತೆಗೆದುಕೊಂಡು ಹೋಗಿ ಸಮುದ್ರದಲ್ಲಿ ಮುಳುಗಿಸುವರೆಂದೂ ಖ್ಯಾತಿ ಇದೆಯಲ್ಲ- ಇದು ನಿಜವಾದರೆ- ಇದಕ್ಕೇನು ಕಾರಣ? ಸತ್ಯ ಒಂದೇ ನಮಗೆ ಬೇಕಾಗಿ ನಾವು ಸತ್ಯಪ್ರಿಯರಾದರೆ, ಮೂಢನಂಬಿಕೆಗಳನ್ನು ಬಿಟ್ಟು ಗಂಭೀರವಾಗಿ ವಿಚಾರಮಾಡಬೇಕು. ಹೋಮಹವನಾದಿಗಳನ್ನು ಮಾಡಿ ದೇವತೆಗಳನ್ನು ತೃಪ್ತಿಪಡಿಸದಿರುವ ಅಮೆರಿಕಾ ಮೊದಲಾದ ದೇಶಗಳಲ್ಲಿ ಸಮೃದ್ಧಿಯಾಗಿ ಮಳೆಬೆಳೆಗಳಾಗುತ್ತಿರುವದಕ್ಕೆ ಕಾರಣವೇನು?

ಇದಂತು ಇರಲಿ, ಪುರಾಣಪ್ರಸಿದ್ಧವಾಗಿ, ದೇವತೆಗಳ ಶತ್ರುಗಳೇ ಆದ ದೈತ್ಯರು, ದೇವತೆಗಳಿಂದಲೇ ಅನುಗ್ರಹವಾಗಬೇಕಾಗಿರುವ ಮಳೆಬೆಳೆಗಳಿಲ್ಲದೆ ಸಾವಿರಾರು ವರ್ಷಗಳು ಹೇಗೆ ಬದುಕಿದ್ದರು? ಅಮೃತಪಾನಮಾಡಿ ಅಜರಾಮರರಾಗಿರುವ (ಮುಪ್ಪೂ, ಸಾವೂ ಇಲ್ಲದವರಾಗಿರುವ) ದೇ ವ ತೆ ಗ ಳಿ ಗೆ–ಅವರ ಸಂತೋಷಕ್ಕಾಗಿ "ನರಪಶು"ಗಳು ಕೊಡುವ ಅಗ್ನ್ಯಾಹುತಿಯ ಹಂಗಾದರೂ ಏಕೆ?

ಈ ಬಗೆಯ ವಿಚಾರಗಳೆಲ್ಲಾ ನಾಸ್ತಿಕವಾದವೆಂದು ತಿರಸ್ಕರಿಸಿ ಅವನ್ನು ತಳ್ಳಿಹಾಕದೆ, ಸತ್ಯಪ್ರಿಯರಾದವರು ಮೂಢನಂಬಿಕೆಗಳನ್ನು ಬದಿಗಿರಿಸಿ, ಬಿಚ್ಚು ಮನಸ್ಸಿನಿಂದಲೂ ವೈಜ್ಞಾನಿಕದೃಷ್ಟಿಯಿಂದಲೂ ಧೈರ್ಯವಾಗಿಯೂ ಗಂಭೀರವಾಗಿಯೂ ಸೂಕ್ಷ್ಮವಾಗಿಯೂ ವಿಚಾರಿಸಬೇಕು.

65. ಈಗ, ಭಗವದ್ಗೀತೆಯಲ್ಲಿ ಬಂದಿರುವ ಪ್ರಾರಬ್ಧ – ಪೌರುಷಗಳ ವಿಷಯವನ್ನು ಸಂಕ್ಷೇಪವಾಗಿ ವಿಚಾರಮಾಡಬಹುದು.

ಸಂಪ್ರದಾಯಶ್ರದ್ಧೆ ಉಳ್ಳವರು ಗೀತಾಮಾಹಾತ್ಮ್ಯವನ್ನು ಮೊದಲು ಓದುವದರ ಮೂಲಕ ಗೀತಾಪಾರಾಯಣವನ್ನು ಪ್ರಾರಂಭಿಸುವ ಪದ್ಧತಿ ಇದೆ. ಮಾಹಾತ್ಮ್ಯದ ಮೊದಲನೆಯ ಶ್ಲೋಕವೇ ಪ್ರಾರಬ್ಧ-ಪೌರುಷಗಳ ವಿಷಯವನ್ನು ಹೇಳುತ್ತಿದೆ:

ಶ್ರೀ ಧರೋವಾಚ :

ಭಗವನ್ ಪರಮೇಶಾನ ಭಕ್ತಿರವ್ಯಭಿಚಾರಿಣೀ ।
ಪ್ರಾರಬ್ಧಂ ಭುಜ್ಯಮಾನಸ್ಯ ಕಥಂ ಭವತಿ ಹೇ ಪ್ರಭೋ ॥೧॥

ಶ್ರೀ ವಿಷ್ಣುರುವಾಚ :

ಪ್ರಾರಬ್ಧಂ ಭುಜ್ಯಮಾನೋ ಹಿ ಗೀತಾಭ್ಯಾಸರತಃ ಸದಾ ।
ಸ ಮುಕ್ತಃ ಸ ಸುಖೀ ಲೋಕೇ ಕರ್ಮಣಾ ನೋಪಲಿಪ್ಯತೇ ॥೨॥
ಗೀತಾಶ್ರಯೇಽಹಂ ತಿಷ್ಠಾಮಿ ಗೀತಾ ಮೇ ಚೋತ್ತಮಂ ಗೃಹಮ್ ।
ಗೀತಾಜ್ಞಾನಮುಪಾಶ್ರಿತ್ಯ ತ್ರೀನ್ ಲೋಕಾನ್ ಪಾಲಯಾಮ್ಯಹಮ್॥
ಗೀತಾ ಮೇ ಪರಮಾ ವಿದ್ಯಾ ಬ್ರಹ್ಮರೂಪಾ ನ ಸಂಶಯಃ ।........॥೬॥
ಗೀತಾರ್ಥಂ ಧ್ಯಾಯತೇ ನಿತ್ಯಂ ಕೃತ್ವಾ ಕರ್ಮಾಣಿ ಭೂರಿಶಃ ।
ಜೀವನ್ಮುಕ್ತಃ ಸ ವಿಜ್ಞೇಯೋ ದೇಹಾನ್ತೇ ಪರಮಂ ಪದಮ್ ॥೧೯॥
ಗೀತಾಮಾಶ್ರಿತ್ಯ ಬಹವೋ ಭೂಭುಜೋ ಜನಕಾದಯಃ ।
ನಿರ್ಧೂತಕಲ್ಮಷಾ ಲೋಕೇ ಗೀತಾ ಯಾತಾಃ ಪರಂ ಪದಮ್ ॥೨೦॥

ಶ್ರೀದೇವಿ (ಲಕ್ಷ್ಮೀ) ಭೂದೇವಿ– ಎಂಬ ಶ್ರೀಮಹಾವಿಷ್ಣುವಿನ ಇಬ್ಬರು ಪತ್ನಿಯರಲ್ಲಿ ಭೂದೇವಿಯು (ಧರಾ) ಭೂಲೋಕದ ತನ್ನ ಮಕ್ಕಳ ಮೇಲಿನ ವಾತ್ಸಲ್ಯದಿಂದ ವಿಷ್ಣುವನ್ನು ಪ್ರಾರ್ಥಿಸಿ ಕೇಳಿದ್ದೇನೆಂದರೆ :

ಎಲೈ ಭಗವಂತನಾದ ಪರಮೇಶ್ವರನೆ ! ತಮ್ಮತಮ್ಮ ಪ್ರಾರಬ್ಧಕರ್ಮದ ಫಲವಾದ ಇಷ್ಟವನ್ನೋ ಅನಿಷ್ಟವನ್ನೋ ಸುಖವನ್ನೋ ದುಃಖವನ್ನೋ ನಿರಂತರವಾಗಿ ಅನುಭವಿಸುತ್ತಿರುವ ಜೀವರು ಪರಮಾತ್ಮನಾದ ನಿನ್ನಲ್ಲಿ ಚಾಂಚಲ್ಯವಿಲ್ಲದ ತೀವ್ರವಾದ ಏಕನಿಷ್ಠೆಯ ಭಕ್ತಿಯನ್ನು ಪಡೆದು, ಕರ್ಮಕೋಟಲೆಯ ಮಾಯಾಜಾಲದಿಂದ ಮುಕ್ತರಾಗುವದು ಹೇಗೆ ?

ಶ್ರೀವಿಷ್ಣುವು ಹೇಳಿದ್ದೇನೆಂದರೆ : ದೇವಿ ! ನೀನು ಕರುಣೆಯಿಂದ ಒಳ್ಳೆಯ ಪ್ರಶ್ನೆಯನ್ನು ಮಾಡಿದೆ ; ಇದು ಭೂಲೋಕದ ದುಃಖಿಗಳಾದ ಸಕಲಜೀವರಿಗೂ ಸಂಬಂಧಪಟ್ಟ ಅತ್ಯಂತ ಮಹತ್ತ್ವದ ಪ್ರಶ್ನೆಯಾಗಿದೆ. ಸಂಸಾರದ ಸುಖದುಃಖಗಳಿಗೆ ಅಜ್ಞಾನವೇ ಮೂಲಕಾರಣ ; ಅಜ್ಞಾನವೆಂದರೆ, ತನ್ನ ಸ್ವರೂಪಜ್ಞಾನವಿಲ್ಲದಿರುವದು ; ಅಥವಾ ಪರಮಾತ್ಮಸ್ವರೂಪಜ್ಞಾನವಿಲ್ಲದಿರುವದು. ತನ್ನ ನಿಜರೂಪದ ಅರಿವು ಇಲ್ಲದಿರುವದರಿಂದಲೂ, ದೇಹೇಂದ್ರಿಯಾದಿಗಳೇ ತಾನೆಂಬ ಅಭಿಮಾನದಿಂದಲೂ ತಾನೇ ಪುಣ್ಯಪಾಪಕರ್ಮಗಳನ್ನು ಮಾಡತಕ್ಕ ಕರ್ತೃವೆಂದೂ ಅವುಗಳ ಫಲವಾದ ಸುಖದುಃಖಗಳನ್ನು ಅನುಭವಿಸುವ ತಾನು ಭೋಕ್ತೃವೆಂದೂ ಭ್ರಮೆ ಉಂಟಾಗುತ್ತದೆ. ಜನನ– ಮರಣರೂಪವಾದ ಸಂಸಾರಚಕ್ರದ ಭ್ರಮಣೆಯಲ್ಲಿ ಸಿಕ್ಕು ಸಂಕಟಪಡುವದಕ್ಕೆ ಅಜ್ಞಾನಪ್ರಯುಕ್ತವಾದ ಈ ಅಭಿಮಾನವೇ–ಅಧ್ಯಾಸವೇ–ಕಾರಣ.

ಶ್ರೋತ್ರಿಯಬ್ರಹ್ಮನಿಷ್ಠರಾದ ಸದ್ಗುರುಗಳನ್ನು ಹೊಂದಿ, ಶ್ರದ್ಧಾಭಕ್ತಿ ಸೇವಾದಿಗಳಿಂದ ಅವರ ಪ್ರಸನ್ನತೆಯನ್ನು ಪಡೆದು, ಭಗವಂತನು ಗೀತೆಯಲ್ಲಿ ಮಾಡಿರುವ ಉಪದೇಶದ ಅರ್ಥವನ್ನು ಅವರಿಂದ ತಿಳಿದು, ಅದರಲ್ಲಿ ಹೇಳಿರುವ ಜ್ಞಾನಸಾಧನೆಗಳನ್ನು ಸರ್ವದಾ ಅಭ್ಯಾಸಮಾಡಿದರೆ, ಅಂಥಾ ಭಕ್ತನಾದ ಮುಮುಕ್ಷುವು ತತ್ತ್ವಜ್ಞಾನವನ್ನು ಪಡೆದು, ಕರ್ತೃತ್ವಭೋಕ್ತೃತ್ವಭ್ರಾಂತಿಯನ್ನು ಕಳೆದುಕೊಂಡು, ನಿಜಸುಖಿಯೂ ಮುಕ್ತನೂ ಆಗುತ್ತಾನೆ. (೧)

ನಾನು ವಾಸಮಾಡುತ್ತಿರುವ ನನಗೆ ಅತ್ಯಂತಪ್ರಿಯವಾದ ಮನೆ- ಎಂದರೆ ಗೀತೆಯೇ. ದೇವಿ! ಭಗವದ್ಗೀತೆಯೇ ನನ್ನ ವೈಕುಂಠ! ಸಕಲಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳ ಕರ್ತನೇ ನಾನಾದರೂ ಯಾವ ಕರ್ತೃತ್ವವನ್ನೂ ನಾನು ಅಂಟಿಸಿಕೊಳ್ಳದೆ ನಿತ್ಯಮುಕ್ತನಾಗಿರುವದಕ್ಕೆ ಗೀತೆಯಲ್ಲಿ ಹೇಳಿರುವ ಜ್ಞಾನವನ್ನು ನಾನು ಆಶ್ರಯಿಸಿರುವದೇ ಕಾರಣ. (೭)

ಗೀತೆಯೇ ನನಗೆ ಪರಮೋತ್ಕೃಷ್ಟವಾದ ಬ್ರಹ್ಮವಿದ್ಯೆ ಆಗಿದೆ.

ಲೌಕಿಕ- ವೈದಿಕಗಳಾದ ಎಷ್ಟು ಕರ್ಮಗಳನ್ನು ಹಗಲಿರುಳೂ ಮಾಡುತ್ತಿದ್ದರೂ ಗೀತಾರ್ಥವನ್ನು ನಿರಂತರವಾಗಿ ಚಿಂತಿಸುತ್ತಿದ್ದರೆ, ಅವನೇ ಜೀವನ್ಮುಕ್ತನೆಂದು ತಿಳಿಯಬೇಕು; ಕೊನೆಯಲ್ಲಿ ಅವನು ಪರಮಪದವನ್ನು ಪಡೆಯುತ್ತಾನೆ. (೧೯)

ಜನಕಾದಿ ಮಹಾರಾಜರುಗಳು ನಿಷ್ಕಲ್ಮಷಚಿತ್ತರಾಗಿ ಪ್ರಾರಬ್ಧವನ್ನು ಜಯಿಸಿ, ಜೀವನ್ಮುಕ್ತರೆಂದೂ ವಿದೇಹಮುಕ್ತರೆಂದೂ ಖ್ಯಾತಿಯನ್ನು ಹೊಂದಿ, ಕೊನೆಯಲ್ಲಿ ಪರಮಪದವಿಯನ್ನೂ ಪಡೆದುದಕ್ಕೆ ಅವರು ಗೀತಾಜ್ಞಾನವನ್ನು ಆಶ್ರಯಿಸಿದ ಅವರ ಪೌರುಷಪ್ರಯತ್ನವೇ ಮುಖ್ಯಕಾರಣವಾಗಿದೆ. (೨೦)

ಸದ್ಗುರುಗಳಿಂದ ಅನುಗ್ರಹವಾಗುವ ಗೀತಾಶಾಸ್ತ್ರದ ಉಪದೇಶಕ್ಕೆ ಅನು-ಗುಣವಾಗಿ ನಡೆಸುವ ಪೌರುಷಪ್ರಯತ್ನದಿಂದ ಪ್ರಾರಬ್ಧದ ಪೀಡೆಯನ್ನು ಪರಿ-ಹರಿಸಿಕೊಳ್ಳುವದೇ ಗೀತೋಪದೇಶದ ಉದ್ದಿಷ್ಟಫಲವೆಂದು ಭೂದೇವೀ ಮಹಾವಿಷ್ಣು-ಇವರ ಸಂವಾದದಿಂದ ಈ ಮಾಹಾತ್ಮ್ಯದಲ್ಲಿ ಸ್ಪಷ್ಟವಾಗುತ್ತದೆ.

66. ಈಗ ಈ ಗೀತಾಶಾಸ್ತ್ರದ ಉಪದೇಶವೇನು? ಎನ್ನುವದನ್ನು ಸಂಕ್ಷೇಪವಾಗಿ ವಿಚಾರಮಾಡೋಣ:

ಉದ್ಧರೇದಾತ್ಮನಾತ್ಮಾನಂ ನಾತ್ಮಾನಮವಸಾದಯೇತ್ ।
ಆತ್ಮೈವ ಹ್ಯಾತ್ಮನೋ ಬಂಧುರಾತ್ಮೈವ ರಿಪುರಾತ್ಮನಃ ॥ ಗೀ. ೬-೫ ॥

ಬಂಧುರಾತ್ಮಾತ್ಮನಸ್ತಸ್ಯ ಯೇನಾತ್ಮೈವಾತ್ಮನಾ ಜಿತಃ ।
ಅನಾತ್ಮನಸ್ತು ಶತ್ರುತ್ವೇ ವರ್ತೇತಾತ್ಮೈವ ಶತ್ರುವತ್ ॥ ೬-೬ ॥
ಜಿತಾತ್ಮನಃ ಪ್ರಶಾನ್ತಸ್ಯ ಪರಮಾತ್ಮಾ ಸಮಾಹಿತಃ ।
ಶೀತೋಷ್ಣ ಸುಖದುಃಖೇಷು ತಥಾ ಮಾನಾಪಮಾನಯೋಃ ॥೬-೭॥
ಜ್ಞಾನವಿಜ್ಞಾನತೃಪ್ತಾತ್ಮಾ ಕೂಟಸ್ಥೋ ವಿಜಿತೇನ್ದ್ರಿಯಃ ।
ಯುಕ್ತ ಇತ್ಯುಚ್ಯತೇ ಯೋಗೀ ಸಮಲೋಷ್ಟಾಶ್ಮಕಾಞ್ಚನಃ ॥೬-೮॥

ಜನನಮರಣರೂಪಸಂಸಾರಸಾಗರದಲ್ಲಿ ಮುಳುಗಿರುವ ತನ್ನನ್ನು ತಾನು ತನ್ನ ವಿಚಾರಶಕ್ತಿಯಿಂದಲೇ ಮೇಲಕ್ಕೆ ತನ್ನ ಸ್ವರೂಪಜ್ಞಾನಕ್ಕೆ ಎತ್ತಿಕೊಳ್ಳ ಬೇಕು. ತನ್ನಲ್ಲಿ ಇಲ್ಲ-ಸಲ್ಲದ ಅಥವಾ ಸಾಮಾನ್ಯವಾಗಿ ಇರಬಹುದಾದ ದೋಷ ಗಳನ್ನೇ ಹೆಚ್ಚಾಗಿ ಭಾವಿಸಿಕೊಂಡು, ತಾನು ಅಪ್ರಯೋಜಕನೆಂದೂ ಅಯೋಗ್ಯ ನೆಂದೂ ಅಶಕ್ತನೆಂದೂ ತನ್ನನ್ನು ಕೀಳಾಗಿ ಕಂಡು, ತಿರಸ್ಕರಿಸಿ, ಕೈಬಿಡಬಾರದು. ಏಕೆಂದರೆ, ತನ್ನ ಸಂಬಂಧವಾದ ಕೀಳು ಅರಿವೇ ಆತ್ಮಪತನಕ್ಕೆ ಕಾರಣವಾಗು ತ್ತದೆ. ಇದರ ಪರಿಹಾರಕ್ಕಾಗಿ ಒಂದು ಸತ್ಯವನ್ನು ನಾವು ಗಮನಿಸಬೇಕು. "ದೃಷ್ಟಂ ಕಿಮಪಿ ಲೋಕೇಽಸ್ಮಿನ್ ನ ನಿರ್ದೋಷಂ ನ ನಿರ್ಗುಣಮ್" ಈ ಲೋಕದಲ್ಲಿರುವ ಯಾವ ವಸ್ತುವೇ ಆಗಲಿ, ಯಾವ ವ್ಯಕ್ತಿಯೇ ಆಗಲಿ ಒಂದೂ ದೋಷವಿಲ್ಲದ್ದು ಎಂದಾಗಲಿ, ಒಂದೂ ಗುಣವಿಲ್ಲದ್ದು ಎಂದಾಗಲಿ ಇಲ್ಲವೇ ಇಲ್ಲ. ಇದು ಎಲ್ಲರೂ ಒಪ್ಪಬೇಕಾದ (ಸರ್ವಸಮ್ಮತ) ಸತ್ಯ.

ನ ತದಸ್ತಿ ಪೃಥಿವ್ಯಾಂ ವಾ ದಿವಿ ದೇವೇಷು ವಾ ಪುನಃ ।
ಸತ್ತ್ವಂ ಪ್ರಕೃತಿಜೈರ್ಮುಕ್ತಂ ಯದೇಭಿಸ್ಸ್ಯಾತ್ ತ್ರಿಭಿರ್ಗುಣೈಃ
॥ ಗೀ. ೧೮-೪೦ ॥

ಈ ಲೋಕದಲ್ಲಾಗಲಿ, ಅಂತರಿಕ್ಷದಲ್ಲಾಗಲಿ, ದೇವತೆಗಳಲ್ಲಾಗಲಿ ಪ್ರಕೃತಿ (ಮಾಯಾ)ಜನ್ಯವಾದ ಸತ್ತ್ವ, ರಜಸ್ಸು, ತಮಸ್ಸು ಎಂಬ ಮೂರು ಗುಣಗಳಿಂದ ಬಿಡಲ್ಪಟ್ಟ ಯಾವದೊಂದು ಪದಾರ್ಥವೂ ಇಲ್ಲ, ಪ್ರಾಣಿಯೂ ಇಲ್ಲ. ಈ ಮೂರು ಗುಣಗಳಲ್ಲಿ ಎಲ್ಲಾ ಬಗೆಯ ತೃಷ್ಣೆ(ಕಾಮ)ಗಳಿಗೂ ಕರ್ಮಕ್ಕೂ ಕಾರಣವಾದ ರಜೋಗುಣವೇ ದೋಷವು. ಮತ್ತು ನಿದ್ರೆ, ಆಲಸ್ಯ, ಮೈಗಳ್ಳತನ, ತಪ್ಪುತಿಳು ವಳಿಕೆ, ತಪ್ಪುನುಡಿ-ನಡೆ, ಅಜ್ಞಾನ-ಇವುಗಳಿಗೆ ಕಾರಣವಾದ ಮೋಹಕವೂ ಆದ ತಮೋಗುಣವೇ ದೋಷ. ತತ್ತ್ವಜ್ಞಾನಕ್ಕೆ ಕಾರಣವಾದ ಸತ್ತ್ವಗುಣ ಒಂದೇ ಶುದ್ಧವು. ಆದ್ದರಿಂದ, ಅಷ್ಟಿಷ್ಟಾದರೂ ದೋಷವಿಲ್ಲದ ವ್ಯಕ್ತಿಯೇ ಇಲ್ಲ ಎಂಮ ಸಿದ್ಧವಾಗುತ್ತದೆ. ಈ ಸತ್ಯವನ್ನು ಮನವಂದರೆ, ಯಾರಲ್ಲಿಯೂ ಇಲ್ಲದ

ದೋಷಗಳು ತನ್ನಲ್ಲಿ ಇವೆಯೆಂದು ತನ್ನನ್ನು ತಾನು ತಿರಸ್ಕಾರದಿಂದ ಕಾಣುವ ಮೌಢ್ಯವು ಕರಗಿಹೋಗಬಹುದು.

ಧೈರ್ಯದಿಂದಲೂ ಆತ್ಮವಿಶ್ವಾಸದಿಂದಲೂ ತನಗೆ ತಾನು ಬಂಧು ಆಗ ಬಹುದು ; ಇದರ ವಿರುದ್ಧಭಾವನೆಯಿಂದ ತನಗೆ ತಾನು ಶತ್ರುವೂ ಆಗಬಹುದು. (ಗೀ. ೬–೫)

ನಿಯಮಶೀಲನೆಯಿಂದ ತನ್ನ ದೇಹೇಂದ್ರಿಯಗಳನ್ನೂ ಮನಸ್ಸನ್ನೂ ವಶ ದಲ್ಲಿಟ್ಟುಕೊಂಡಿರುವವನು ತನಗೆ ತಾನು ಬಂಧು ; ಜಿತೇಂದ್ರಿಯನೂ ಜಿತಮನ ಸ್ಕನೂ ಅಲ್ಲದವನು, ತನಗೇ ಅಪಾಯಕಾರಿಯಾಗುವದರಿಂದ ತನಗೆ ತಾನು ಶತ್ರು. (೬–೬)

ಮನೋವ್ಯಾಪಾರಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವವನ ಚಿತ್ತವು ಪ್ರಸ ನ್ನವೂ ಪ್ರಫುಲ್ಲಿತವೂ ನಿರ್ಮಲವೂ ಇರುವದರಿಂದ, ಇವನು ತನ್ನ ಅಂತರಾತ್ಮನೇ ಪರಮಾತ್ಮನೆಂದು ಕಂಡುಕೊಳ್ಳುತ್ತಾನೆ. ಇವನು, ಶೀತ–ಉಷ್ಣ, ಸುಖ–ದುಃಖ, ಮಾನ–ಅಪಮಾನ ಮೊದಲಾದ ದ್ವಂದ್ವಗಳಿಂದ ವಿಕಾರಹೊಂದುವದಿಲ್ಲ, ಇವು ಗಳನ್ನು ಹುಸಿತೋರಿಕೆಗಳೆಂಬ ನಿಶ್ಚಯಜ್ಞಾನದಿಂದ ಸಮಾಧಾನವಾಗಿ ಸಹಿಸಿ ಕೊಳ್ಳುತ್ತಾನೆ. (ಗೀ. ೬–೭)

ಶಾಸ್ತ್ರಜ್ಞಾನದಿಂದಲೂ ಅನುಭವಜ್ಞಾನದಿಂದಲೂ ಸಂತೃಪ್ತನಾಗಿ, ಇನ್ನೂ ಏನನ್ನೋ ಹೆಚ್ಚಿನದನ್ನು ತಿಳಿಯಬೇಕೆಂಬ ಚಾಪಲ್ಯವಿಲ್ಲದೆ, ನಿರ್ವಿಕಾರವಾದ ಸ್ಥಿರಚಿತ್ತದಿಂದ ಆನಂದವಾಗಿರುತ್ತಾನೆ. ಇವನೇ ಯೋಗಾರೂಢನೆನಿಸಿಕೊಳ್ಳು ತ್ತಾನೆ. ಕರ್ತೃತ್ವಭೋಕ್ತೃತ್ವ ಮಾಯಾಮೋಹವಿಲ್ಲದ ಪರಮಾರ್ಥದೃಷ್ಟಿಯುಳ್ಳ ಈ ಯೋಗಿಗೆ, ಮಣ್ಣೂ ಒಂದೇ, ಹೊನ್ನೂ ಒಂದೇ. (೬–೮)

ಈ ಜ್ಞಾನಸಿದ್ಧಿಯೇ ಪುರುಷಪ್ರಯತ್ನದ ಪರಮಾವಧಿ.

67. “ಉದ್ಧರೇದಾತ್ಮನಾತ್ಮಾನಂ” ಎಂದು ಭಗವಂತನೇ ಹೇಳಿರುವ ತನ್ನ ಮಾತಿಗೇ ವಿರುದ್ಧವಾಗಿಯೋ ಪೂರಕವಾಗಿಯೋ ಎನ್ನುವಂತೆ, ಆವನೇ –

ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರಸಾಗರಾತ್ ।
ಭವಾಮಿ ನ ಚಿರಾತ್ ಪಾರ್ಥ ಮಯ್ಯಾವೇಶಿತಚೇತಸಾಮ್ ॥

॥ ಗೀ. ೧೨–೭ ॥

ಹೇಳಿರುವದೇನೆಂದರೆ, ಯಾರು ನನ್ನಲ್ಲಿಯೇ ಪೂರ್ಣವಾಗಿ ಮನಸ್ಸನ್ನು ಸ್ಥಿರವಾಗಿ ನಿಲ್ಲಿಸುವರೋ ಅಂಥಾ ಭಕ್ತರನ್ನು ಮೃತ್ಯುರೂಪವಾದ ಸಂಸಾರಸಾಗರದಿಂದ ನಾನೇ ತಡವಿಲ್ಲದೆ ಸಮುದ್ಧಾರಮಾಡುವೆನು.

ಆದರೆ, ಅಂಥಾ ಭಕ್ತರ ಸಾಧನರೂಪವಾದ ಪುರುಷಪ್ರಯತ್ನವು ಹೇಗಿರಬೇಕೆಂದರೆ,

ಯೇ ತು ಸರ್ವಾಣಿ ಕರ್ಮಾಣಿ ಮಯಿ ಸಂನ್ಯಸ್ಯ ಮತ್ಪರಾಃ ।
ಅನನ್ಯೇನೈವ ಯೋಗೇನ ಮಾಂ ಧ್ಯಾಯಂತ ಉಪಾಸತೇ ॥ ೧೨-೬ ॥
ಮಯ್ಯೇವ ಮನ ಆಧತ್ಸ್ವ ಮಯಿ ಬುದ್ಧಿಂ ನಿವೇಶಯ ।
ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ೧೨-೮ ॥

(ಆದರೆ,) ಯಾರು ಲೌಕಿಕವೂ ವೈದಿಕವೂ ಆದ ಸರ್ವಕರ್ಮಗಳನ್ನೂ ವಿಶ್ವರೂಪ-ಪರಮಾತ್ಮನಾದ ನನ್ನಲ್ಲಿ ಭಕ್ತಿಭಾವದಿಂದ ಸಮರ್ಪಣೆಮಾಡಿ, ಸಂತತ ಚಿಂತನದಿಂದ ಉಪಾಸನೆಮಾಡುವರೋ ಅಂಥಾ ಅನನ್ಯಭಕ್ತರನ್ನು ನಾನೇ ತಡವಿಲ್ಲದೆ ಸಂಸಾರಸಾಗರದಿಂದ ಉದ್ಧಾರಮಾಡುವೆನು. (೧೨-೬)

ಇದಕ್ಕಾಗಿ, ಭಕ್ತರು ತಮ್ಮ ಸಂಕಲ್ಪ-ವಿಕಲ್ಪಾತ್ಮಕವಾದ ಮನಸ್ಸನ್ನೂ ವಿಚಾರಪೂರ್ವಕ ನಿಶ್ಚಯಾತ್ಮಕವಾದ ಬುದ್ಧಿಯನ್ನೂ ನನ್ನಲ್ಲಿಯೇ ಸ್ಥಿರಗೊಳಿಸಿಕೊಳ್ಳಬೇಕು. ಇಂಥವರು ದೇಹಪಾತಾನಂತರವೂ ನನ್ನ ಸ್ವರೂಪದಲ್ಲಿಯೇ ಸೇರಿಹೋಗುವರು. (೧೨-೮)

68. ಇನ್ನು ಗೀತೆಯ ಎರಡನೆಯ ಅಧ್ಯಾಯದಲ್ಲಿ ಬಂದಿರುವ ಸ್ಥಿತಪ್ರಜ್ಞನ ಲಕ್ಷಣಗಳೂ, ಆರನೆಯ ಅಧ್ಯಾಯದಲ್ಲಿ ಬಂದಿರುವ ಧ್ಯಾನಯೋಗವೂ ಹದಿಮೂರನೆಯ ಅಧ್ಯಾಯದಲ್ಲಿ ಬಂದಿರುವ ಅಮಾನಿತ್ವಾದಿ ಸಾಧನೆಗಳೂ ಹನ್ನೆರಡನೆಯ ಅಧ್ಯಾಯದಲ್ಲಿ ಹೇಳಿರುವ "ಅದ್ವೇಷ್ಟಾ ಸರ್ವಭೂತಾನಾಂ" ಮೊದಲಾದ ಅಭ್ಯಾಸಗಳೂ ನಮ್ಮ ಮುಖ್ಯ ವಿಷಯವಾದ ಪೌರುಷಪ್ರಯತ್ನಕ್ಕೆ ಸಂಬಂಧಪಟ್ಟಿವೆ.

69. ಗೀತೆಯಲ್ಲಿ ಪ್ರಾರಬ್ಧದ ವಿಷಯವೂ ಅಲ್ಲಲ್ಲಿ ಸೂಚಿತವಾಗಿದೆ. ಈ ಸಂಬಂಧವಾಗಿ ಅರ್ಜುನನು ಮಾಡಿದ ಪ್ರಶ್ನೆಯು ಆರನೆಯ ಅಧ್ಯಾಯದಲ್ಲಿ ಬಂದಿದೆ: ಅರ್ಜುನನ ಪ್ರಶ್ನೆ :

ಯೋಗಸಾಧನೆಯನ್ನು ಮಾಡುತ್ತಿರುವವನಿಗೆ ಯೋಗವು ಪೂರ್ಣವಾಗಿ ಸಿದ್ಧಿಸುವದರ ಒಳಗೇ ಮರಣವು ಬಂದರೆ, ಅಥವಾ ಯೋಗಮಾರ್ಗದಲ್ಲಿ ಅವನಿಗೆ

ಶ್ರದ್ಧೆ ಇದ್ದರೂ ಅವನು ಸರಿಯಾಗಿ ಸಾಧನೆಯನ್ನು ಮಾಡದೆ, ಸಾಧನೆಯ ಫಲವಾದ ಸಮ್ಯಗ್ದರ್ಶನವನ್ನು ಪಡೆಯದೆ, ಸತ್ತರೆ ಅವನ ಗತಿಯೇನು ? ಅವನು ಕರ್ಮಸಂನ್ಯಾಸವನ್ನು ಮಾಡಿರುವದರಿಂದ ಕರ್ಮದ ಫಲವೂ ಇಲ್ಲದೆ, ಯೋಗ ಸಿದ್ಧಿ ಇಲ್ಲದೆ, ಜ್ಞಾನಪ್ರಾಪ್ತಿಯೂ ಆಗದಿರುವದರಿಂದ, ಅವನಿಗೆ ಯಾವ ಗತಿ ಯಾಗುವದು ? (೬-೩೭, ೩೮)

ಅರ್ಜುನನ ಈ ಪ್ರಶ್ನೆಗೆ ಶ್ರೀಕೃಷ್ಣನ ಉತ್ತರವೇನೆಂದರೆ,

ಅಂಥಾ ಯೋಗಿಗೆ ಯೋಗಾಭ್ಯಾಸದಿಂದ ದೊರಕಬೇಕಾದ ಸಾತ್ತ್ವಿಕ ಸುಖವು ಇಲ್ಲಿ ಬದುಕಿರುವಾಗ ದೊರಕಿದೆ, ಆ ಪುಣ್ಯದ ಫಲವಾಗಿ, ಮರಣಾನಂತರ ಉತ್ತಮಲೋಕಗಳ ಪ್ರಾಪ್ತಿಯಾಗುತ್ತದೆ. ಆ ಪುಣ್ಯವೂ ತೀರಿದ ಅನಂತರ, ಅವನು ತನುಮನಗಳಲ್ಲಿ ಶುಚಿಯಾಗಿರುವ ಶ್ರೀಮಂತರ ವಂಶದಲ್ಲಿ ಹುಟ್ಟಿ ಭೋಗಸುಖವನ್ನು ಅನುಭವಿಸುವನು. ಅಥವಾ ಅವನಿಗೆ ವಿವೇಕವೈರಾಗ್ಯಗಳಿಂದ ಕೂಡಿದ ಯೋಗಾಭ್ಯಾಸದ ಸಂಸ್ಕಾರವೇ ಬಲವಾಗಿದ್ದರೆ, ಅವನು ಒಳ್ಳೆಯ ವಿವೇಕಿಗಳಾದ ಯೋಗಿಗಳ ವಂಶದಲ್ಲಿಯೇ ಜನಿಸಿ, ತನ್ನ ಯೋಗಾಭ್ಯಾಸವನ್ನು ಮುಂದುವರಿಸುತ್ತಾನೆ. ಶ್ರೀಮಂತರ ಮನೆಯಲ್ಲಿ ಜನ್ಮ ತಾಳುವದಕ್ಕಿಂತಲೂ ಬಡಯೋಗಿಗಳ ಮನೆಯಲ್ಲಿ ಹುಟ್ಟುವದಕ್ಕೆ ಹೆಚ್ಚು ಪುಣ್ಯಮಾಡಿರಬೇಕು ; ಇದೇ ಹೆಚ್ಚು ದುರ್ಲಭ, ಮತ್ತು ಶ್ರೇಷ್ಠವೂ ಆಗಿದೆ.

ತತ್ರ ತಂ ಬುದ್ಧಿಸಂಯೋಗಂ ಲಭತೇ ಪೌರ್ವದೇಹಿಕಮ್ ।
ಯತತೇ ಚ ತತೋ ಭೂಯಃ ಸಂಸಿದ್ಧೌ ಕುರುನನ್ದನ ॥ ೬-೪೩ ॥

ಪೂರ್ವಾಭ್ಯಾಸೇನ ತೇನೈವ ಹ್ರಿಯತೇ ಹ್ಯವಶೋಽಪಿ ಸಃ ।
ಜಿಜ್ಞಾಸುರಪಿ ಯೋಗಸ್ಯ ಶಬ್ದಬ್ರಹ್ಮಾತಿವರ್ತತೇ ॥ ೬-೪೪ ॥

ಪ್ರಯತ್ನಾದ್ಯತಮಾನಸ್ತು ಯೋಗೀ ಸಂಶುದ್ಧಕಿಲ್ಬಿಷಃ ।
ಅನೇಕಜನ್ಮಸಂಸಿದ್ಧಸ್ತತೋ ಯಾತಿ ಪರಾಂ ಗತಿಮ್ ॥ ೪೫ ॥

ಎಲೈ ಅರ್ಜುನ ! ಆ ಯೋಗಿಗಳ ವಂಶದಲ್ಲಿ ಜನಿಸಿದ ಆ ಯೋಗಿಯು ತನ್ನ ಹಿಂದಿನ ಜನ್ಮಗಳಲ್ಲಿ ನಡೆಸಿದ್ದ ಅಭ್ಯಾಸದ ಸಂಸ್ಕಾರಬಲದಿಂದ ಪ್ರೇರಿತ ನಾಗಿ, ಈ ಜನ್ಮದಲ್ಲಿ ಆ ಯೋಗಸಿದ್ಧಿಗಾಗಿ ಹೆಚ್ಚಿನ ಪ್ರಯತ್ನವನ್ನು ಮಾಡು ತ್ತಾನೆ. (೪೩)

ವರ್ತಮಾನಜನ್ಮದಲ್ಲಿ ಅವನು ಮನಃಪೂರ್ವಕ ಇಚ್ಛಿಸದಿದ್ದರೂ ಅಥವಾ ಬೇಡಬೇಡವೆಂದರೂ ಅವನ ಹಿಂದಿನ ಜನ್ಮಗಳ ಯೋಗಾಭ್ಯಾಸದ ಗೂಢವಾದ

ಸಂಸ್ಕಾರವೇ ಪ್ರಬಲವಾಗಿ ಪ್ರೇರಿಸಿ, ಯೋಗಸಿದ್ಧಿಗಾಗಿ ಹೆಚ್ಚುಹೆಚ್ಚು ಪ್ರಯತ್ನ ಮಾಡುವಂತೆ ಒತ್ತಾಯಪಡಿಸುತ್ತದೆ.

ಹೀಗೆ ಹಿಂದಿನ ಜನ್ಮಗಳಲ್ಲಿ ಒಬ್ಬ ಜೀವನು ನಡೆಸಿರುವ ಧರ್ಮಾಧರ್ಮಗಳ ಸಂಸ್ಕಾರದ ಪ್ರಬಲವಾದ ಗೂಢಶಕ್ತಿಯೇ ಅವನ ಪ್ರಾರಬ್ಧ ಅಥವಾ ವಿಧಿ ಅಥವಾ ದೈವ ಎನಿಸುತ್ತದೆ. ಈ ಗಾಢಶಕ್ತಿಯು ಬಹಳ ಮಟ್ಟಿಗೆ ಅದಮ್ಯವಾದುದು. ಇಹ ಜನ್ಮದ ವ್ಯಾಪಾರಕ್ಕೆ–ವ್ಯವಹಾರಕ್ಕೆ–ಅದೇ ಅವನ ಬಂಡವಾಳ.

(ಯೋಗವಿಚಾರವನ್ನು ತಿಳಿಯಬೇಕೆಂಬ ಕುತೂಹಲವುಳ್ಳವನು ಸಹ ಶಬ್ದ ಬ್ರಹ್ಮವನ್ನು ಮೀರುತ್ತಾನೆ.) (೪೪)

ಒಂದು ಜನ್ಮದಲ್ಲಿಯೂ ಬಿಡದೆ, ಅನೇಕ ಜನ್ಮಗಳಲ್ಲಿ ಪಟ್ಟು ಹಿಡಿದಂತೆ ಛಲದಿಂದ ಸತತವಾಗಿ ಯೋಗಾಭ್ಯಾಸಮಾಡಿದ ಫಲವಾಗಿ ಪುಣ್ಯ–ಪಾಪಗಳ ರೂಪವಾದ ದೋಷವನ್ನೆಲ್ಲಾ ಕಳೆದುಕೊಂಡು ಆತ್ಮಸ್ವರೂಪದ ಸಮ್ಯಗ್ದರ್ಶನ ವನ್ನು ಪಡೆದು ಪರಮಗತಿಯಾದ ಜೀವನ್ಮುಕ್ತಿಯನ್ನೇ ಹೊಂದುತ್ತಾನೆ. (೬–೪೫).

ಹೀಗೆ, ಪ್ರಚಂಡವೂ ಗೂಢವೂ ಆದ ಪ್ರಾರಬ್ಧ ಮತ್ತು ಪ್ರತ್ಯಕ್ಷವಾದ ಪೌರುಷ– ಈ ಎರಡು ಶಕ್ತಿಗಳ ಸಂಘರ್ಷ–ಸಂಕಲನವೇ ನಮ್ಮ ಜೀವನ ಯಾತ್ರೆಯ ವಿಲಾಸವಿಭ್ರಮಗಳಾಗಿವೆ.

70. ಇಡಿಯ ಗೀತಾಶಾಸ್ತ್ರದಲ್ಲಿ ಹೇಳಿರುವ ಶ್ರೀಕೃಷ್ಣಪರಮಾತ್ಮನ ಉಪದೇಶ ಸರ್ವಸ್ವದ ಸಾರಸಂಗ್ರಹ ಎಂಬಂತೆ ಅವನ ಕೊನೆಯ ಮಾತು ಹೀಗಿದೆ :

ಸರ್ವಗುಹ್ಯತಮಂ ಭೂಯಃ ಶೃಣು ಮೇ ಪರಮಂ ವಚಃ ।
ಇಷ್ಟೋಽಸಿ ಮೇ ದೃಢಮಿತಿ ತತೋ ವಕ್ಷ್ಯಾಮಿ ತೇ ಹಿತಮ್
॥ ೧೮–೬೪ ॥

ಮನ್ಮನಾ ಭವ ಮದ್ಭಕ್ತೋ ಮದ್ಯಾಜೀ ಮಾಂ ನಮಸ್ಕುರು ।
ಮಾಮೇವೈಷ್ಯಸಿ ಸತ್ಯಂ ತೇ ಪ್ರತಿಜಾನೇ ಪ್ರಿಯೋಽಸಿ ಮೇ ॥೧೮–೬೫॥

ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ।
ಅಹಂ ತ್ವಾ ಸರ್ವಪಾಪೇಭ್ಯೋ ಮೋಕ್ಷಯಿಷ್ಯಾಮಿ ಮಾ ಶುಚಃ
॥ ೧೮–೬೬ ॥

ಅರ್ಜುನ! ನಿನಗೆ ಇದುವರೆಗೆ ಅನೇಕ ರಹಸ್ಯಗಳನ್ನು ಹೇಳಿರುವೆನಾದರೂ ಈಗ ಆ ಎಲ್ಲಾ ರಹಸ್ಯಗಳಿಗಿಂತಲೂ ಹೆಚ್ಚಿನ ರಹಸ್ಯವಾದ ಪರಮರಹಸ್ಯವನ್ನು

ಹೇಳುವೆನು ಕೇಳು. ನೀನು ನನಗೆ ಅತ್ಯಂತ ಪ್ರಿಯಮಿತ್ರನಾದುದರಿಂದ ನಿನಗೆ ಅದನ್ನು ಹೇಳುವೆನು. (೧೮-೬೪)

ಸರ್ವಾತ್ಮವಾಸುದೇವರೂಪನಾದ ನನ್ನಲ್ಲಿಯೇ, ಅರ್ಜುನ! ನಿನ್ನ ಮನಸ್ಸನ್ನಿಡು ;ನಿನ್ನ ಭಕ್ತಿಯನ್ನೆಲ್ಲಾ ನನ್ನಲ್ಲಿಯೇ ಇಡು ; ನನ್ನನ್ನೇ ಪೂಜಿಸಿ-ನಮಸ್ಕರಿಸು, ಹೀಗೆ ಎಲ್ಲಾ ಬಗೆಯ ಭಾವನೆಗಳಿಗೂ ಪ್ರೇಮಸಾಧನೆಗಳಿಗೂ ಸರ್ವರ ಆತ್ಮನಾದ ನನ್ನನ್ನೇ ಗುರಿಯಾಗಿ ಇಟ್ಟುಕೊಳ್ಳುವದರಿಂದ ಸ್ವಾಭಾವಿಕವಾದ ಸಾರ್ವತ್ರಿಕಪ್ರಕೃತಿನಿಯಮದಂತೆ ನೀನು ನನ್ನನ್ನೇ ಸೇರುವೆ ; ಇದು ಸತ್ಯ, ನಾನು ಪ್ರತಿಜ್ಞೆಮಾಡಿ ನಿನಗೆ ಹೇಳುತ್ತೇನೆ. (೧೮-೬೫)

ಎಲ್ಲಾ ಬಗೆಯ ಧರ್ಮಾಧರ್ಮಗಳ, ಪುಣ್ಯ-ಪಾಪಗಳ ಭ್ರಮೆಯನ್ನೂ ಬಿಟ್ಟು ನಿನ್ನ ಅಂತಃಕರಣಸರ್ವಸ್ವವನ್ನೂ ಸರ್ವಾತ್ಮನಾದ ನನ್ನಲ್ಲಿಯೇ ಸಂಪೂರ್ಣವಾಗಿ ಸಮರ್ಪಿಸು, ಲಯಗೊಳಿಸು. ಹೀಗೆ ಆತ್ಯಂತಿಕ ಸಮರ್ಪಣೆಯಾದರೆ, ಆಗ ನಿನ್ನಲ್ಲಿ "ನಾನು" ಎನ್ನುವ ಅಹಂಕಾರ ಲೇಶವೂ ಉಳಿಯುವದಿಲ್ಲ. ಅರ್ಜುನ! ಅನಂತರ ನಿನ್ನಲ್ಲಿ ಉಳಿಯುವದು ಪರಮಾತ್ಮನಾದ ನಾನು ಮಾತ್ರ. ಮುಂದಿನ ನಿನ್ನ ಜೀವನದ ವ್ಯವಹಾರದಲ್ಲಿ ನೀನು ಅನಿವಾರ್ಯವಾಗಿ ಉಪಯೋಗಿಸಬಹುದಾದ "ನಾನು" ಎನ್ನುವ ಮಾತಿಗೆ "ಪರಮಾತ್ಮ" ಎಂದೇ ಅರ್ಥ.

ಸಂಜೆಗತ್ತಲೆಯ ಮಂದಪ್ರಕಾಶದಲ್ಲಿ ತೋರಿ, ಭಯಕ್ಕೆ ಕಾರಣವಾದ ಹಾವಿನ ನಿಜರೂಪವು ಹಗ್ಗವೆಂದು ಪೂರ್ಣ ಪ್ರಕಾಶದಲ್ಲಿ ಕಣ್ಣಾರೆ ಕಂಡು (ಪ್ರತ್ಯಕ್ಷಪ್ರಮಾಣದಿಂದ) ನಿಶ್ಚಯವಾದ ಮೇಲೆ, ಹಾವಿನ ಭ್ರಮೆಯು ಎಷ್ಟು ಮಾತ್ರವೂ ತಲೆಯೆತ್ತಲಾರದಷ್ಟೆ !

ಈ ದೃಷ್ಟಾಂತದಲ್ಲಿರುವ ಸಂಜೆಗತ್ತಲೆಯ ಮಬ್ಬೇ ಆತ್ಮಸ್ವರೂಪವನ್ನು ಅರಿಯದಿರುವ ಅಜ್ಞಾನ. ಈ ಅಜ್ಞಾನದಿಂದ ಆತ್ಮನೇ ಅಹಂಕಾರವಾಗಿ ತೋರಿಕೊಳ್ಳುತ್ತಾನೆ. ಅಹಂಕಾರವೆಂದರೆ, ದೇಹೇಂದ್ರಿಯಮನೋಬುದ್ಧಿಗಳೇ ತಾನೆಂಬ ಅಭಿಮಾನ. ಶಾಸ್ತ್ರ ಮತ್ತು ಸದ್ಗುರುಗಳ ಉಪದೇಶದ ಉಜ್ಜ್ವಲವಾದ ಪ್ರಕಾಶದಲ್ಲಿ ಅಹಂಕಾರದ (ಹಾವಿನ) ನಿಜರೂಪವು ನಿಜಾತ್ಮನೆಂದೇ (ಹಗ್ಗವೆಂದೇ) ವಿವೇಕಬಲದಿಂದ ನಿಶ್ಚಯವಾಗುತ್ತದೆ.

ಬೇಸಿಗೆಯ ಮಟಮಟ ಮಧ್ಯಾಹ್ನದ ಬಿರುಬಿಸಿಲಿನಿಂದ ದೂರವಿರುವ ಮರಳಿನ ಬಯಲಿನಲ್ಲಿ ನೀರಿನ ತೆರೆನೊರೆಗಳ ಕೆರೆಯು ಇರುವಂತೆ ತೋರುತ್ತದೆ. ಈ ತೋರಿಕೆಗೇ ಶಾಸ್ತ್ರದಲ್ಲಿ ಬಿಸಿಲ್‌ಕುದುರೆ, (ಬಿಸಿಲ್‌ತೊರೆ-ಬಿಸಿಲ್‌ದೊರೆ) ಮರುಮರೀಚಿಕೆ (ಮರೀಚಿಕೆ) ಮೃಗಜಲ-ಎಂಬ ಹೆಸರುಗಳಿವೆ. ಆ ಸ್ಥಳಕ್ಕೇ ಹೋಗಿ ಪರೀಕ್ಷೆಮಾಡಿದಾಗ, ಆ ದೃಶ್ಯವು ನಿಜವಲ್ಲವೆಂದೂ ಬರಿ ಹುಸಿತೋರಿಕೆ

[illegible] ನಿಶ್ಚಯವಾಗುತ್ತದೆ. ಆದರೆ, ಆ ಬಯಲು ವಿಶಾಲವಾಗಿದ್ದರೆ, ಮುಂದೆ ಇನ್ನಷ್ಟು ದೂರದಲ್ಲಿ ಹಾಗೆಯೇ ತೆರೆನೊರೆಗಳು ತೋರುತ್ತಿರಬಹುದು. ಅಲ್ಲಿರುವ ನಿಜವಾದ ಬಿಸಿಲಿನ ತೇಜಸ್ಸೇ ಜಲತರಂಗಗಳಂತೆ ಹೊಳೆಯುತ್ತದೆ. ಸ್ವಂತ ಪರೀಕ್ಷೆಯ ಫಲವಾದ ಅನುಭವದಿಂದ ಹೀಗೆ ಸತ್ಯದ ನಿಶ್ಚಯವಾದ ಮೇಲೂ ದೂರದಿಂದ ಆ ಮೃಗಜಲವು ತೋರುತ್ತಲೇ ಇರುತ್ತದೆ. ಈ ದೃಷ್ಟಾಂತದಲ್ಲಿರುವ ವಿಶೇಷಸ್ವಾರಸ್ಯವೇನೆಂದರೆ, ಪರೀಕ್ಷಾಪೂರ್ವದಲ್ಲಿಯೂ ಪರೀಕ್ಷೆಯ ಅನಂತರವೂ ಹುಸಿತೋರಿಕೆಯು ಒಂದೇಬಗೆಯಾಗಿದ್ದರೂ ಪರೀಕ್ಷಕನ ಬುದ್ಧಿಯ ತಿಳಿವಳಿಕೆಯಲ್ಲಿ ತೀರ ವ್ಯತ್ಯಾಸವಾಗಿದೆ. ಪರೀಕ್ಷೆಗೆ ಮೊದಲು, ದೂರದಲ್ಲಿ ತೋರುವ ನೀರೇ ನಿಜವೆಂಬ ಭ್ರಮೆ ಇತ್ತು ; ಇದರಿಂದ ನೀರಡಿಕೆಯನ್ನು ಕಳೆದುಕೊಳ್ಳಲು ಅಲ್ಲಿಗೆ ಹೋಗಿ ನೀರನ್ನು ಕುಡಿಯಬೇಕೆಂಬ ಪ್ರಯತ್ನದ ಶ್ರಮವಿತ್ತು. ಪರೀಕ್ಷೆಯ ಅನಂತರ. ನಿಜವಾಗಿರುವ ಬಿಸಿಲಿನ ಪ್ರಕಾಶವೇ ದೂರಕ್ಕೆ ನೀರಿನಂತೆ ತೋರುವದೆಂಬ ನಿಶ್ಚಯದಿಂದ ಹಿಂದಿನ ಭ್ರಮೆಯೂ ಶ್ರಮವೂ ತಪ್ಪಿದವು. ಇದಕ್ಕಾಗಿ ಮೃಗಜಲವು ತೋರದಂತೆ ಮಾಡಬೇಕಾಗಿಲ್ಲ; ಹಾಗೆ ಮಾಡುವದೂ ಸಾಧ್ಯವಲ್ಲ ; ಆದರೆ, ಸತ್ಯವಸ್ತುವಿನ ಜ್ಞಾನದಿಂದ, ಆ ಸತ್ಯಕ್ಕೆ ವಿಲಕ್ಷಣವಾದ ದೃಶ್ಯವು ಕೇವಲ ಮಿಥ್ಯೆ, ಮಾಯೆ– ಎಂಬ ನಿಶ್ಚಯವಾದರೆ ಸಾಕು. ನಿಶ್ಚಯಾನಂತರವೂ (ಆಕರ್ಷಕವಾದ) ಹುಸಿಯೇ ತೋರುತ್ತಿದ್ದರೂ ಬಾಧಕವಿಲ್ಲ.

ಈ ದೃಷ್ಟಾಂತದಲ್ಲಿರುವ ಆಧ್ಯಾತ್ಮಿಕರಹಸ್ಯವನ್ನು ಅರ್ಥಮಾಡಿಕೊಳ್ಳಬೇಕು. ಇದೇನೆಂದರೆ, ಬಿಸಿಲಿನ ಬೆಳಕೇ ಸ್ವಯಂಪ್ರಕಾಶನಾದ ಪ್ರತ್ಯಗಾತ್ಮ ಅಥವಾ ಪರಮಾತ್ಮ. ಹುಸಿತೋರಿಕೆಯು ಬಿಸಿಲ್ಕುದುರೆಯೇ ಅಹಂಕಾರ. ವಿವೇಕ–ವೈರಾಗ್ಯಗಳುಳ್ಳ ಜಿಜ್ಞಾಸುವಿಗೆ ಸದ್ಗುರೂಪದೇಶದ ಶ್ರವಣ–ಮನನಾದಿಗಳಿಂದ ಸತ್ಯಜ್ಞಾನಾನಂದ–ಆತ್ಮನ ಅನುಭವ ಆದಮೇಲೂ ಜೀವವಿರುವವರೆಗೆ ಅವನ ವ್ಯವಹಾರದಲ್ಲಿ ಮಿಥ್ಯೆಯಾದ ಅಹಂಕಾರವೂ ತೋರುತ್ತಿದ್ದರೂ ಅದರಿಂದ ಅವನಿಗೆ ಬಾಧಕವಿಲ್ಲ. ಅಹಂಕಾರವು ವ್ಯವಹಾರದಲ್ಲಿ ತೋರದಂತೆ ಮಾಡಬೇಕಾಗಿಯೂ ಇಲ್ಲ ; ಹಾಗೆ ಮಾಡುವದೂ ಸಾಧ್ಯವಲ್ಲ.

ಈ ವಿವೇಚನೆಯೆಲ್ಲಾ ವಸ್ತುತಂತ್ರಜ್ಞಾನವೇ ಹೊರತು ಕರ್ತೃತಂತ್ರವಾದ ಭಾವನೆಯಲ್ಲ. "............ಮಾಮೇಕಂ ಶರಣಂ ವ್ರಜ।" (ಗೀ) ಎಂಬ ಭಗವದುಕ್ತಿಯಲ್ಲಿರುವದು ಭಾವನೆಯಲ್ಲ ; (ಆತ್ಮ) ವಸ್ತುನಿಷ್ಠವಾದ, ವಸ್ತು-ಪ್ರಧಾನವಾದ ಜ್ಞಾನ. ಏಕೆಂದರೆ, ಶಂಕರಭಾಷ್ಯದಲ್ಲಿ : **"ಮಾಮ್ ಏಕಂ ಸರ್ವಾತ್ಮಾನಂ ಸಮಂ ಸರ್ವಭೂತಸ್ಥಮ್ ಈಶ್ವರಮ್ ಅಚ್ಯುತಂ ಗರ್ಭಜನ್ಮಜರಾಮರಣವರ್ಜಿತಮ್ ಅಹಮೇವ ಇತ್ಯೇವಂ ಶರಣಂ**

ವ್ರಜ। ನ ಮತ್ತೋಽನ್ಯದಸ್ತಿ ಇತ್ಯವಧಾರಯ ಇತ್ಯರ್ಥಃ।..........
(ಗೀ: ೧೮-೬೬)

ಅರ್ಜುನ! ನಾನೇ ಸರ್ವರ ಆತ್ಮನು; ನಾನೇ ಜಗದೀಶ್ವರನೂ ಆದ್ದರಿಂದ ಸರ್ವಜ್ಞನೂ ಸರ್ವಶಕ್ತನೂ ನಾಶರಹಿತನೂ ಜನ್ಮರಹಿತನೂ ಜರಾರಹಿತನೂ ಆಗಿದ್ದೇನೆ. ಚಿನ್ಮಾತ್ರಸ್ವರೂಪನಾದ ನಾನು ಸೃಷ್ಟಿಕರ್ತಬ್ರಹ್ಮನಲ್ಲಿಯೂ ಸಣ್ಣ ಇರುವೆಯಲ್ಲಿಯೂ ನಿರ್ಜೀವಪದಾರ್ಥದಲ್ಲಿಯೂ ಹೆಚ್ಚುಕಡಿಮೆ ಇಲ್ಲದೆ ಸಮನಾಗಿ ಇದ್ದೇನೆ. ಇಂಥಾ ನಾನೇ ನಿನ್ನ ನಿಜಸ್ವರೂಪವಾಗಿದ್ದೇನೆ. ಆದ್ದರಿಂದ ನೀನು 'ಸರ್ವಾತ್ಮನಾದ ಪರಮಾತ್ಮನೇ ನಾನು' ಎಂಬ ಶಾಸ್ತ್ರಾಚಾರ್ಯರ ಉಪದೇಶದಿಂದ ನಿಜವನ್ನರಿತು, ಬುದ್ಧಿಯಲ್ಲಿ ನಿಶ್ಚಯಿಸಿಕೊಳ್ಳುವದೇ 'ಭಗವಂತನಾದ ನನ್ನೊಬ್ಬನಿಗೇ ಶರಣುಹೋಗು' ಎಂಬಿದರ ಅರ್ಥ. ಪುಸ್ತಕವನ್ನು ಸರಸ್ವತಿ ಎಂದು ಭಾವಿಸಿದಂತೆ ಇದು ಭಾವನೆಯಲ್ಲ. ಪುಸ್ತಕವನ್ನು ಪುಸ್ತಕವೆಂದೇ ಅರಿತಂತೆ, ಇದು ವಸ್ತುತಂತ್ರಜ್ಞಾನ, ಯಥಾರ್ಥಜ್ಞಾನ, ಸಮ್ಯಗ್ಜ್ಞಾನ. "ಸಚ್ಚಿದಾನಂದಸ್ವರೂಪನಾದ ನನ್ನ ಹೊರತು ಬೇರೆ ಯಾವದೊಂದು ವಸ್ತುವೂ ಸತ್ಯವಲ್ಲ–ಇಲ್ಲವೇ ಇಲ್ಲ–" ಎಂದು ನೀನು ನಿಶ್ಚಯಿಸಿಕೊ. ಈ ಜ್ಞಾನನಿಷ್ಠೆಗೆ ವಿವೇಕಪೂರ್ವಕವಾದ ಸರ್ವಕರ್ಮಸಂನ್ಯಾಸವೇ ಸಾಧನ. ಇದೇ (ಈ ಜೀವನ್ಮುಕ್ತಿಯೇ) ಸರ್ವೋತ್ತಮಪುರುಷಪ್ರಯತ್ನದ ಪರಮಾವಧಿಯ ಸಾರ್ಥಕತೆ.

ತ್ಯಜ ಧರ್ಮಮಧರ್ಮಂ ಚ ಉಭೇ ಸತ್ಯಾನೃತೇ ತ್ಯಜ।
ಉಭೇ ಸತ್ಯಾನೃತೇ ತ್ಯಕ್ತ್ವಾ ಯೇನ ತ್ಯಜಸಿ ತತ್ತ್ಯಜ॥
(ಭಾರತ: ಮೋ.ಧ- ೩೨೯-೪೦)

71. ಅಧರ್ಮವನ್ನು ಬಿಡು; ಧರ್ಮದ ಭ್ರಮೆಯನ್ನೂ ಬಿಡು; ವ್ಯಾವಹಾರಿಕದೃಷ್ಟಿಯ ಅಸತ್ಯವನ್ನು ಬಿಡು; ಆ ಸತ್ಯದ ಭ್ರಮೆಯನ್ನೂ ಬಿಡು. ಈ ಪ್ರಕಾರವಾದ ಅನೇಕ ದ್ವಂದ್ವಗಳಲ್ಲಿರುವ ಸತ್ಯತಾಭ್ರಮೆಯನ್ನು ಬಿಡಬೇಕಲ್ಲದೆ, ಬಿಡುವದಕ್ಕಾಗಲಿ, ಹಿಡಿಯುವದಕ್ಕಾಗಲಿ ಕಾರಣವಾದ ಜ್ಞಾತೃವೂ ಪ್ರಮಾತೃವೂ ಕರ್ತೃವೂ ಭೋಕ್ತೃವೂ ಆದ ಅಹಂಕಾರವಾದರೂ ಸತ್ಯವೆಂಬ ಭ್ರಮೆಯನ್ನು ಬಿಡು. ಬ್ರಹ್ಮಾದಿಪಿಪೀಲಿಕಾಂತವಾದ ಸರ್ವಜೀವರ ಅಹಂಕಾರಗಳನ್ನೂ ಬೆಳಗುವ ಸಾಕ್ಷಿಚೈತನ್ಯವಾದ ಪ್ರತ್ಯಗಾತ್ಮ (ಪರಮಾತ್ಮ) ಒಂದೇ ಪರಮಾರ್ಥಸತ್ಯವೆಂದು ತಿಳಿ. ಹೀಗೆ ಶುಕಮಹರ್ಷಿಗಳು ಜನಕರಾಜನಿಗೆ ಉಪದೇಶಮಾಡಿದರು.

............ಇದಂ ತು ಪಾರಮಾರ್ಥಿಕಂ ಕೂಟಸ್ಥನಿತ್ಯಮ್ ವ್ಯೋಮವತ್ ಸರ್ವವ್ಯಾಪಿಸರ್ವವಿಕ್ರಿಯಾರಹಿತಮ್..ಸ್ವಯಂಜ್ಯೋತಿಃಸ್ವಭಾವಮ್।

ಯತ್ರ ಧರ್ಮಾಧರ್ಮೌ ಸಹ ಕಾರ್ಯೇಣ ಕಾಲತ್ರಯಂ ಚ ನೋಪಾವರ್ತೇತೇ । ತದೇತತ್ ಅಶರೀರತ್ವಂ ಮೋಕ್ಷಾಖ್ಯಮ್ । 'ಅನ್ಯತ್ರ ಧರ್ಮಾದನ್ಯತ್ರಾಧರ್ಮಾತ್........' (ಕ. ಉ : ೨-೧-೧೪)

72. ಆದರೆ, ಸ್ವಾಭಾವಿಕವಾದ ಈ ಅಶರೀರತ್ವವಾದರೋ ಪರಮಾರ್ಥಸತ್ಯವಾಗಿರುವದು. ನಿಜಾತ್ಮನು ಶರೀರೇಂದ್ರಿಯಾದಿ ಉಪಾಧಿಗಳಿಲ್ಲದವನು. ಕೂಟಸ್ಥನಿತ್ಯನು, ಆಕಾಶದಂತೆ ಸರ್ವವ್ಯಾಪಿ, ನಿರ್ವಿಕಾರನು........... ತಾನೇ ಬೆಳಗುವ ಸ್ವಭಾವವುಳ್ಳವನು. ಈ ಆತ್ಮಸ್ವರೂಪದಲ್ಲಿ **ಧರ್ಮಾಧರ್ಮಗಳು** ತಮ್ಮ ಕಾರ್ಯವಾದ ಉಚ್ಚನೀಚಗತಿಗಳೊಡನೆ ಕಾಲತ್ರಯದಲ್ಲಿಯೂ ಇರುವದಿಲ್ಲ. ಆ ಇದೇ ಮೋಕ್ಷವೆಂಬ ಹೆಸರಿನ ಅಶರೀರತ್ವವು. "ಧರ್ಮಕ್ಕಿಂತ ಬೇರೆಯಾಗಿ ಅಧರ್ಮಕ್ಕಿಂತ ಬೇರೆಯಾಗಿ, ಈ ಕೃತಾಕೃತಕ್ಕಿಂತಲೂ ಬೇರೆಯಾಗಿ, ಹಿಂದಿನ ಕಾಲದಲ್ಲಿದ್ದದ್ದಕ್ಕಿಂತಲೂ ಮುಂದಿನಕಾಲದಲ್ಲಿರುವದಕ್ಕಿಂತಲೂ ಬೇರೆಯಾಗಿರುವ ಯಾವ ತತ್ತ್ವವನ್ನು ಬಲ್ಲೆಯೋ ಅದನ್ನು ಹೇಳು. (ಕ. ೨-೧-೧೪) ಎಂಬುದೇ ಮುಂತಾದ ಶ್ರುತಿಗಳಿಂದ ಇದು ಸಿದ್ಧವಾಗುತ್ತದೆ. (ಸೂ.ಭಾ : ೧-೧-೪)

...........ನ ಹಿ ಅಹಂಪ್ರತ್ಯಯವಿಷಯಕರ್ತೃವ್ಯತಿರೇಕೇಣ ತತ್ಸಾಕ್ಷೀ ಸರ್ವಭೂತಸ್ಥಃ, ಸಮಃ, ಏಕಃ, ಕೂಟಸ್ಥನಿತ್ಯಃ ಪುರುಷಃ ವಿಧಿಕಾಂಡೇ ತರ್ಕಸಮಯೇ ವಾ ಕೇನಚಿತ್ ಅಧಿಗತಃ ಸರ್ವಸ್ಯ ಆತ್ಮಾ।.... ವಿಕ್ರಿಯಾಹೇತ್ವಭಾವಾಚ್ಚ ಕೂಟಸ್ಥನಿತ್ಯಃ । ಅತ ಏವ ನಿತ್ಯಶುದ್ಧಬುದ್ಧಮುಕ್ತಸ್ವಭಾವಃ । ತಸ್ಮಾತ್ "ಪುರುಷಾನ್ನ ಪರಂ ಕಿಂಚಿತ್ ಸಾ ಕಾಷ್ಠಾ ಸಾ ಪರಾಗತಿಃ" (ಕ: ೧-೩-೧೧) "ತಂ ತ್ವೌಪನಿಷದಂ ಪುರುಷಂ ಪೃಚ್ಛಾಮಿ" (ಬೃ : ೩-೯-೨೬) (ಸೂ.ಭಾ : ೧-೧-೪ ಪು ೭೭).

73. ....ಅಹಂಪ್ರತ್ಯಯಕ್ಕೆ (ನಾನು-ಎಂಬ ಭಾವನೆಗೆ) ವಿಷಯನಾಗಿರುವ (ಪ್ರಮಾತೃ, ಜ್ಞಾತೃ) ಕರ್ತೃ (ಭೋಕ್ತೃ) ವಿಗಿಂತಲೂ ಬೇರೆಯಾಗಿರುವನಾಗಿಯೂ ಆ ಕರ್ತೃವಿಗೂ ಸಾಕ್ಷಿಯಾಗಿಯೂ ಸರ್ವಭೂತ(ಪ್ರಾಣಿ)ಗಳಲ್ಲಿಯೂ ಇರುವವನಾಗಿಯೂ ಸಮನಾಗಿಯೂ ಒಬ್ಬನೇ ಆಗಿಯೂ ಕೂಟಸ್ಥನಿತ್ಯನಾಗಿಯೂ ಇರುವ ಪುರುಷನೇ ಎಲ್ಲರ ಆತ್ಮನೆಂದು ವಿಧಿ (ಕರ್ಮೋಪಾಸನೆಗಳ) ಕಾಂಡದಲ್ಲಿಯೇ ಆಗಲಿ, ತರ್ಕಶಾಸ್ತ್ರದಲ್ಲಿಯೇ ಆಗಲಿ, ಯಾರಿಗೂ ತಿಳಿಯಬಂದಿರುವದಿಲ್ಲ. ಆದ್ದರಿಂದ ಆವನನ್ನು ಇಲ್ಲವೆನ್ನುವದಕ್ಕಾಗಲಿ, ವಿಧಿಗೆ ಅಂಗವಾಗಿ ಮಾಡುವದಕ್ಕಾಗಲಿ ಯಾರಿಂದಲೂ ಆಗಲಾರದು........... ಮಾರ್ಪಾಡಿಗೆ ಯಾವ ಹೇತುವೂ ಇಲ್ಲದ್ದರಿಂದ ಕೂಟಸ್ಥನಿತ್ಯನಾಗಿರುತ್ತಾನೆ. ಆದ್ದರಿಂದಲೇ ನಿತ್ಯಶುದ್ಧಬುದ್ಧಮುಕ್ತಸ್ವಭಾವನಾಗಿರುತ್ತಾನೆ. ಆದ್ದರಿಂದ ಈ 'ಪುರುಷನಿಗಿಂತ

ಹೆಚ್ಚಿನದು ಯಾವದೂ ಇರುವದಿಲ್ಲ. ಅವನೇ ತೀರ ಕೊನೆಯು, ಅವನೇ ಎಲ್ಲಕ್ಕಿಂತಲೂ ಹೆಚ್ಚಿನ ಗತಿಯು." (ಕ : ೧-೩-೧೧) ಮತ್ತು "ಆ ಔಪನಿಷದ ಪುರುಷನನ್ನೇ ಕುರಿತು ನಿನ್ನನ್ನು ಕೇಳುತ್ತೇನೆ" (ಬೃ : ೩-೯-೨೨) ಸರ್ವಾತ್ಮನಾದ ಈ ಪರಮಾತ್ಮನು (ಪ್ರತ್ಯಗಾತ್ಮನು) ವೇದಾಂತ (ಉಪನಿಷತ್ತು) ಗಳಲ್ಲಿ ಮಾತ್ರವೇ ತಿಳಿಯಬರುತ್ತಾನೆ; ಬೇರೆ ಯಾವ ಶಾಸ್ತ್ರಗಳಿಂದಲೂ ಇವನು ತಿಳಿಯಬರುವದಿಲ್ಲ. (ಸೂ. ಭಾ : ೧-೧-೪ ; ಪು. ೭೮).

ಇದಿಷ್ಟೂ ಪುರುಷಪ್ರಯತ್ನರೂಪವಾದ ಅಧ್ಯಾತ್ಮಸಾಧನ- ಸಾಧ್ಯಫಲಗಳ (ಅಮೃತತ್ವದ) ವಿಚಾರವಾಯಿತು.

74. ಇನ್ನು ಆತ್ಮಜ್ಞಾನಿಗೆ ಪ್ರಾರಬ್ಧಕರ್ಮದ ಸಂಬಂಧವಿದೆಯೆ ? ಎನ್ನುವ ಗೂಢವಿಷಯವನ್ನು ಸಂಕ್ಷೇಪವಾಗಿ ವಿಚಾರಮಾಡೋಣ :

ಯಥೈಧಾಂಸಿ ಸಮಿದ್ಧೋಽಗ್ನಿಃ ಭಸ್ಮಸಾತ್ ಕುರುತೇಽರ್ಜುನ ।
ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ ಕುರುತೇ ತಥಾ ॥ ಗೀ ೪-೩೭

ಹೇಗೆ ಚೆನ್ನಾಗಿ ಹತ್ತಿಕೊಂಡು ಉರಿಯುತ್ತಿರುವ ಬೆಂಕಿಯು ಕಟ್ಟಿಗೆಗಳನ್ನು ಬೂದಿಯಾಗಿ ಮಾಡಿಬಿಡುವಂತೆ-ಎಲೈ ಅರ್ಜುನ !-

..........ತಸ್ಮಾತ್ ಸಮ್ಯಗ್ದರ್ಶನಂ ಸರ್ವಕರ್ಮಣಾಂ ನಿರ್ಬೀಜತ್ವ-ಕಾರಣಮ್ ಇತ್ಯಭಿಪ್ರಾಯಃ । ಸಾಮರ್ಥ್ಯಾತ್ ಯೇನ ಕರ್ಮಣಾ ಶರೀರಮ್ ಆರಬ್ಧಂ ತತ್ ಪ್ರವೃತ್ತಫಲತ್ವಾತ್ ಉಪಭೋಗೇನೈವ ಕ್ಷೀಯತೇ । ಅತಃ ಯಾನಿ ಅಪ್ರವೃತ್ತಫಲಾನಿ ಜ್ಞಾನೋತ್ಪತ್ತೇಃ ಪ್ರಾಕ್ ಕೃತಾನಿ ಜ್ಞಾನಸಹಭಾವೀನಿ ಚ ಅತೀತಾನೇಕಜನ್ಮಕೃತಾನಿ ಚ ತಾನ್ಯೇವ ಸರ್ವಾಣಿ ಭಸ್ಮಸಾತ್ ಕುರುತೇ ॥ (ಗೀ : ೪-೩೭).

...............ಸರಿಯಾದ ಆತ್ಮಜ್ಞಾನವು ಕರ್ಮಗಳೆಲ್ಲವೂ ನಿರ್ಬೀಜವಾಗುವಂತೆ ಮಾಡುವದಕ್ಕೆ ಕಾರಣವಾಗುತ್ತದೆ. ಆದರೆ, ಯಾವ ಕರ್ಮದಿಂದ ಜ್ಞಾನಿಯ ಶರೀರವು ಜನಿಸಿಬಂದಿರುವದೋ ಅದು ಮಾತ್ರ ಫಲವನ್ನು ಕೊಡುವದಕ್ಕೆ ಪ್ರಾರಂಭಮಾಡಿಬಿಟ್ಟಿರುವದರಿಂದ, ಅನುಭವಿಸುವದರಿಂದಲೇ ಅದು ಕ್ಷಯವಾಗಿಬಿಡುವದು. (ಶರೀರವೇ ಪ್ರಾರಬ್ಧಕರ್ಮದ ಫಲವು; ಜ್ಞಾನವೂ ಆ ಪ್ರಾರಬ್ಧಕರ್ಮದ ಫಲವೇ ಆಗಿರುವದರಿಂದ ಆಗಿಹೋಗಿರುವ ಫಲವನ್ನು ಅದು ನಿಲ್ಲಿಸಲಾರದು). ಆದ್ದರಿಂದ ಜ್ಞಾನವುಂಟಾಗುವದಕ್ಕೆ ಮೊದಲು ಆ ಯೋಗಿಯು ಯಾವ (ಸಂಚಿತ) ಕರ್ಮಗಳನ್ನು ಈ ಜನ್ಮದಲ್ಲಿ ಮಾಡಿದ್ದನೋ ಮತ್ತು ಜ್ಞಾನವಿರುವಾಗ ಯಾವ (ಆಗಾಮಿ) ಕರ್ಮಗಳನ್ನು ಮಾಡುತ್ತಾನೋ ಮತ್ತು ಹಿಂದೆ

ಅನೇಕ ಜನ್ಮಗಳಲ್ಲಿ ಯಾವ ಯಾವ (ಸಂಚಿತ) ಕರ್ಮಗಳನ್ನು ಮಾಡಿದ್ದರೋ ಆ ಸರ್ವಕರ್ಮಗಳನ್ನೂ ಆತ್ಮಜ್ಞಾನವು ಸುಟ್ಟು ಬೂದಿಮಾಡುತ್ತದೆ. (ಜ್ಞಾನವು ಯಾವುದನ್ನೂ ನಾಶಮಾಡುವದಿಲ್ಲ; ಆದರೆ, ಮಾಯಾಕಲ್ಪಿತದ್ವೈತದಲ್ಲಿ ತೋರುವ ಕರ್ತೃ-ಕರ್ಮ-ಫಲಭೋಗ ಇತ್ಯಾದಿ ಎಲ್ಲವೂ ಹುಸಿತೋರಿಕೆ ಮಾತ್ರ ನಿಜವಲ್ಲ, ಸತ್ಯವಲ್ಲ ಎಂದು ವಿವೇಕದಿಂದ ಬೆಳಗಿ ತೋರಿಸುವದರಿಂದ ನಿಶ್ಚಿತಾನುಭವವಾಗುತ್ತದೆ. ಇದಕ್ಕೆ ಶಾಸ್ತ್ರದಲ್ಲಿ, ಸಮ್ಯಗ್ಜ್ಞಾನದಿಂದ ಅಜ್ಞಾನವೂ ಅಜ್ಞಾನಕಲ್ಪಿತವಾದ ಮಾಯಾಸಹಿತ ಸಕಲದ್ವೈತವೂ ಸಂಪೂರ್ಣವಾಗಿ ಬಾಧಿತವಾಗುತ್ತದೆ-ಎನ್ನುತ್ತಾರೆ. ಮಂದಪ್ರಕಾಶದಲ್ಲಿ ತೋರಿ, ಭಯಪಡಿಸಿದ ಹಾವು ಬೆಳಕನ್ನು ತಂದಾಗ ಹಗ್ಗವೆಂದು ತೋರಿ, ಹಾವಿನ ಭ್ರಮೆಯನ್ನು ಕಳೆಯುತ್ತದೆ. ಆ ನಿಜವಾದ ಹಗ್ಗವನ್ನು ಸುಡಬಹುದು ; ಆದರೆ ಆ ಹುಸಿತೋರಿಕೆಯ ಹಾವನ್ನು ಸುಡಲಾಗುವದಿಲ್ಲ; ಸುಡುವ ಆಗತ್ಯವೂ ಇಲ್ಲ. ಇಲ್ಲದ ಹಾವು ನಿಜವಾಗಿರುವಂತೆ ಬೆಳಕಿನ ಕೊರತೆಯಿಂದ ತೋರಿಕೊಂಡಿತು-ಎಂದು ಬುದ್ಧಿಯಲ್ಲಿ ನಿಶ್ಚಯವಾದರೆ, ಹಿಂದೆ ಉಂಟಾದ ಭ್ರಮೆಯೂ ಭಯವೂ ಪರಿಹಾರವಾಗುತ್ತವೆ. ಈ ವ್ಯವಹಾರದಲ್ಲಿ ಹಾವಿನ ಹುಸಿತೋರಿಕೆ ಬಾಧಿತವಾಯಿತು ; (ನಾಶವಾಗಲಿಲ್ಲ. ಆದರೆ ಹಗ್ಗವನ್ನು ಸುಟ್ಟರೆ ಮಾತ್ರ ಹಗ್ಗವು ನಾಶವಾಗುತ್ತದೆ.)

75. ಹಿಂದೆ ಅನೇಕ ಜನ್ಮಗಳಲ್ಲಿ ಮಾಡಿದ್ದ ಎಲ್ಲಾ ಕರ್ಮಗಳಿಗೂ ಮತ್ತು ಈ ಜನ್ಮದಲ್ಲಿ ಜ್ಞಾನ ಉಂಟಾಗುವ ಮೊದಲು ಮಾಡಿದ ಕರ್ಮಗಳಿಗೂ ಸಂಚಿತಕರ್ಮಗಳೆಂದು ಹೆಸರು. ಸಂಚಿತವೆಂದರೆ, ಫಲವನ್ನು ಕೊಡುವದಕ್ಕಾಗಿ ಸಂಗ್ರಹವಾದ ಕರ್ಮಗಳು. ಆತ್ಮಜ್ಞಾನವಿರುವಾಗ ಈಗಲೂ ಮುಂದೆಯೂ ಮಾಡುವ ಕರ್ಮಗಳು ಆಗಾಮಿಕರ್ಮಗಳು. ಆತ್ಮಜ್ಞಾನದಿಂದ ಸಂಚಿತ-ಆಗಾಮಿಕರ್ಮಗಳು ಮಾತ್ರ ಬಾಧಿತವಾಗುತ್ತವೆ. ಆದರೆ ಉದ್ಯೋಗ, ಸಂಪಾದನೆ, ಸಹವಾಸ, ಸುಖ-ದುಃಖ, ಲಾಭ-ನಷ್ಟ, ಸಂಸಾರ, ಸಂನ್ಯಾಸ, ಧರ್ಮ, ಅಧರ್ಮ, ಅಧ್ಯಾತ್ಮ ಮೊದಲಾದ ಎಲ್ಲಾ ಸಾಧನೆಗಳಿಗೂ ಯೋಗ-ಭೋಗಗಳಿಗೂ ಕಾರಣವೂ ಅತ್ಯಂತಪ್ರಬಲವೂ ಆದ ಪ್ರಾರಬ್ಧಕರ್ಮದ ಗೂಢಶಕ್ತಿಯು ಮಾತ್ರ ತನ್ನ ಫಲವನ್ನು ಕೊಡದೆ ಬರಿದಾಗುವದಿಲ್ಲ. ಆದರೆ ಈ ಪ್ರಾರಬ್ಧ ಫಲಭೋಗವು ಇಷ್ಟವಾಗಲಿ, ಅನಿಷ್ಟವಾಗಲಿ, ಶುಭವಾಗಲಿ, ಅಶುಭವಾಗಲಿ ಜ್ಞಾನಿಯ ಜ್ಞಾನಕ್ಕಾಗಲಿ, ಮೋಕ್ಷಕ್ಕಾಗಲಿ ಬಾಧಕವಲ್ಲ. ಆದ್ದರಿಂದಲೇ ಅತ್ಯಂತ ಪರಿಶುದ್ಧಜೀವಿಗಳೂ ತಪಸ್ವಿಗಳೂ ಜ್ಞಾನಿಗಳೂ ಆದ ಶ್ರೀ ರಾಮಕೃಷ್ಣ ಪರಮಹಂಸರು ಗಂಟಲ ಕ್ಯಾನ್ಸರ್ ಹುಣ್ಣಿನಿಂದಲೂ ಭಗವಾನ್ ಶ್ರಿ ರಮಣ ಮಹರ್ಷಿಗಳು ತೋಳಿನಲ್ಲಿ ಕ್ಯಾನ್ಸರ್ ಹುಣ್ಣಿನಿಂದಲೂ ತೀವ್ರವಾಗಿ ಸಂಕಟಪಟ್ಟು

ದೇಹತ್ಯಾಗವನ್ನಾಡಬೇಕಾಯಿತು. ಇಂಥಾ ಉದಾಹರಣೆಗಳು ನೂರಾರು-ಸಾವಿರಾರು ಸಿಕ್ಕಬಹುದು. ಪುರಾಣದಲ್ಲಿ ಹೇಳಿರುವಂತೆ, ಜಗದಾದಿಗುರುಗಳಾದ ವಸಿಷ್ಠಮಹರ್ಷಿಗಳು ತಮ್ಮ ಒಂದುನೂರುಜನ ಮಕ್ಕಳನ್ನು ಕಳೆದುಕೊಂಡುದೂ ಪ್ರಾರಬ್ಧಕರ್ಮದ ಫಲವಾಗಿಯೇ.

76. ಭರ್ತೃಹರಿ ಕವಿಗಳು ಪ್ರಾರಬ್ಧಕರ್ಮದ ಅತ್ಯಂತಪ್ರಬಲವಾದ ಶಕ್ತಿಯನ್ನೂ ಮಹಿಮೆಯನ್ನೂ ಹೊಗಳಿರುವದು ಹೇಗೆಂದರೆ :

ಬ್ರಹ್ಮಾ ಯೇನ ಕುಲಾಲವನ್ನಿಯಮಿತೋ ಬ್ರಹ್ಮಾಂಡಭಾಂಡೋದರೇ।
ವಿಷ್ಣುರ್ಯೇನ ದಶಾವತಾರಗಹನೇ ಕ್ಷಿಪ್ತೋ ಮಹಾಸಂಕಟೇ ॥
ರುದ್ರೋ ಯೇನ ಕಪಾಲಪಾಣಿಪುಟಕೇ ಭಿಕ್ಷಾಟನಂ ಕಾರಿತಃ ।
ಸೂರ್ಯೋ ಭ್ರಾಮ್ಯತಿ ನಿತ್ಯಮೇವ ಗಗನೇ ತಸ್ಮೈ ನಮಃ ಕರ್ಮಣೇ ॥

ಯಾವ ಪ್ರಾರಬ್ಧಕರ್ಮದ ಪ್ರಭಾವದಿಂದ ಸೃಷ್ಟಿಕರ್ತನಾದ ಬ್ರಹ್ಮನೂ ಕೂಡ ಬ್ರಹ್ಮಾಂಡವೆಂಬ ಮಡಕೆಯ ಹೊಟ್ಟೆಯಲ್ಲಿ, ಕುಂಬಾರನಂತೆ ನಿರಂತರವಾಗಿ ಪ್ರಾಣಿಗಳನ್ನೂ ಪದಾರ್ಥಗಳನ್ನೂ ನಿರ್ಮಾಣಮಾಡುವ ಕಾರ್ಯದಲ್ಲಿಯೇ ನಿಯಮಿಸಲ್ಪಟ್ಟನೋ, ವಿಷ್ಣುವೂ ಸಹ ಗಹನವಾದ ದಶಾವತಾರವೆಂಬುವ ಮಹಾಸಂಕಟದಲ್ಲಿ ಎಸೆಯಲ್ಪಟ್ಟನೋ, ರುದ್ರನೂ ಕೂಡ ಕೈಯಲ್ಲಿ ಬ್ರಹ್ಮಕಪಾಲವನ್ನು ಹಿಡಿದು ಭಿಕ್ಷಾಟನೆಮಾಡುವಂತೆ ಆಜ್ಞಾಪಿಸಲ್ಪಟ್ಟನೋ, ತೇಜೋನಿಧಿಯಾದ ಸೂರ್ಯನೂ ಸಹ ನಿಮಿಷವೂ ಬಿಡುವಿಲ್ಲದಂತೆ ಅಂತರಿಕ್ಷದಲ್ಲಿ ಭ್ರಮಿಸುತ್ತಿರುವಂತೆ ವಿಧಿಸಲ್ಪಟ್ಟನೋ ಅಂಥಾ ಪರಮೋಚ್ಚಶಕ್ತಿಯುಳ್ಳ ಸರ್ವಾಧಿಕಾರಿಯಾದ ಪ್ರಾರಬ್ಧಕರ್ಮಕ್ಕೆ ಕೋಟಿ ಕೋಟಿ ನಮಸ್ಕಾರಗಳು !

77. ಇಂಥಾ ಪ್ರಾರಬ್ಧಕರ್ಮಕ್ಕೆ ಪುರುಷಪ್ರಯತ್ನವೇ ಕಾರಣ. ಯೋಗವಾಸಿಷ್ಠಗ್ರಂಥದಲ್ಲಿ ವಸಿಷ್ಠಮಹರ್ಷಿಗಳು ರಾಮಚಂದ್ರನಿಗೆ ಹೇಳುವದೇನೆಂದರೆ, "ಒಬ್ಬ ಸಾಮಾನ್ಯಜೀವನೇ ಪುರುಷಪ್ರಯತ್ನದ ಉಪಾಸನಾಬಲದಿಂದಲೂ ತಪಸ್ಸಾಮರ್ಥ್ಯದಿಂದಲೂ ಸೃಷ್ಟಿಕರ್ತನಾದ ಬ್ರಹ್ಮನೇ ಆಗಬಲ್ಲ; ಸ್ಥಿತಿಕರ್ತನಾದ ವಿಷ್ಣುವೂ ಆಗಬಲ್ಲ; ಅಥವಾ ಲಯಕರ್ತನಾದ ರುದ್ರನೇ ಆಗಬಲ್ಲ.

ಆದರೆ ಪ್ರಯತ್ನದ ಫಲವಾದ ಪ್ರಾರಬ್ಧವೇ ಮುಂದಿನ-ಇಂದಿನ ಪ್ರಯತ್ನವನ್ನೂ ಕೆಲವುಮಟ್ಟಿಗೆ ನಿಯಂತ್ರಿಸಬಲ್ಲದು.

"ಬುದ್ಧಿಃ ಕರ್ಮಾನುಸಾರಿಣೀ"

ಭೋಗಿಸಲೇಬೇಕಾದ ಪ್ರಬಲಪ್ರಾರಬ್ಧದ ಫಲಾನುಸಾರಿಯಾಗಿಯೇ ಬುದ್ಧಿವೃತ್ತಿಯಿಂದ ವ್ಯವಹರಿಸುವಂತೆ ಪ್ರೇರಣೆಯಾಗುತ್ತದೆ.

78. ಮುಂಡಕೋಪನಿಷತ್ತಿನಲ್ಲಿ ಪರಮಾತ್ಮಜ್ಞಾನದ ಫಲವನ್ನು ಹೇಳಿರುವದೇನೆಂದರೆ :

ಭಿದ್ಯತೇ ಹೃದಯಗ್ರನ್ಥಿಃ
ಛಿದ್ಯನ್ತೇ ಸರ್ವಸಂಶಯಾಃ ।
ಕ್ಷೀಯನ್ತೇ ಚಾಸ್ಯ ಕರ್ಮಾಣಿ
ತಸ್ಮಿನ್ ದೃಷ್ಟೇ ಪರಾವರೇ ॥ ಮುಂ. ೨-೨-೯

ಕಾರಣರೂಪದಿಂದ ಪರನೂ (ಹೆಚ್ಚಿನವನೂ) ಕಾರ್ಯರೂಪದಿಂದ ಅಪರನೂ (ಕಡಿಮೆಯವನೂ) ಆದ, ಸಂಸಾರಿಯಲ್ಲದ ಸರ್ವಜ್ಞನಾದ ಆ ಪರಾವರನನ್ನು "**ಸಾಕ್ಷಾತ್ ಅಹಮಸ್ಮಿ" ಇತಿ ದೃಷ್ಟೇ**-ನೇರಾಗಿ "ನಾನೇ ಅವನಾಗಿ ಇರುವೆನು"-ಎಂದು ವಿವೇಕದಿಂದ ಕಂಡುಕೊಂಡರೆ, ಬುದ್ಧಿಯನ್ನು ಆಶ್ರಯಿಸಿಕೊಂಡಿರುವ ಅವಿದ್ಯಾಕಾಮಕರ್ಮಗಳ ಸಂಸಾರಭ್ರಮೆಯು ನಾಶವಾಗುತ್ತದೆ ; ಆಧಿಭೌತಿಕ-ಆಧಿದೈವಿಕ-ಆಧ್ಯಾತ್ಮಿಕವಾದ ಸಕಲಸಂಶಯಗಳೂ ನಿರಸನವಾಗುತ್ತವೆ ; ಮತ್ತು ಹಿಂದಿನ ಜನ್ಮಗಳಲ್ಲಿ ಮಾಡಿ, ಇನ್ನೂ ಫಲವನ್ನು ಕೊಡುವದಕ್ಕೆ ಪ್ರಾರಂಭಿಸದೆ ಇರುವ ಕರ್ಮಗಳೂ ಈ ಜನ್ಮದಲ್ಲಿ ಜ್ಞಾನವುಂಟಾಗುವದಕ್ಕೆ ಮುಂಚೆ ಮಾಡಿದ್ದ ಮತ್ತು ಜ್ಞಾನವುಂಟಾಗುವಾಗ ಜೊತೆಯಲ್ಲಿರುವ ಕರ್ಮಗಳೂ ಕ್ಷಯವಾಗುವವು. ಆದರೆ, ಆ ಜ್ಞಾನಿಯ ಈ ಜನ್ಮವು ಯಾವ ಪೂರ್ವಜನ್ಮಗಳ ಕರ್ಮಗಳಿಂದ ಉಂಟಾಗಿರುವದೋ ಅವು ಮಾತ್ರ ಅವನಿಗೆ ಭೋಗವನ್ನು ಕೊಡದೆ ಕ್ಷಯವಾಗುವದಿಲ್ಲ. ಏಕೆಂದರೆ, ಆ ಪೂರ್ವಕರ್ಮಗಳು ಈ ಜನ್ಮವನ್ನು ಕೊಡುವದರ ಮೂಲಕ ಫಲವೀಯುವದಕ್ಕೆ ಪ್ರಾರಂಭವಾಗಿಬಿಟ್ಟಿವೆ. ಆದರೆ ಅಕರ್ತೃವೂ ಅಭೋಕ್ತೃವೂ ಆದ (ಸರ್ವದಾ ಸರ್ವವನ್ನೂ ಬೆಳಗುತ್ತಿರುವ) ಸಾಕ್ಷಿಚೈತನ್ಯವೇ ತಾನೆಂಬ ದೃಢಜ್ಞಾನವುಳ್ಳ ಜೀವನ್ಮುಕ್ತನಿಗೆ ಮಾಯಾಕಲ್ಪಿತದ್ವೈತವೆಲ್ಲಾ ಬಾಧಿತವಾಗಿರುವದರಿಂದ, ಶರೀರೇಂದ್ರಿಯಗಳಾಗಲಿ, ಅವುಗಳ ಭೋಗವಾಗಲಿ ಬಾಧಿಸಲಾರವು. ಜ್ಞಾನವು ಅಜ್ಞಾನವನ್ನು ಕಳೆದರೆ, ಅಜ್ಞಾನದ ಕಾರ್ಯವಾದ ಕಾಮ-ಕರ್ಮ-ಫಲಭೋಗ ಇವುಗಳಲ್ಲಿ ಯಾವದೂ ಉಳಿಯಲಾರದೆಂಬುದು ಸ್ಪಷ್ಟವಾಗಿದೆ.

79. ಸೂತ್ರಭಾಷ್ಯದಲ್ಲಿ ಹೇಳಿರುವದೇನೆಂದರೆ :

……………ಪೂರ್ವಸಿದ್ಧಕರ್ತೃತ್ವಭೋಕ್ತೃತ್ವವಿಪರೀತಂ ಹಿ ತ್ರಿಷ್ವಪಿ ಕಾಲೇಷು ಅಕರ್ತೃತ್ವ, ಅಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ ನೇತಃ ಪೂರ್ವಮಪಿ ಕರ್ತಾ-ಭೋಕ್ತಾ ವಾ ಅಹಮಾಸಮ್, ನೇದಾನೀಂ, ನಾಪಿ ಭವಿಷ್ಯತ್ಕಾಲೇ-ಇತಿ ಬ್ರಹ್ಮವಿದವಗಚ್ಛತಿ । ಏವಮೇವ

ಚ ಮೋಕ್ಷ ಉಪಪದ್ಯತೇ । ಅನ್ಯಥಾ ಹಿ ಅನಾದಿಕಾಲಪ್ರವೃತ್ತಾನಾಂ ಕರ್ಮಣಾಂ ಕ್ಷಯಾಭಾವೇ ಮೋಕ್ಷಾಭಾವಃ ಸ್ಯಾತ್ । ನ ಚ ದೇಶ ಕಾಲನಿಮಿತ್ತಾಪೇಕ್ಷೋ ಮೋಕ್ಷಃ ಕರ್ಮಫಲವತ್ ಭವಿತುಮರ್ಹತಿ । ಅನಿತ್ಯತ್ವಪ್ರಸಙ್ಗಾತ್ ॥ (ಸೂ. ಭಾ : ೪-೧-೧೩)

............ಹಿಂದೆ ಸಿದ್ಧವಾಗಿದ್ದ (ಅನುಭವದಲ್ಲಿ ಇದ್ದಂತೆ ತೋರುತ್ತಿದ್ದ) ಕರ್ತೃತ್ವ-ಭೋಕ್ತೃತ್ವಗಳಿಗೆ ವಿಪರೀತವಾಗಿ "ಮೂರು ಕಾಲಗಳಲ್ಲಿಯೂ ಕರ್ತೃತ್ವ-ಭೋಕ್ತೃತ್ವವಿಲ್ಲದ ಸ್ವರೂಪದ ಬ್ರಹ್ಮವೇ ನಾನಾಗಿರುವೆನು. ಇದಕ್ಕೆ ಹಿಂದೆಯೂ ಕರ್ತೃವಾಗಿ ಅಥವಾ ಭೋಕ್ತೃವಾಗಿ ನಾನಿರಲಿಲ್ಲ; ಈಗಲೂ ಇಲ್ಲ, ಮುಂದೆಯೂ ಇರುವದಿಲ್ಲ" ಎಂದಲ್ಲವೆ, ಬ್ರಹ್ಮಜ್ಞಾನಿಯು ನಿಶ್ಚಯಿಸಿರುತ್ತಾನೆ?

ಹೀಗೆಂದಾದರೇ ಮೋಕ್ಷವು ಹೊಂದುತ್ತದೆ ; ಹೀಗಲ್ಲದಿದ್ದರೆ, ಅನಾದಿಕಾಲ ದಿಂದ ಸಾಗುತ್ತಿರುವ ಕರ್ಮಗಳು ಕ್ಷಯವಾಗದೆ ಮೋಕ್ಷವೇ ಇಲ್ಲವೆಂದಾಗುವದು. ಮೋಕ್ಷವು ಕರ್ಮಫಲದಂತೆ ದೇಶಕಾಲನಿಮಿತ್ತಗಳನ್ನು ಅಪೇಕ್ಷಿಸಿಯೂ ಇರ ಲಾರದು ; ಏಕೆಂದರೆ, ಆಗ ಅದು ಅನಿತ್ಯವೆಂಬ ಪ್ರಸಂಗವು ಉಂಟಾಗುವದು. ಜ್ಞಾನದ ಫಲವು ಪರೋಕ್ಷವೆಂಬುದು ಹೊಂದುವದಿಲ್ಲವಾದ್ದರಿಂದಲೂ ಹೀಗೆಂದು ಒಪ್ಪಬೇಕು............ (ಸೂ. ಭಾ : ೪-೧-೧೦ ; ಪುಟ. ೬೨೯)

80. ಇದುವರೆಗೆ ಮಾಡಿರುವ ಪ್ರಾರಬ್ಧ-ಪೌರುಷಗಳ ವಿಚಾರಗಳಿಗೆ ಕಾರಣ-ಕಾರ್ಯನಿಯಮವೇ ಆಧಾರವಾಗಿದೆ. ಅಂದರೆ, ಒಂದು ವಿಶಿಷ್ಟ ಕಾರ್ಯಕ್ಕೆ ಒಂದು ವಿಶಿಷ್ಟಕಾರಣ ಇರಲೇಬೇಕು– ಇದು ಜಗತ್ತಿನಲ್ಲಿ ಸರ್ವಕಾಲ ಕ್ಕೂ ಅಬಾಧಿತವಾದ ನಿಯಮ. ಮಾವಿನ ಬೀಜದಿಂದ ಮಾವಿನ ಮರವಾಗಿ ಮಾವಿನ ಫಲವನ್ನೇ ಬಿಡುತ್ತದೆ; ಬೇವಿನ ಬೀಜದಿಂದ ಬೇವಿನ ಮರವು ಬೆಳೆದು ಬೇವಿನ ಫಲವೇ ಆಗುತ್ತದೆ. ಇದು ಎಂದೆಂದೂ ಯಾವ ಕಾರಣದಿಂದಲೂ ಬದಲಾಗದ ಪ್ರಕೃತಿನಿಯಮ, ವಿಶ್ವನಿಯಮ– ಎಂದು ಎಲ್ಲರೂ ಸಾಮಾನ್ಯವಾಗಿ ತಿಳಿದಿದ್ದಾರೆ. ಒಂದು ಪರಿಮಿತಕ್ಷೇತ್ರದಲ್ಲಿ ಮಾತ್ರ ಇದು ಸತ್ಯವಾಗಿ ತೋರು ತ್ತದೆ. ಆದರೆ ಈ ನಿಕಟವೂ ನಿಶ್ಚಿತವೂ ನಿಷ್ಠುರವೂ ಆದ ಕಾರಣಕಾರ್ಯ- ನಿಯಮವನ್ನು ಮುರಿದಿರುವ, ಮೀರಿರುವ ನಿದರ್ಶನಗಳೂ ಬೇಕಾದಷ್ಟಿವೆ. ವಜ್ರ ಸೂಚಿ ಉಪನಿಷತ್ತಿನಲ್ಲಿಯೇ ಹೀಗೆ ಹೇಳಿದೆ :

............ತರ್ಹಿ ಜಾತಿರ್ಬ್ರಾಹ್ಮಣ ಇತಿ ಚೇತ್ತನ್ನ । ತತ್ರ ಜಾತ್ಯನ್ತರ ಜನ್ತುಷ್ವನೇಕ ಜಾತಿಸಂಭವಾ ಮಹರ್ಷಯೋ ಬಹವಸ್ಸನ್ತಿ । ಋಷ್ಯ ಶೃಙ್ಗೋ ಮೃಗ್ಯಾಃ, ಕೌಶಿಕಃ ಕುಶಾತ್ ಜಾಮ್ಬೂಕೋ ಜಮ್ಬೂಕಾತ್ ವಾಲ್ಮೀಕೋ ವಲ್ಮೀಕಾತ್, ವ್ಯಾಸಃ ಕೈವರ್ತಕನ್ಯಾಯಾಮ್, ಶಶ

ಪೃಷ್ಠಾತ್ ಗೌತಮಃ, ವಸಿಷ್ಠ ಉರ್ವಶ್ಯಾಮ್, ಅಗಸ್ತ್ಯಃ ಕಲಶೇ ಜಾತ ಇತಿ ಶ್ರುತತ್ವಾತ್........ತಸ್ಮಾನ್ನ ಜಾತಿರ್ಬ್ರಾಹ್ಮಣ ಇತಿ।........

...........ಜಾತಿಯು ಬ್ರಾಹ್ಮಣನೆನ್ನುವೆಯೋ ಅದೂ ಅಲ್ಲ. ಏಕೆಂದರೆ, ಮನುಷ್ಯರಲ್ಲದ ಬೇರೆ ಪ್ರಾಣಿಗಳಿಂದ ಮನುಷ್ಯರು ಹುಟ್ಟಿದ್ದಾರೆ; ಕೇವಲ ಸಾಮಾನ್ಯ ಮನುಷ್ಯರೇ ಅಲ್ಲ; ಪಶುಪ್ರಾಣಿಗಳಿಂದ ಮಹರ್ಷಿಗಳೇ ಜನಿಸಿದ್ದಾರೆಂಬುದು ಪ್ರಸಿದ್ಧವಾಗಿದೆ. ಋಷ್ಯಶೃಂಗರು ಜಿಂಕೆಯಿಂದ, ಕೌಶಿಕರು ಒಂದು ಹುಲ್ಲುಕಡ್ಡಿಯಿಂದ, ಜಾಂಬೂಕಋಷಿಗಳು ಜಂಬುಕದಿಂದ-ನರಿಯಿಂದ, ವಾಲ್ಮೀಕಿಗಳು ಹುತ್ತದಿಂದ, ವ್ಯಾಸರು ಬೆಸ್ತರಮತ್ಸ್ಯಗಂಧಿಯಿಂದ-ಸತ್ಯವತಿಯಿಂದ, ಗೌತಮರು ಮೊಲದಿಂದ, ವಸಿಷ್ಠರು ಸ್ವರ್ಗೀಯವೇಶ್ಯೆಯಾದ ಊರ್ವಶಿಯಿಂದ, ಅಗಸ್ತ್ಯರು ಕಲಶಪಾತ್ರೆಯಿಂದ ಜನಿಸಿದರೆಂದು ಶಾಸ್ತ್ರದಿಂದ ಪ್ರಸಿದ್ಧವಾಗಿದೆ.

ನರಿಯ ಹೊಟ್ಟೆಯಿಂದ ನರಿಯೇ ಹುಟ್ಟಬೇಕು ; ಸಿಂಹದ ಹೊಟ್ಟೆಯಿಂದ ಸಿಂಹವೇ ಹುಟ್ಟಬೇಕು-ಇದು ಕಾರಣ-ಕಾರ್ಯಭಾವದ ಸಾಮಾನ್ಯವಾದ ಪ್ರಕೃತಿನಿಯಮ. ಆದರೆ, ನರಿಯ ಹೊಟ್ಟೆಯಿಂದ ಮನುಷ್ಯ ಅದರಲ್ಲಿಯೂ ಮಹರ್ಷಿಯೇ ಹುಟ್ಟಿದರೆ ಆ ಪ್ರಕೃತಿನಿಯಮವನ್ನು ಮುರಿದಂತೆ ಅಲ್ಲವೆ ? ಒಂದು ನೂರು ವರ್ಷಗಳ ಹಿಂದೆ ಇರಬಹುದು-ಶೃಂಗೇರಿಯ ಕಡೆ ಮಲೆನಾಡಿನಲ್ಲಿ ಗರ್ಭಿಣಿ ಸ್ತ್ರೀ ಹೊಟ್ಟೆಯಿಂದ ಒಂಭತ್ತು ತಿಂಗಳ ಮೇಲೆ ನಾಗರಹಾವು ಹುಟ್ಟಿ ಬಂದಿತೆಂದು, ಅಲ್ಲಿ ಜನಜನಿತ ಐತಿಹ್ಯವಿದೆ.

81. ಪರಮಸಾತ್ತ್ವಿಕಭಕ್ತನಾದ ಪ್ರಹ್ಲಾದನು ಪರಮತಾಮಸಿ ರಾಕ್ಷಸನಾದ ಹಿರಣ್ಯಕಶ್ಯಪನಿಗೆ ಮಗನಾಗಿ ಜನಿಸಿದುದು ಪ್ರಕೃತಿನಿಯಮಕ್ಕೆ ಒಂದು ಬಗೆಯ ಅಪವಾದವೇ ಸರಿ.

ವಿಷ್ಣುವಿನ ದಶಾವತಾರಗಳ ವಿಲಕ್ಷಣ ವರ್ತನೆಗಳು ಪ್ರಕೃತಿನಿಯಮವನ್ನು ಹಾಸ್ಯಮಾಡುತ್ತವೆ. ನರಸಿಂಹನು ಯಾವ ಬಗೆಯ ಪ್ರಾಣಿ ?

ಶ್ರೀರಾಮಚಂದ್ರನಿಗೆ ಜನ್ಮವಿತ್ತ ಪುಣ್ಯಮಾತೆ ಕೌಸಲ್ಯೆಗೆ ಸಹ ವೈಧವ್ಯ ಬಂದುದು ಪ್ರಾರಬ್ಧದ ಪರಮಾಧಿಕಾರದ ವಿಧಿಯ ವೈಪರೀತ್ಯಕ್ಕೆ ಪ್ರಸಿದ್ಧ ನಿದರ್ಶನ ! ಪರಮಾತ್ಮನ ಅವತಾರವೆನಿಸಿದ ಶ್ರೀರಾಮಚಂದ್ರನ ಜನ್ಮಕ್ಕೆ ಕಾರಣವಾದ ಕೌಸಲ್ಯಾಮಾತೆಯ ಮಹತ್ತಾದ ಪುಣ್ಯಕ್ಕೆ ಪಾಪದ ಫಲವಾದ ವೈಧವ್ಯದ ದುಃಖವು ಪ್ರಾಪ್ತಿಯಾಗಬೇಕೆ ?

ಪರಮಸಾತ್ತ್ವಿಕಧರ್ಮಾತ್ಮರೂ ಸತ್ಯಸಂಧರೂ ಆದ ಸೀತಾ- ರಾಮ-ಲಕ್ಷ್ಮಣರು ಹದಿನಾಲ್ಕುವರ್ಷಗಳ ವನವಾಸದಲ್ಲಿ ಕಷ್ಟಪಡಲು ಯಾವ ಘೋರ

ಪಾಪಗಳನ್ನು ಅವರು ಮಾಡಿದ್ದರು ? ಏಕೆಂದರೆ, ಪಾಪದ ಫಲ, ಕಷ್ಟ, ನಷ್ಟ, ಭ್ರಷ್ಟ ಇತ್ಯಾದಿ, ಪುಣ್ಯದ ಫಲವೇ ಸುಖ, ಸಂಪತ್ತು, ಸಮೃದ್ಧಿ-ಎಂಬಿದು ತಾನೇ ಸಾರ್ವತ್ರಿಕಪ್ರಕೃತಿನಿಯಮ ! ಮಾಡಬಾರದ ಪಾಪಗಳನ್ನೆಲ್ಲಾ ಮಾಡಿದ್ದನೆಂದು ರಾಮಾಯಣದಲ್ಲಿ ವರ್ಣಿಸಲ್ಪಟ್ಟಿರುವ ರಾವಣನಿಗೆ ಒಂದುದಿನವಾದರೂ ಹೊಟ್ಟೆ ನೋವು ಬಂದಿತೆಂದಾಗಲಿ, ತಲೆನೋವು ಬಂದಿತೆಂದಾಗಲಿ ರಾಮಾಯಣದಲ್ಲಿ ವರ್ಣನೆಯಿಲ್ಲ ; ಅವನ ಪಾಪದ ಫಲವಾಗಿ ಅವನಿಗೆ "ಟ್ಯೂಮರ್, ಅಲ್ಸರ್, ಕ್ಯಾನ್ಸರ್" ಒಂದು ವ್ಯಾಧಿಯೂ ಅವನನ್ನು ಬಾಧಿಸಲಿಲ್ಲ. ಅವನು ಬದುಕಿರುವ ವರೆಗೂ ಈ ಹುಚ್ಚುಪ್ರಪಂಚದಲ್ಲಿ ಅವನಿಗೆ ಇಷ್ಟಬಂದಂತೆ- ಯಾವ ಪಾಪದ ಭಯವೂ ಇಲ್ಲದೆ- ಬೇಕುಬೇಕಾದಂತೆ ಉರಿದ- ಮೆರೆದ ! ಕೊನೆಗೆ ಯುದ್ಧದಲ್ಲಿ ರಾಮಚಂದ್ರನು ಒಂದೇ ಬಾಣದಿಂದ ರಾವಣನ ಹತ್ತುತಲೆಗಳನ್ನೂ ಕತ್ತರಿಸಿದ್ದು ಅವನ ಪಾಪಗಳಿಗೆಲ್ಲಾ ಶಿಕ್ಷೆ ಅಥವಾ ಪ್ರಾಯಶ್ಚಿತ್ತವಾಗಲಿಲ್ಲವೆ? ಎಂದು ಆಸ್ತಿಕ-ಮೂಢರು ಯಾರಾದರೂ ಕೇಳಬಹುದು. ಆ ಕಾರ್ಯವನ್ನು ಮಾಡಿದ ರಾಮನೂ ಅಲ್ಲಿದ್ದ ಸೈನಿಕರೂ ರಾವಣನ ಶಿರಚ್ಛೇದವನ್ನು ಕಂಡರೇ ಹೊರತು ತಿಳಿಯುವ ತಲೆಗಳೇ ಕತ್ತರಿಸಲ್ಪಟ್ಟದ್ದರಿಂದ- ತನ್ನ ಶಿರಚ್ಛೇದವಾಯಿತೆಂದು ರಾವಣನಿಗೇನೂ ಅದು ತಿಳಿಯಲಿಲ್ಲವಲ್ಲವೆ ? ಆದ್ದರಿಂದ ರಾವಣನ ದೃಷ್ಟಿಯಿಂದ ಕೊನೆಯವರೆಗೂ ಅವನ ಪಾಪಕ್ಕೆ ಶಿಕ್ಷೆಯಾಗಲೇ ಇಲ್ಲ.

82. ಇದರಲ್ಲಿ ಇನ್ನೊಂದು ವಿಲಕ್ಷಣವೈಚಿತ್ರ್ಯವೂ ಅಡಗಿದೆ ; ವೈಕುಂಠ ದಲ್ಲಿ ದ್ವಾರಪಾಲಕರಾಗಿದ್ದ ಜಯ-ವಿಜಯರೇ ಸನಕಾದಿಗಳ ಶಾಪದಿಂದ ರಾವಣಾದಿಗಳಾದ್ದರಿಂದ, ಅವರು ಬದುಕಿದಾಗ ಮಾಡಿದ್ದ ಅನಂತಪಾಪಗಳಿಗೆಲ್ಲಾ ಸತ್ತ ಮೇಲೆ ವೈಕುಂಠಪ್ರಾಪ್ತಿಯೇ ವಿಹಿತವಾದ ಫಲವೇ ! ಇದು ಎಂಥಾ ಕಾರ್ಯಕಾರಣಭಾವ ?

83. ಇನ್ನು ಕೃಷ್ಣಾವತಾರದಲ್ಲಿ ಪ್ರಸಿದ್ಧ ರಾಸಲೀಲೆ ಮೊದಲಾದವು ಗಳು ಸಾಮಾನ್ಯ ನೀತಿನಿಯಮಗಳಿಗೆ ವಿಲಕ್ಷಣವಾಗಿಯೇ ಇವೆ. ಯುದ್ಧದಲ್ಲಿ ಅವನು ಶತ್ರುಸಂಹಾರಕ್ಕೆ ಅನುಸರಿಸಿದ ತಂತ್ರಗಳೆಲ್ಲಾ ಸಾಮಾನ್ಯ (ಧರ್ಮ) ಯುದ್ಧ-ನಿಯಮದ ದೃಷ್ಟಿಯಿಂದ ಸಾಮಾನ್ಯವಾದ ಕುತಂತ್ರಗಳೇ ಆಗಿವೆ ! ಆ ಪ್ರಸಂಗದಲ್ಲಿ "The end justifies thc means" "ದುಷ್ಟನಿಗ್ರಹ" ಎನ್ನುವ ಧ್ಯೇಯವು ಮಾತ್ರ ನಿರ್ದುಷ್ಟವಾಗಿದ್ದರೆ ಸಾಕು ; ಈ ಧ್ಯೇಯಸಾಧನೆಗೆ ಅನುಸರಿಸಬಹುದಾದ ಯಾವ ಉಪಾಯವಾದರೂ ಯೋಗ್ಯವೇ ಸರಿ. ಇದು ಕೃಷ್ಣಾವತಾರದ ರಾಜನೀತಿಯ ವೈಶಿಷ್ಟ್ಯ ; ಧ್ಯೇಯವು ಧರ್ಮಸಮ್ಮತವಾಗಿರು ವದು ಆಗತ್ಯವಾದಂತೆ, ಅದನ್ನು ಸಾಧಿಸುವ ಮಾರ್ಗಗಳೂ ಸಾಧ್ಯವಾದಷ್ಟು ಧರ್ಮಸಮ್ಮತವಾಗಿಯೇ ಇರಬೇಕು- ಎನ್ನುವದು ರಾಮಚಂದ್ರನ (ಸತ್ಯಸಂಧ)

ಧರ್ಮಜೀವನದ ವೈಶಿಷ್ಟ್ಯ. ಧರ್ಮಾಧರ್ಮಗಳನ್ನು ನೀರಿದ ಪರಮಾತ್ಮನೇ ಶ್ರೀಕೃಷ್ಣ; ಪುರುಷೋತ್ತಮ; ಆದರೆ, ಧರ್ಮದ ಮರ್ಯಾದೆಯನ್ನು ಲೋಕಸಂಗ್ರಹಕ್ಕಾಗಿ ಕರುಣೆಯಿಂದ ಉಳಿಸಿಕೊಂಡಿರುವ (ಮರ್ಯಾದಾ) ಪುರುಷೋತ್ತಮನೇ ಶ್ರೀರಾಮಚಂದ್ರ.

84. ಉಚ್ಚ-ನೀಚಗತಿಯ ಜನ್ಮಗಳಿಗೆ ಧರ್ಮಾಧರ್ಮಗಳ ಆಚರಣೆಯೇ ಕಾರಣವೆಂದೂ ಶರೀರವಿಲ್ಲದೆ ಧರ್ಮಾಧರ್ಮಗಳ ಆಚರಣೆ ಸಾಧ್ಯವಿಲ್ಲವಾದುದರಿಂದ, ಧರ್ಮಾಧರ್ಮಗಳಿಗೆ ಜನ್ಮವೇ ಕಾರಣವೆಂದೂ ಹೇಳುವ ಮಾತಿನಲ್ಲಿ ಅನ್ಯೋನ್ಯಾಶ್ರಯದೋಷವಿರುವದರಿಂದ, ಈ ವಾದವು ಸರಿಯಲ್ಲವೆಂದೂ ಇದು ಮೂಢರ ಬರಿ ಕುರುಡುನಂಬಿಕೆಯೆಂದೂ ಶಾಸ್ತ್ರದಲ್ಲಿ ಹೇಳಿದೆ :

(ಆತ್ಮನಿಗೆ ಶರೀರವಿದೆಯೆಂಬಿದೇ ಮಿಥ್ಯಾಜ್ಞಾನ)–

(ಶರೀರೇ ಪತಿತೇ ಅಶರೀರತ್ವಂ ಸ್ಯಾತ್ ನ ಜೀವತಃ ಇತಿ ಚೇತ್ । ನ । ಸಶರೀರತ್ವಸ್ಯ ಮಿಥ್ಯಾಜ್ಞಾನನಿಮಿತ್ತತ್ವಾತ್ । ನ ಹಿ ಆತ್ಮನಃ ಶರೀರಾತ್ಮಾಭಿಮಾನಲಕ್ಷಣಂ ಮಿಥ್ಯಾಜ್ಞಾನಂ ಮುಕ್ತ್ವಾ ಅನ್ಯತಃ ಸಶರೀರತ್ವಂ ಶಕ್ಯಂ ಕಲ್ಪಯಿತುಮ್ । ನಿತ್ಯಮ್ ಅಶರೀರತ್ವಮ್ ಅಕರ್ಮನಿಮಿತ್ತತ್ವಾತ್ ಇತಿ ಅವೋಚಾಮ ।) ತತ್‌ಕೃತ ಧರ್ಮಾಧರ್ಮನಿಮಿತ್ತಂ ಸಶರೀರತ್ವಮ್ ಇತಿ ಚೇತ್ । ನ । ಶರೀರಸಂಬನ್ಧಸ್ಯ ಅಸಿದ್ಧತ್ವಾತ್ ಧರ್ಮಾಧರ್ಮಯೋಃ ಆತ್ಮಕೃತತ್ವಾಸಿದ್ಧೇಃ । ಶರೀರಸಂಬನ್ಧಸ್ಯ ಧರ್ಮಾಧರ್ಮಯೋಃ ತತ್ ಕೃತತ್ವಸ್ಯ ಚ ಇತರೇತರಾಶ್ರಯತ್ವಪ್ರಸಙ್ಗಾತ್ ಅನ್ಧಪರಂಪರಾ ಏವ ಏಷಾ ಅನಾದಿತ್ವಕಲ್ಪನಾ । ಕ್ರಿಯಾಸಮವಾಯಾಭಾವಾಚ್ಚ ಆತ್ಮನಃ ಕರ್ತೃತ್ವಾನುಪಪತ್ತೇಃ ॥ ಸೂ.ಭಾ : ೧-೧-೪ (ಪು. ೭೫)

(ಪೂರ್ವಪಕ್ಷಿ) :– (ಶರೀರವು ಬಿದ್ದುಹೋದ ಬಳಿಕ ಅಶರೀರತ್ವವಾದೀತು, ಬದುಕಿರುವವನಿಗೆ ಆಗಲಾರದು.

(ಸಿದ್ಧಾಂತಿ) :– ಹಾಗಲ್ಲ, ಏಕೆಂದರೆ ಸಶರೀರತ್ವವು ತೋರುತ್ತಿರುವದು ಮಿಥ್ಯಾಜ್ಞಾನದ ನಿಮಿತ್ತದಿಂದ. ಆತ್ಮನಿಗೆ ಶರೀರವೇ ತಾನೆಂಬ ಅಭಿಮಾನ ರೂಪವಾದ ಮಿಥ್ಯಾಜ್ಞಾನವನ್ನು (ತಪ್ಪುತಿಳಿವಳಿಕೆಯನ್ನು) ಬಿಟ್ಟರೆ ಮತ್ತೇತರಿಂದಲೂ ಸಶರೀರತ್ವವು ಬಂದಿದೆ ಎಂದು ಕಲ್ಪಿಸುವದಕ್ಕೆ ಆಗುವಹಾಗೆಯೇ ಇಲ್ಲ. ಅಶರೀರತ್ವವು ಯಾವ ಕರ್ಮದ ನಿಮಿತ್ತದಿಂದಲೂ ಆಗಿರುವದಿಲ್ಲವಾದ್ದರಿಂದ ಅದು ನಿತ್ಯವಾಗಿರುತ್ತದೆ ಎಂದು ಹಿಂದೆಯೇ ಹೇಳಿರುತ್ತದೆ.

ಪೂರ್ವಪಕ್ಷಿ :- ಈ ಆತ್ಮನು ಮಾಡಿದ ಧರ್ಮಾಧರ್ಮಗಳ ನಿಮಿತ್ತದಿಂದ ಸಶರೀರತ್ವವಾಗಿದೆ-ಎನ್ನಬಹುದಲ್ಲ !

ಸಿದ್ಧಾಂತಿ :- ಕೂಡದು. ಏಕೆಂದರೆ ಆತ್ಮನಿಗೆ ಶರೀರದ ಸಂಬಂಧವಿರುವದೆಂಬುದೇ ಸಿದ್ಧವಾಗಿಲ್ಲವಾದ್ದರಿಂದ ಅವನು ಮಾಡಿದ ಧರ್ಮಾಧರ್ಮಗಳು-ಎಂಬಿದು ಸಿದ್ಧವಾಗುವದಿಲ್ಲ. (ಏಕೆಂದರೆ ಶರೀರಾದಿಗಳಿಲ್ಲದೆ ಕರ್ಮವನ್ನು ಮಾಡುವದಾಗುವದಿಲ್ಲ). ಇವನಿಗೆ ಶರೀರದ ಸಂಬಂಧವಿದೆಯೆಂಬುದೂ ಧರ್ಮಾಧರ್ಮಗಳನ್ನು ಇವನು ಮಾಡುವನೆಂಬುದೂ ಒಂದನ್ನೊಂದು ಆಶ್ರಯಿಸಿ ಸಿದ್ಧವಾಗಬೇಕಾಗಿರುವದರಿಂದ ಅನಾದಿಯಾಗಿ ಹೀಗೆಯೇ ಆಗುತ್ತಾ ಬಂದಿದೆ, ಎಂದು ಕಲ್ಪಿಸುವದು ಅಂಧಪರಂಪರೆಯೇ ಆಗುವದು. ಇದಲ್ಲದೆ, ಆತ್ಮನಿಗೆ ಕ್ರಿಯೆಯ ಸಂಬಂಧವೇ ಇಲ್ಲದ್ದರಿಂದ ಇವನು ಕರ್ತೃವೆಂಬುದೂ ಹೊಂದುವದಿಲ್ಲವಾದ್ದರಿಂದಲೂ ಇವನು ಧರ್ಮಾಧರ್ಮಗಳನ್ನು ಮಾಡುತ್ತಾನೆಂಬುದೂ ಸಿದ್ಧವಾಗುವದಿಲ್ಲ.

(ಶರೀರವಿದೆ ಎಂದು ಸಿದ್ಧವಾದರೆ ಧರ್ಮಾಧರ್ಮಗಳನ್ನು ಮಾಡುತ್ತಾನೆ ಎಂದು ಏರ್ಪಡುತ್ತದೆ. ಧರ್ಮಾಧರ್ಮಗಳನ್ನು ಮಾಡುತ್ತಾನೆಂದು ಸಿದ್ಧವಾದರೆ, ಅವುಗಳ ಫಲವಾಗಿ ಶರೀರವಾಗಿದೆ ಎಂದು ಏರ್ಪಡುತ್ತದೆ. ಹೀಗೆ ಇವರಲ್ಲಿ ಅನ್ಯೋನ್ಯಾಶ್ರಯದೋಷವುಂಟಾಗುತ್ತದೆ.) ಸೂ. ಭಾ: ಪುಟ ೮೬

............ತಥಾ ದೇಹಾದ್ಯುಪಾಧ್ಯವಿವಿಕ್ತಸ್ಯೇವ ಸತೋ ಜೀವಸ್ಯ ಶ್ರುತಿಕೃತ ವಿವೇಕವಿಜ್ಞಾನಂ ಶರೀರಾತ್ ಸಮುತ್ಥಾನಮ್ । ವಿವೇಕವಿಜ್ಞಾನಫಲಂ ಸ್ವರೂಪೇಣ ಅಭಿನಿಷ್ಪತ್ತಿಃ ಕೇವಲಾತ್ಮಸ್ವರೂಪಾವಗತಿಃ । ತಥಾ ವಿವೇಕಅವಿವೇಕಮಾತ್ರೇಣೈವ ಆತ್ಮನೋಽಶರೀರತ್ವಂ ಸಶರೀರತ್ವಂ ಚ।

ಸೂ. ಭಾ: ಪುಟ ೪೨೮ (ಸೂ. ಭಾ: ೧-೩-೧೯)

............ಹಾಗೆಯೇ ದೇಹವೇ ಮುಂತಾದ ಉಪಾಧಿಗಳಿಂದ ವಿಂಗಡವಾಗದಂತೆ ಇರುವ ಜೀವನಿಗೆ (ಸ್ಫಟಿಕವು ಕೆಂಪಾಗಿ ಕಾಣುವಾಗಲೂ ಕೆಂಪಾಗಿರುವದಿಲ್ಲವಾದರೂ ಅದು ಸ್ವಚ್ಛವಾಗಿ ಬೆಳ್ಳಗಿದೆ ಎಂಬ ವಿವೇಕ ಉಂಟಾಗುವದಿಲ್ಲ. ಆದ್ದರಿಂದ ಅದರ ಸ್ವರೂಪವು ವಿಂಗಡವಾಗದಿರುವಂತೆ ಇರುತ್ತದೆ). ಶ್ರುತಿಯಿಂದ ಉಂಟಾದ ವಿವೇಕವಿಜ್ಞಾನವು ಶರೀರವನ್ನು ಬಿಟ್ಟೇಳುವದು. ಆ ವಿವೇಕ ವಿಜ್ಞಾನದ ಫಲವು ಸ್ವರೂಪದಿಂದ ಸಿದ್ಧವಾಗುವದು. ಎಂದರೆ, ಕೇವಲಾತ್ಮ ಸ್ವರೂಪವನ್ನು ಗೊತ್ತುಪಡಿಸಿಕೊಳ್ಳುವದು. ಹೀಗೆಯೇ ಬರಿಯ ವಿವೇಕ, ಅವಿವೇಕ-ಇವುಗಳಿಂದಲೇ ಆತ್ಮನು ಅಶರೀರನಾಗಿರುವದು, ಮತ್ತು ಸಶರೀರನಾಗಿರುವದು. (ಸೂ. ಭಾ: ೧-೩-೧೯ ; ಪುಟ : ೪೨೮)

ವಿಶಿಷ್ಟವಾದ ಕಾರಣಕ್ಕೆ ವಿಶಿಷ್ಟವೂ ನಿಶ್ಚಿತವೂ ಆದ ಫಲವಿದೆ–ಎನ್ನುವದೇ ಪ್ರಾರಬ್ಧ–ಪೌರುಷವಾದಕ್ಕೆ ಆಧಾರವಾದ ಪ್ರಕೃತಿನಿಯಮ ; ಆದರೆ ಈ ನಿಯಮಕ್ಕೆ ಬೇಕಾದಷ್ಟು ಅಪವಾದವೂ ಇದೆ– ಎನ್ನುವದನ್ನು ಇದುವರೆಗೆ ವಿಚಾರ ಮಾಡಿದೆವು.

85. ಪ್ರಸಿದ್ಧ ದಾರ್ಶನಿಕರೂ ಅನುಭವಿಗಳೂ ಆದ (ದಿ||) ಜೆ. ಕೃಷ್ಣಮೂರ್ತಿಗಳು ಹೇಳಿರುವದೇನೆಂದರೆ :

In this most uncertain world, one thing only is the most certain, that is death; even that connot be foretold, where, when, and how etc ; because they too are uncertain.

ಅತ್ಯಂತ ಅನಿಶ್ಚಿತವಾದ ಈ ಜಗತ್ತಿನ ಎಲ್ಲಾ ಬಗೆಯ ಅನಿಶ್ಚಿತ ವಿದ್ಯಮಾನ–ವ್ಯವಹಾರಗಳಲ್ಲಿ ಮರಣ ಒಂದೇ ಅತ್ಯಂತ ನಿಶ್ಚಿತವಾದ ಘಟನೆ. ಆದರೆ ಮರಣವು ಯಾರಿಗೆ, ಎಲ್ಲಿ, ಯಾವಾಗ, ಹೇಗೆ, ಏಕೆ ಮೊದಲಾದವು ಸಹ ಅತ್ಯಂತ ಅನಿಶ್ಚಿತ, ಅನೂಹ್ಯ, ಅತರ್ಕ್ಯ. ಇವನ್ನು ಮುಂದಾಗಿ ತಿಳಿಯಲೂ ಹೇಳಲೂ ಸಾಧ್ಯವಲ್ಲ.

86. ಪರಮಾಣುಗರ್ಭದಲ್ಲಿ ಸಂಶೋಧನೆಯನ್ನು ನಡೆಸಿ, ಎಲೆಕ್ಟ್ರಾನ್, ಪ್ರೋಟಾನ್, ನ್ಯೂಟ್ರಾನ್‌ಗಳನ್ನು ಕಂಡುಹಿಡಿದಿರುವ ಭೌತಿಕವಿಜ್ಞಾನಿಗಳ "ಕ್ವಾಂಟಂ ಥಿಯರಿ" ಹೇಳುವದೂ ಈ ಅನಿಶ್ಚಿತವಿದ್ಯಮಾನವನ್ನೇ ಆಗಿದೆ.

Einsteen, the staunch Vanguard of strict determinism was insisting on proving that classical causality must ultimately prove true even in the quantum world. In 1935 Einstein along with two of his associates........ formulated a mathematical paradon known as E.P.R paradox Through this formulation Einstein tried to prove the falsity of quantum Indeterminism. But, quite contrary to all his expectations this E.P.R effect ultimately resulted in the formation of another epock-making discovery of

modern Science, namely Bell's Theorem which supported both theoretically and experimentally, that the local causality (that there must be a sure effect for a cause in a certain limited area) is a limited and in fact a false concept............

Vedanta describes the Ultimate Creative Power of the universe, the Primeval energy or Maya or Shakti as Aghatita ghatana Patiyasi, which means that it is capable of making things happen in this relative world of Space-Time-Causality without any cause. It also means that things may not happen in the same relative world despite a sure cause. It may be hard to believe this through ordinary logic; but it is nevertheless true. This is an ageold Postulate of Vedanta. Swami Vivekananda explains this idea :

"Cause and effect are all Maya and we shall soon grow to understand that all we see is disconnected as the childs fairy tales now seen to us. There is no such thing as cause and effect and we shall come to Know of it....(Complete Works Vol. 7. Page 88).

Modern Physics and Vedanta
By Swamy Jitatmananda, Bharatiya
Vidya Bhavan, Bombay.

Causality or determinism in this world is as unreal as the relative Time-Space- World itself. Neils Bohr admitted that today Physicists feel the necessity of a final renuciation of the classical ideas of the causality and a radical revision of our attitudes towards the problem of physical reality.

ಪುರುಷರಲ್ಲಿಯಾಗಲಿ ಸ್ತ್ರೀಯರಲ್ಲಿಯಾಗಲಿ, ಪ್ರತಿಯೊಂದು ವ್ಯಕ್ತಿಯ ಪ್ರತಿಯೊಂದು ಕಾರ್ಯಕಲಾಪಗಳೂ ನಡೆ-ನುಡಿಗಳೂ ಆಲೋಚನಾದಿಗಳೂ ಯೋಗಭೋಗಗಳೂ ಆಯಾ ವ್ಯಕ್ತಿಯ ಪ್ರಬಲವಾದ ಪ್ರಾರಬ್ಧಕರ್ಮಾನುಗುಣವಾಗಿ ಮೊದಲೇ ಪೂರ್ಣವಾಗಿಯೂ ಅಬಾಧಿತವಾಗಿಯೂ ನಿಶ್ಚಿತವಾಗಿರುತ್ತವೆ-ಎಂಬಿದು ಪ್ರಾರಬ್ಧವಾದಿಗಳ ದೃಢವಾದ ಪ್ರತಿಪಾದನೆ. ಇದೇ ಪ್ರಾಚೀನವೂ ಪ್ರಮಾಣಭೂತವೂ ಶಾಸ್ತ್ರೀಯವೂ ಆದ ವಾದವೆಂದೂ ಇದೇ ಸರಿಯೆಂದೂ ಪ್ರಸಿದ್ಧ ವಿಜ್ಞಾನಿಯಾದ ಐನ್‌ಸ್ಟೀನ್ ಮಹಾಶಯನೂ ನಂಬಿದ್ದನು. ಮತ್ತು ಸಂದರ್ಭ ಬಂದಾಗಲೆಲ್ಲಾ ಅವನು ಪೂರ್ವನಿರ್ಧಾರಿತಫಲವುಳ್ಳ ಈ ಕಾರಣ-ಕಾರ್ಯನಿಯಮವೇ ಸಾರ್ವತ್ರಿಕವಾಗಿಯೂ ಸಾರ್ವಕಾಲಿಕವಾಗಿಯೂ ಸತ್ಯವೆಂದು ಸಮರ್ಥನೆಮಾಡಿ, ಎತ್ತಿಹಿಡಿದು ಪ್ರತಿಪಾದನೆಮಾಡುತ್ತಿದ್ದುದಲ್ಲದೆ, ಇದಕ್ಕೆ ವಿರುದ್ಧವಾದ 'ಕ್ವಾಂಟಂ' ಲೋಕದ ಅನಿಶ್ಚಿತತಾವಾದವನ್ನು ಸುಳ್ಳೆಂದು ತೋರಿಸಿ, ಅಂತಿಮವಾಗಿ ಕಾರ್ಯಕಾರಣನಿಯಮವೇ "ಕ್ವಾಂಟಂ" ಲೋಕದಲ್ಲಿ ಸಹ ತನ್ನ ಪ್ರಭುತ್ವವನ್ನು ನಡೆಸುತ್ತಿದೆಯೆಂಬುದನ್ನು ತನ್ನ ಪ್ರಯೋಗಗಳಿಂದ ತಾನು ಸಾಧಿಸಿ ತೋರಿಸುವದಾಗಿ ಪ್ರತಿಜ್ಞೆಮಾಡಿದ್ದ ವೀರಯೋಧನು ಐನ್‌ಸ್ಟೀನನು. ಇದರಂತೆ ಅವನು 1935 ರಲ್ಲಿ ಇಬ್ಬರು ಸಹಾಯಕ ವಿಜ್ಞಾನಿಗಳೊಡನೆ " ಇ. ಪಿ. ಆರ್. ಪ್ಯಾರಡಾಕ್ಸ್ " ಎಂಬ ಗಣಿತಶಾಸ್ತ್ರಕ್ಕೆ ಸಂಬಂಧಪಟ್ಟ (ಸಂಖ್ಯಾರೂಪ) ಒಂದು ತೋರಿಕೆಯ ವಿರೋಧದ ತತ್ತ್ವವನ್ನು ನಿರೂಪಿಸಿದನು. ಈ ಪ್ರತಿಪಾದನೆಯ ಮೂಲಕ ಐನ್‌ಸ್ಟೀನನು "ಕ್ವಾಂಟಂ" ವಾದದ ಅನಿಶ್ಚಿತತಾಸಿದ್ಧಾಂತವನ್ನು ತೀರಾ ಸುಳ್ಳೆಂದು ತೋರಿಸಲು ಪ್ರಯತ್ನಪಟ್ಟನು. ಆದರೆ, ಅವನ ನಿರೀಕ್ಷೆಗೆ ಪೂರಾ ವಿರುದ್ಧವಾಗಿ ಅವನ ಸಾಹಸವು ಆಧುನಿಕವಿಜ್ಞಾನಯುಗದಲ್ಲಿ ಚಿರಸ್ಮರಣೀಯವಾದ " ಬೆಲ್ಸ್‌ಥಿಯರಂ " ಎನ್ನುವ ಹೊಸದೊಂದು ಮಹತ್ತ್ವಪೂರ್ಣಸಂಶೋಧನೆಗೆ ಕಾರಣವಾಯಿತು. ಇದು ತಾತ್ತ್ವಿಕವಾಗಿಯೂ ವಿಚಾರಪೂರ್ವಕವಾಗಿಯೂ ಪ್ರಾಯೋಗಿಕವಾಗಿಯೂ " ಕ್ವಾಂಟಂ ವಾದದ " ಅನಿಶ್ಚಿತತಾಸಿದ್ಧಾಂತವೇ ಸರಿಯೆಂದೂ ಸತ್ಯವೆಂದೂ ಸಮರ್ಥನೆಮಾಡಿ ತೋರಿಸಿತು. ಒಂದು ವಿಶಿಷ್ಟಕಾರಣಕ್ಕೆ ಸರ್ವಕಾಲದಲ್ಲಿಯೂ ಸರ್ವದೇಶದಲ್ಲಿಯೂ (ಅಥವಾ ಪರಿಮಿತಕ್ಷೇತ್ರದಲ್ಲಿ) ಒಂದು ವಿಶಿಷ್ಟಫಲವೇ (ಪರಿಣಾಮವೇ) ಆಗುತ್ತದೆ-ಎಂಬಿದು ತಪ್ಪುಕಲ್ಪನೆ.

ಜಗತ್ತಿನ ಸೃಷ್ಟಿ-ಸ್ಥಿತಿ-ಲಯಗಳಿಗೆ ಕಾರಣವಾದ ಈಶ್ವರೀಶಕ್ತಿಯನ್ನು ಮಾಯೆಯೆಂದೂ ಪ್ರಕೃತಿಯೆಂದೂ "ಅಘಟಿತಘಟನಾ ಪಟೀಯಸೀ ಮಾಯಾ" ಮಾಯೆಯು ಅಘಟಿತ ಘಟನಾಶಕ್ತಿಯುಳ್ಳದ್ದೆಂದೂ ವೇದಾಂತದಲ್ಲಿ ಹೇಳಿದೆ. ಅಘಟಿತಘಟನಾಪಟುವಾದ ಶಕ್ತಿಯೆಂದರೆ, ಲೋಕದಲ್ಲಿ ಎಲ್ಲರೂ ಸಾಮಾನ್ಯವಾಗಿ ಯಾವದೊಂದು ಘಟನೆಯನ್ನು ತೀರಾ ಅಸಂಭವ-ಎಂದು ತಿಳಿದಿದ್ದಾರೋ

ಆದನ್ನೇ ಪೂರಾ ಸುಲಭವಾಗಿ ಸಾಧಿಸಿ ತೋರಿಸುವ ಶಕ್ತಿ. ಕಠೋರವಾದ ಕಾರಣ-ಕಾರ್ಯನಿಯಮವುಳ್ಳ ಈ ದೇಶ-ಕಾಲ-ನಿಮಿತ್ತರೂಪವಾದ ಈ ಜಗತ್ತಿನಲ್ಲಿ ಕಾರಣವಿಲ್ಲದಿದ್ದರೂ ಕಾರ್ಯವನ್ನೂ ಒಂದು ಕಾರಣಕ್ಕೆ ವಿಲಕ್ಷಣವೋ ವಿರುದ್ಧವೋ ಆದ ಕಾರ್ಯವನ್ನೂ ಮಾಡಿ ತೋರಿಸುವ ಶಕ್ತಿಯೇ ಈ ಮಾಯಾ ಶಕ್ತಿ. ಮತ್ತು ಒಂದು ಪ್ರಬಲವಾದ ಕಾರಣವಿದ್ದರೂ ಸಹ, ಈ ಶಕ್ತಿಯ ಪ್ರಭಾವದಿಂದ ಯಾವ ಕಾರ್ಯವೂ ಆಗದಿರಬಹುದು. ಸಾಮಾನ್ಯಯುಕ್ತಿಯಿಂದ ಇದನ್ನು ಒಪ್ಪುವದು ಕಷ್ಟವಾಗಬಹುದು; ಆದರೂ ಇದು ಮಾತ್ರ ಸತ್ಯ. 'ಅಘಟಿತಘಟನಾ ಪಟೀಯಸೀ ಮಾಯಾ' ಎನ್ನುವದು ವೇದಾಂತದ ಅತ್ಯಂತಪ್ರಾಚೀನವಾದ ವಾದವಾಗಿದೆ.

ಸ್ವಾಮಿ ವಿವೇಕಾನಂದರು ಈ ವಿಚಾರವನ್ನು ಹೀಗೆ ವಿವರಿಸುತ್ತಾರೆ: ಕಾರಣ-ಕಾರ್ಯಭಾವವೆಲ್ಲಾ ಕೇವಲ ಮಾಯೆ ಆಗಿದೆ. ಈ ಪ್ರಪಂಚದ ಎಲ್ಲಾ ಜೀವರ ವ್ಯವಹಾರ ವಿಲಾಸಗಳೂ ಚಿಕ್ಕ ಮಕ್ಕಳಿಗೆ ಅವರ ಅಜ್ಜಿ ಹೇಳುವ ಅಡಗೂಲಜ್ಜಿಯ ಕತೆಯಂತಿದೆ-ಎಂದು ನಾವು ತಿಳಿಯುವಷ್ಟು ನಮ್ಮ ತಿಳಿವಳಿಕೆ ಬೆಳೆಯಬಹುದು. ನಿಶ್ಚೃಷ್ಟವಾದ ಕಾರಣ-ಕಾರ್ಯಭಾವ ಎನ್ನುವದು ನಿಜವಲ್ಲ ಎನ್ನುವದನ್ನು ನಾವು ಸದ್ಯದಲ್ಲಿಯೇ ಕಂಡುಕೊಳ್ಳುತ್ತೇವೆ.

ಕಾರ್ಯ - ಕಾರಣಗಳ ನಿಶ್ಚಿತಸಿದ್ಧಾಂತವು ದೇಶ- ಕಾಲ- ನಿಮಿತ್ತಗಳ ಸಾಪೇಕ್ಷಜಗತ್ತಿಗೆ ಸಂಬಂಧಪಟ್ಟ ಹುಸಿತೋರಿಕೆ. ಕಾರ್ಯಕಾರಣಗಳಿಗೆ ಸಂಬಂಧಪಟ್ಟ ಹಿಂದಿನಕಾಲದವರ ಭಾವನೆಯನ್ನು ಅಂತಿಮವಾಗಿ ಪೂರಾ ಬಿಟ್ಟುಬಿಡಬೇಕೆಂದು ಈಗಿನ ವಿಜ್ಞಾನಿಗಳೆಲ್ಲಾ ಆಲೋಚಿಸುತ್ತಿದ್ದಾರೆಂದು ಪ್ರಸಿದ್ಧ ನೆಯಿಲ್ಸ್‌ಬೋರ್ ಎಂಬ ವಿಜ್ಞಾನಿಯು ಒಪ್ಪಿದ್ದಾರೆ. ಭೌತಿಕಜಗತ್ತು ಎಷ್ಟರ ಮಟ್ಟಿಗೆ ಸತ್ಯವೆಂಬ ವಿಷಯವನ್ನೂ ಸಮೂಲವಾಗಿ ಪುನರ್ವಿಮರ್ಶಿಸಬೇಕೆಂದೂ ವಿಜ್ಞಾನಿಗಳು ಹೇಳುತ್ತಾರೆ.

(ಮಾಡರ್ನ್ ಫಿಸಿಕ್ಸ್ ಅಂಡ್ ವೇದಾಂತಾ-ಜಿತಾತ್ಮಾನಂದ)

87. ಈ ಜಗತ್ತಿನ ಸ್ವಭಾವವೂ ಜೀವರ ಸ್ವಭಾವವೂ ಎಷ್ಟು ಚಂಚಲವೂ ಅಸ್ಥಿರವೂ ಅನಿಶ್ಚಿತವೂ ಅವಿಶ್ವಸನೀಯವೂ ಆದುದು-ಎಂಬುದಕ್ಕೆ ಶ್ರೀರಾಮಚಂದ್ರನ ವಿಲಕ್ಷಣವರ್ತನೆಯ ದೃಷ್ಟಾಂತಕ್ಕಿಂತಲೂ ಹೆಚ್ಚಿನ ಸಂಶಯಾತ್ಮಕವೂ ಸಮಸ್ಯಾತ್ಮಕವೂ ಆದುದು ಬೇರೆ ಯಾವದೂ ಸಿಕ್ಕಲಾರದು. ಅರಣ್ಯದಲ್ಲಿ ಮಾರೀಚನನ್ನು ಸಂಹಾರಮಾಡಿದ ರಾಮಚಂದ್ರನು, ಪತಿಯ ರಕ್ಷಣೆಗಾಗಿ ಸೀತೆಯಿಂದ ದೂಷಿಸಲ್ಪಟ್ಟು ದೂರೀಕರಿಸಲ್ಪಟ್ಟ ಲಕ್ಷ್ಮಣನೊಡನೆ, ಸೀತೆಯ ಸುರಕ್ಷಿತತೆಯ ಚಿಂತಾಭಯ ವಿಹ್ವಲತೆಯಿಂದ ತನ್ನ ಆಶ್ರಮಕ್ಕೆ ಧಾವಿಸಿ ಬಂದು,

ಸೀತೆಯನ್ನು ಕಾಣದೆ ಆಘಾತಹೊಂದಿ ಎಷ್ಟು ಪರಿಶೋಕಿಸಿದನು ಎಂಬುದು ರಾಮಾಯಣದ ಅರಣ್ಯಕಾಂಡದಲ್ಲಿ ವಿಸ್ತಾರವಾಗಿ ವರ್ಣಿತವಾಗಿದೆ :

ಯಾಂ ವಿನಾ ನೋತ್ಸಹೇ ವೀರ ಮುಹೂರ್ತಮಪಿ ಜೀವಿತುಮ್ ।
ಕ್ವ ಸಾ ಪ್ರಾಣಸಹಾಯಾ ಮೇ ಸೀತಾ ಸುರಸುತೋಪಮಾ ॥೫೮-೪॥

ಪತಿತ್ವಮಮರಾಣಾಂ ವಾ ಪೃಥಿವ್ಯಾಶ್ಚಾಪಿ ಲಕ್ಷ್ಮಣ ।
ತಾಂ ವಿನಾ ತಪನೀಯಾಭಾಂ ನೇಚ್ಛೇಯಂ ಜನಕಾತ್ಮಜಾಮ್ ॥೫॥

ಯದಿ ಜೀವತಿ ವೈದೇಹೀ ಗಮಿಷ್ಯಾಮ್ಯಾಶ್ರಮಂ ಪುನಃ ।
ಸುವೃತ್ತಾ ಯದಿ ವೃತ್ತಾ ಸಾ ಪ್ರಾಣಾಂಸ್ತ್ಯಕ್ಷ್ಯಾಮಿ ಲಕ್ಷ್ಮಣ ॥೯॥

ಯದಿ ಮಾಮಾಶ್ರಮಗತಂ ವೈದೇಹೀ ನಾಭಿಭಾಷತೇ ।
ಪುನಃ ಪ್ರಹಸಿತಾ ಸೀತಾ ವಿನಶಿಷ್ಯಾಮಿ ಲಕ್ಷ್ಮಣ ॥೧೦॥

ಹೃತಾ ಮೃತಾ ವಾ ನಷ್ಟಾ ವಾ ಭಕ್ಷಿತಾ ವಾ ಭವಿಷ್ಯತಿ ।
ನಿಲೀನಾಪ್ಯಥವಾ ಭೀರುರಥವಾ ವನಮಾಶ್ರಿತಾ ॥೬೦ ಸ-೮॥

ಯತ್ನಾನ್ಮೃಗಯಮಾಣಸ್ತು ನಾಸಸಾದ ವನೇ ಪ್ರಿಯಾಮ್ ।
ಶೋಕರಕ್ತೇಕ್ಷಣಃ ಶೋಕಾದುನ್ಮತ್ತ ಇವ ಲಕ್ಷ್ಯತೇ ॥೬೦-೧೦॥

ವೃಕ್ಷಾದ್ವೃಕ್ಷಂ ಪ್ರಧಾವನ್ ಸ ಗಿರೇಶ್ಚಾದ್ರಿಂ ನದಾನ್ನದೀಮ್ ।
ಬಭೂವ ವಿಲಪನ್ ರಾಮಃ ಶೋಕಪಂಕಾರ್ಣವಾಪ್ಲುತಃ ॥೧೧॥

ಅಶೋಕ ಶೋಕಾಪನುದ ಶೋಕೋಪಹತಚೇತಸಮ್ ।
ತ್ವನ್ನಾಮಾನಂ ಕುರು ಕ್ಷಿಪ್ರಂ ಪ್ರಿಯಾಸಂದರ್ಶನೇನ ಮಾಮ್ ॥೧೨॥

ಅಥವಾ ಮೃಗಶಾವಾಕ್ಷೀಂ ಮೃಗ ಜಾನಾಸಿ ಮೈಥಿಲೀಮ್ ।
ಮೃಗವಿಪ್ರೇಕ್ಷಣೀ ಕಾಂತಾ ಮೃಗೀಭಿಃ ಸಹಿತಾ ಭವೇತ್ ॥೨೩॥

ತಿಷ್ಠ ತಿಷ್ಠ ವರಾರೋಹೇ ನ ತೇಽಸ್ತಿ ಕರುಣಾ ಮಯಿ ।
ನಾತ್ಯರ್ಥಂ ಹಾಸ್ಯಶೀಲಾಸಿ ಕಿಮರ್ಥಂ ಮಾಮುಪೇಕ್ಷಸೇ ॥೨೭॥

ನೈವ ಸಾ ನೂನಮಥವಾ ಹಿಂಸಿತಾ ಚಾರುಹಾಸಿನೀ ।
ಕೃಚ್ಛ್ರಂ ಪ್ರಾಪ್ತಂ ಹಿ ಮಾಂ ನೂನಂ ಯಥೋಪೇಕ್ಷಿತುಮರ್ಹತಿ॥೨೯

ಇತ್ಯೇವಂ ವಿಲಪನ್ ರಾಮಃ ಪರಿಧಾವನ್ ವನಾದ್ವನಮ್ ।
ಕ್ವಚಿದುದ್ಭ್ರಮತೇ ವೇಗಾತ್ ಕ್ವಚಿದ್ವಿಭ್ರಮತೇ ಬಲಾತ್ ॥೩೬॥

ಕ್ವಚಿನ್ಮತ್ತ ಇವಾಭಾತಿ ಕಾಂತಾನ್ವೇಷಣತತ್ಪರಃ ।
ಸ ವನಾನಿ ನದೀಃ ಶೈಲಾನ್ ಗಿರಿಪ್ರಸ್ರವಣಾನಿ ಚ ॥೩೭॥

ಕಾನನಾನಿ ಚ ವೇಗೇನ ಭ್ರಮತ್ಯಪರಿಸಂಸ್ಥಿತಃ ॥
ತ್ವಯಾ ವಿರಹಿತಶ್ಚಾಹಂ ತ್ಯಕ್ಷ್ಯೇ ಜೀವಿತಮಾತ್ಮನಃ
ಇತೀವ ವಿಲಪನ್ ರಾಮಃ ಸೀತಾದರ್ಶನಲಾಲಸಃ ॥೬೧-೧೧॥

ತಂ ತತಃ ಸಾಂತ್ವಯಾಮಾಸ ಲಕ್ಷ್ಮಣಃ ಪ್ರಿಯಬಾಂಧವಃ ।
ಬಹುಪ್ರಕಾರಂ ಧರ್ಮಜ್ಞಃ ಪ್ರಶ್ರಿತಃ ಪ್ರಶ್ರಿತಾಂಜಲಿಃ ॥೬೦-೩೧॥

ಲಕ್ಷ್ಮಣ! ಯಾರನ್ನು ಅಗಲಿ ಅರಗಳಿಗೆಯೂ ನಾನು ಬದುಕಿರಲಾರೆನೊ, ದೇವಕನ್ಯೆಯಂತಿರುವ ಆ ನನ್ನ ಪ್ರಾಣಕಾಂತೆ ಎಲ್ಲಿ? ಕನಕಾಂಗಿಯಾದ ಜಾನಕಿಯು ನನ್ನೊಡನಿಲ್ಲದಿದ್ದರೆ, ಲಕ್ಷ್ಮಣ, ದೇವೇಂದ್ರಪದವಿಯು ಬಂದರೂ ನನಗೆ ಬೇಡ; ಭೂಲೋಕದ ಚಕ್ರವರ್ತಿಪದವಿಯೂ ಬೇಡ. (೫೮ ಸರ್ಗ ೫-೫) ವೈದೇಹಿಯು ಬದುಕಿರುವದು ನಿಜವಾದರೆ ಮಾತ್ರ ನಾನು ಆಶ್ರಮದೊಳಗೆ ಕಾಲಿಟ್ಟೇನು ; ಹಾಗಿಲ್ಲದೆ ಆ ಸುಶೀಲೆಯು ಮೃತಳಾಗಿದ್ದರೆ, ಲಕ್ಷ್ಮಣ, ನಾನು ಆತ್ಮಹತ್ಯೆಮಾಡಿಕೊಳ್ಳುವೆನು. (೯) ನಾನು ಆಶ್ರಮದ ಒಳಗೆ ಹೋದಾಗ, ನಗುಮುಖದ ಸೀತೆಯು ಬಂದು ಮಾತನಾಡಿಸದಿದ್ದರೆ- ಸತ್ತುಹೋಗುವೆನು, ಲಕ್ಷ್ಮಣ. (೧೦) ಸೀತೆಯನ್ನು ಯಾರಾದರೂ ಅಪಹರಿಸಿಕೊಂಡು ಹೋಗಿರಬಹುದೆ? ಅಥವಾ ಅವಳು ಸತ್ತೇಹೋಗಿರಬಹುದೆ? ಅವಳು ಎಲ್ಲಾದರೂ ಅಡಗಿಕೊಂಡಿರಬಹುದೆ? ರಾಕ್ಷಸರು ಅವಳನ್ನು ತಿಂದಿರಬಹುದೆ? ವಿನೋದಕ್ಕಾಗಿ ಅಡಗಿಕೊಂಡಿರಬಹುದೆ? ಅಥವಾ (ಒಬ್ಬಳೇ ಇರಲು ಹೆದರಿ, ನನ್ನನ್ನು ಹುಡುಕುತ್ತಾ) ಕಾಡಿನೊಳಗೆ ಬಂದುಬಿಟ್ಟಳೊ? (೬೦ ಸ. ೮)........ನೀರಿಗಾಗಿ ನದಿಗೆ ಹೋದಳೋ ಎಂದು ವಿಲಪಿಸುತ್ತಾ ಎಷ್ಟು ಹುಡುಕಿದರೂ ಸೀತೆಯು ಕಾಣಲಿಲ್ಲ. ಶೋಕದಿಂದ ಶ್ರೀರಾಮನ ಕಣ್ಣುಗಳು ಕೆಂಪಾದವು; ಅವನು ಹುಚ್ಚನಂತಾದನು. (೬೦ ಸ-೧೦) ಅನಂತರ ಅವನು ಮರದಿಂದ ಮರಕ್ಕೆ ಬೆಟ್ಟದಿಂದ ಬೆಟ್ಟಕ್ಕೆ ಹೊಳೆಯಿಂದ ಹೊಳೆಗೆ ಓಡುತ್ತಾ, ಸುತ್ತುತ್ತಾ ಹುಡುಕಿ ಸಾಕಾಯಿತು. ಶ್ರೀರಾಮನು ಶೋಕವೆಂಬ ಕೆಸರಿನ ಕಡಲಿನಲ್ಲಿ ಮುಳುಗಿಹೋದನು. (೧೧) ಆಯ್ಯೊ! ಅಶೋಕವೃಕ್ಷ! ಶೋಕವನ್ನು ಪರಿಹರಿಸುತ್ತೀಯೆಂದು ಹೆಸರುಗಳಿಸಿದ್ದೀಯೆ, ನಾನು ಶೋಕದಿಂದ ದಿಕ್ಕುಗಾಣದೆ ಹೋಗಿದ್ದೇನೆ; ನನ್ನ ಪ್ರಿಯೆಯನ್ನು ತೋರಿಸಿ, ನಿನ್ನಂತೆ ನನ್ನನ್ನೂ ಅಶೋಕನನ್ನಾಗಿ ಮಾಡು. (೧೭) ಕಾಡಿನಲ್ಲಿ ಮೃಗಗಳನ್ನು ಕಂಡಾಗ ರಾಮನು ಅವುಗಳನ್ನೂ ಕೇಳಿದನು; "ಎಲೈ ಹರಿಣವೆ! ಹರಿಣನೇತ್ರೆಯಾದ ಮೈಥಿಲಿಯನ್ನು ಬಲ್ಲೆಯ? ಅವಳು ನಿನ್ನಂತೆಯೇ ಚಂಚಲಾಕ್ಷಿ; ಹೆಣ್ಣುಜಿಂಕೆಗಳೊಡನೆ ಅವಳು ಆಡಲು ಹೋಗಿರಬಹುದೆ? (೨೩) ಏ ಚೆಲುವೆ! ನಿಲ್ಲು ನಿಲ್ಲು; ನನ್ನಲ್ಲಿ ನಿನಗೆ ಮರುಕ ಬೇಡವೆ? ನೀನು ಇಷ್ಟೊಂದು

ಹಾಸ್ಯಮಾಡುತ್ತಿರಲಿಲ್ಲ. ಸೀತೆ! ನನ್ನನ್ನೇಕೆ ಉಪೇಕ್ಷಿಸುತ್ತಿರುವೆ! (೨೭) ಅಯ್ಯೋ! ಅವಳು ಸೀತೆಯಲ್ಲ. ಅವಳನ್ನು ಯಾರೋ ಕೊಂದುಹಾಕಿರಬಹುದು; ಅವಳು ನಕ್ಕರೆ ಎಷ್ಟು ಚೆನ್ನಾಗಿ ಕಾಣುತ್ತಿತ್ತು! ಈ ಸಂಕಟದಲ್ಲಿ ನಾನು ತೊಳಲುತ್ತಿದ್ದರೂ ಆಕೆ ನನ್ನನ್ನು ಉಪೇಕ್ಷಿಸುವಳೆ? (೨೯) ಹೀಗೆ ಶ್ರೀರಾಮನು ಗೋಳಿಡುತ್ತಾ ವನದಿಂದವನಕ್ಕೆ ಧಾವಿಸುತ್ತಿದ್ದನು. ಕೆಲವು ಕಡೆ ಭ್ರಾಂತಿಯಿಂದ ಸೀತೆಯನ್ನು ಕಂಡಂತಾಗಿ ಓಡುತ್ತಿದ್ದನು; ಸೀತೆಯನ್ನು ಹೋಲುವ ಲತಾದಿಗಳನ್ನು ನೋಡಿ ಸೀತೆಯೆಂದು ಮರುಳಾಗುತ್ತಿದ್ದನು. ಅವನು ತನ್ನ ಕಾಂತೆಯನ್ನು ಅರಸುತ್ತಾ ಹುಚ್ಚನಂತಾದನು. ಅವನು ಒಂದೆಡೆಯೂ ನಿಲ್ಲದೆ ವನ, ನದಿ, ಬೆಟ್ಟ, ಬೆಟ್ಟದಲ್ಲಿ ಹರಿಯುವ ಹಳ್ಳ, ದುರ್ಗಮವಾದ ಅರಣ್ಯ-ಇವುಗಳಲ್ಲಿ ಅಲೆದಾಡಿದನು. (೩೬-೩೭) ಈ ರೀತಿಯಲ್ಲಿ ಶ್ರೀರಾಮನು ಸಕಲ ವನಪ್ರದೇಶಗಳನ್ನೂ ಬಿಡುವಿಲ್ಲದೆ ಬೇಗ ಬೇಗ ಹುಡುಕುತ್ತಿದ್ದನು; ಎಲ್ಲಿಯೂ ಅವನ ಆಶೆ ಫಲಿಸಲಿಲ್ಲ............“ಸೀತೆ, ನನ್ನನ್ನು ನೀನು ತ್ಯಜಿಸಿದರೆ, ನಾನು ನಿಶ್ಚಯವಾಗಿಯೂ ಪ್ರಾಣವನ್ನು ಬಿಡುವೆನು” ಎಂದು ಸೀತಾದರ್ಶನಕ್ಕಾಗಿ ಹಾತೊರೆಯುತ್ತಾ ಶ್ರೀರಾಮನು ವಿಲಪಿಸಿದನು. (೬೧ ಸ-೧೧)...........ಆಗ, ಭ್ರಾತೃವತ್ಸಲನಾದ ಲಕ್ಷ್ಮಣನು ಅಣ್ಣನನ್ನು ಬಹುವಿಧದಲ್ಲಿ ಸಂತೈಸತೊಡಗಿದನು. ಆ ಧರ್ಮಜ್ಞನು ಕೈಮುಗಿದುಕೊಂಡು-ಅಷ್ಟು ಹತಾಶನಾಗಬಾರದೆಂದು-ಶ್ರೀರಾಮನನ್ನು ವಿನಯದಿಂದ ಬೇಡಿಕೊಂಡನು. (೭೧ ಸ-೩೧)

ಹೀಗೆ ವಾಲ್ಮೀಕಿಗಳು ರಾಮಾಯಣದ ಅರಣ್ಯಕಾಂಡದಲ್ಲಿ, ಶ್ರೀರಾಮನಿಗೆ ಸೀತಾದೇವಿಯಲ್ಲಿದ್ದ ಅಸದೃಶವೂ ಅಸಾಧಾರಣವೂ ಆದ ಪ್ರೇಮವನ್ನೂ ಆಕೆಯ ವಿರಹದಿಂದ ರಾಮನಿಗುಂಟಾದ ಅಸಹನೀಯವೂ ಅತ್ಯುತ್ಕಟವೂ ದಾರುಣವೂ ಆದ ದುಃಖವನ್ನೂ ಸುಮಾರು ಮುನ್ನೂರು ಶ್ಲೋಕಗಳಿಂದ ವರ್ಣಿಸಿದ್ದಾರೆ. ಧರ್ಮಾತ್ಮನೂ ಸತ್ಯಸಂಧನೂ ಆದ ಶ್ರೀರಾಮನು ಲೋಕದಲ್ಲಿಯೇ ಅತ್ಯಂತ ಶ್ರೇಷ್ಠ ಪ್ರಾಮಾಣಿಕಗುಣವುಳ್ಳವನೆಂಬುದು ಸ್ವಾಭಾವಿಕ. ಅವನ ಯಾವ ಭಾವನೆಯಲ್ಲಿಯೂ ವರ್ತನೆಯಲ್ಲಿಯೂ ಎಳ್ಳಷ್ಟೂ ಕಪಟವಿಲ್ಲವೆನ್ನುವದೂ ಪ್ರಸಿದ್ಧ.

88. ಆದರೆ, ಶ್ರೀರಾಮನಿಂದ ರಾವಣನ ವಧೆಯೂ ಲಂಕೆಯಲ್ಲಿ ವಿಭೀಷಣನ ಪಟ್ಟಾಭಿಷೇಕವೂ ಆಗಿ, ಶ್ರೀರಾಮನ ಆದೇಶದಂತೆ ವಿಭೀಷಣನಿಂದ ಅಭ್ಯಂಗನಸ್ನಾನಾಲಂಕಾರಾದಿಗಳನ್ನು ಹೊಂದಿದ ಸೀತಾದೇವಿಯು ರಾಮನ ಎದುರಿಗೆ ಬಂದು, ಲಜ್ಜೆಯಿಂದಲೂ ಸಂಕೋಚದಿಂದಲೂ ಹರ್ಷಚಿತ್ತಳಾಗಿಯೂ ನಮ್ರಳಾಗಿ ನಿಂತಿರಲು, ರಾಮನು ತನ್ನ ಹಿಂದಿನ ಉತ್ಕಟಭಾವದ ಪ್ರೇಮ

ಪನ್ನೆಲ್ಲಾ ಮರೆತು, ಸೀತೆಯನ್ನು ಕುರಿತು ಕೋಪಾವೇಶದಿಂದ ಕಠೋರವಾದ ವಾಗ್ಬಾಣಗಳನ್ನು ಬಿಡುವದಕ್ಕೆ ತೊಡಗಿದನು :

ವಿದಿತಶ್ಚಾಸ್ತು ತೇ ಭದ್ರೇ ಯೋಽಯಂ ರಣಪರಿಶ್ರಮಃ ।
ಸ ತೀರ್ಣಃ ಸುಹೃದಾಂ ವೀರ್ಯಾನ್ನ ತ್ವದರ್ಥಂ ಮಯಾ ಕೃತಃ ॥
(೧೧೮ ಸ-೧೫)

ರಕ್ಷತಾ ತು ಮಯಾ ವೃತ್ತಮಪವಾದಂ ಚ ಸರ್ವಶಃ ।
ಪ್ರಖ್ಯಾತಸ್ಯಾತ್ಮವಂಶಸ್ಯ ನ್ಯಂಗಂ ಚ ಪರಿಮಾರ್ಜತಾ ॥೧೬॥

ಪ್ರಾಪ್ತಚಾರಿತ್ರಸಂದೇಹಾ ಮಮ ಪ್ರತಿಮುಖೇ ಸ್ಥಿತಾ ।
ದೀಪೋ ನೇತ್ರಾತುರಸ್ಯೇವ ಪ್ರತಿಕೂಲಾಸಿ ಮೇ ದೃಢಮ್ ॥೧೭॥

ತದ್ಗಚ್ಛ ಹ್ಯಭ್ಯನುಜ್ಞಾತಾ ಯಥೇಷ್ಟಂ ಜನಕಾತ್ಮಜೇ ।
ಏತಾ ದಶ ದಿಶೋ ಭದ್ರೇ ಕಾರ್ಯಮಸ್ತಿ ನ ಮೇ ತ್ವಯಾ ॥೧೮॥

ಕಃ ಪುಮಾನ್ ಹಿ ಕುಲೇ ಜಾತೋ ಸ್ತ್ರಿಯಂ ಪರಗೃಹೋಷಿತಾಮ್ ।
ತೇಜಸ್ವೀ ಪುನರಾದದ್ಯಾತ್ ಸುಹೃಲ್ಲೇಖ್ಯೇನ ಚೇತಸಾ ॥೧೯॥

ರಾವಣಾಂಕಪರಿಭ್ರಷ್ಟಾಂ ದೃಷ್ಟಾಂ ದುಷ್ಟೇನ ಚಕ್ಷುಷಾ ।
ಕಥಂ ತ್ವಾಂ ಪುನರಾದದ್ಯಾಂ ಕುಲಂ ವ್ಯಪದಿಶನ್ ಮಹತ್ ॥೨೦॥

ತದರ್ಥಂ ನಿರ್ಜಿತಾ ಮೇ ತ್ವಂ ಯಶಃ ಪ್ರತ್ಯಾಹೃತಂ ಮಯಾ ।
ನಾಸ್ತಿ ಮೇ ತ್ವಯ್ಯಭಿಷ್ವಂಗೋ ಯಥೇಷ್ಟಂ ಗಮ್ಯತಾಮಿತಃ ॥೨೧॥

ಇತಿ ಪ್ರವ್ಯಾಹೃತಂ ಭದ್ರೇ ಮಯೈತತ್ ಕೃತಬುದ್ಧಿನಾ ।
ಲಕ್ಷ್ಮಣೇ ಭರತೇ ವಾ ತ್ವಂ ಕುರು ಬುದ್ಧಿಂ ಯಥಾ ಸುಖಮ್ ॥೨೨॥

ಸುಗ್ರೀವೇ ವಾನರೇಂದ್ರೇ ವಾ ರಾಕ್ಷಸೇಂದ್ರೇ ವಿಭೀಷಣೇ ।
ನಿವೇಶಯ ಮನಃ ಸೀತೇ ಯಥಾ ವಾ ಸುಖಮಾತ್ಮನಃ ॥೨೩॥

ನ ಹಿ ತ್ವಾಂ ರಾವಣೋ ದೃಷ್ಟ್ವಾ ದಿವ್ಯರೂಪಾಂ ಮನೋರಮಾಮ್ ।
ಮರ್ಷಯೇತ ಚಿರಂ ಸೀತೇ ಸ್ವಗೃಹೇ ಪರಿವರ್ತಿನೀಮ್ ॥೨೪॥

ಈ ರಣಪರಿಶ್ರಮವೆಲ್ಲವೂ ನನ್ನ ಮಿತ್ರರ ಪರಾಕ್ರಮದಿಂದ ಫಲಿಸಿತು ; ಭದ್ರೇ, ಈ ಪರಿಶ್ರಮವು ನಿನಗೋಸ್ಕರವಾಗಿ ಅಲ್ಲ, ಎಂಬಿದು ನಿನಗೆ ತಿಳಿದಿರಲಿ ! ಸದಾಚಾರವನ್ನು ರಕ್ಷಿಸುವದಕ್ಕಾಗಿಯೂ ಎಲ್ಲೆಡೆಯೂ ನನಗೆ ಬರುವ ಅಪವಾದ ವನ್ನು ನಿರ್ಮೂಲಗೊಳಿಸುವದಕ್ಕಾಗಿಯೂ ವಿಶ್ವವಿಖ್ಯಾತವಾದ ನನ್ನ ವಂಶಕ್ಕೆ ಅಂಟುವ ಅಪಕೀರ್ತಿಯನ್ನು ವಿಧ್ವಂಸಗೊಳಿಸುವದಕ್ಕಾಗಿಯೂ ಈ ಪರಿಶ್ರಮ ವನ್ನು ವಹಿಸಿದೆನು ! (೧೫-೧೬ ; ೧೧೮ ಸರ್ಗ) ಪರಗೃಹವಾಸದಿಂದ ನಿನ್ನ

ಚಾರಿತ್ರ್ಯದಲ್ಲಿ ನನಗೆ ಸಂದೇಹ ಉಂಟಾಗಿದೆ! ನನ್ನೆದುರಿಗೆ ನಿಂತಿರುವ ನೀನು, ನೇತ್ರರೋಗಿಯ ಎದುರಿಗಿರುವ ದೀಪದಂತೆ, ಕಣ್ಣನ್ನು ಕೊರೆಯುತ್ತಿರುವೆ! (ನಿಜ! ರಾಮನ ಕೆಟ್ಟ ಭಾವನೆಯ ದೃಷ್ಟಿಗೆ ಬಂದಿರುವುದು ದುಷ್ಟರೋಗವೇ ಸರಿ! ಸೀತೆಯು ಯಾವಾಗಲೂ ದೀಪದಂತೆ ಪರಿಶುದ್ಧಳು; ಅಥವಾ ಕವಿಯ ಕಲ್ಪನೆಗೇ ಕ್ಯಾನ್ಸರ್ ರೋಗ ಬಂದಿದೆ. ಇದನ್ನು ಅಂಧಶ್ರದ್ಧೆ ಕಾಣಲಾರದು) ಆದ್ದರಿಂದ, ಎಲೌ ಜನಕರಾಜತನಯೆ! ಯಥೇಷ್ಟವಾಗಿ ಎಲ್ಲಿಗಾದರೂ ಹೋಗು; ಅನುಜ್ಞೆಯನ್ನು ಕೊಟ್ಟಿದ್ದೇನೆ. ಭದ್ರೆ, ಇದೋ ಹತ್ತು ದಿಕ್ಕುಗಳೂ ಇವೆ; ನಿನ್ನಿಂದ ನನಗಾಗಬೇಕಾದುದು ಏನೂ ಇಲ್ಲ. (೧೭-೧೮) ಉತ್ತಮ ಕುಲದಲ್ಲಿ ಜನಿಸಿದ ತೇಜಸ್ವಿಯಾದ ಯಾವ ಪುರುಷನು ತಾನೆ ಚಿರಕಾಲದ ವರೆಗೆ ಪರಗೃಹ ದಲ್ಲಿರುವ ಸ್ತ್ರೀಯನ್ನು ಒಳ್ಳೆಯ ಅಭಿಪ್ರಾಯದಿಂದ ಹೃತ್ಪೂರ್ವಕವಾಗಿ ಸ್ವೀಕರಿಸಿ ಯಾನು? ನೀನು ಈಗಲಷ್ಟೆ ರಾವಣನ ಮಡಿಲಿಂದ ಜಾರಿ ಬಂದಿರುವೆ; ಅವನ ಕೆಟ್ಟ ಕಣ್ಣಿಗೆ ಸಿಕ್ಕಿದವಳು. "ಮಹತ್ತರವಾದ ವಂಶ ನನ್ನದು" ಎಂದು ಹೇಳಿ ಕೊಳ್ಳುವ ನಾನು, ಮತ್ತೆ ನಿನ್ನನ್ನು ಹೇಗೆ ಸ್ವೀಕರಿಸಲಿ? (೧೯-೨೦) (ಇದನ್ನು ಬರೆದ ವಿಕಟಕವಿಯನ್ನು ಅಥವಾ ಕುಟಿಲರಾಮನನ್ನು ಭೂಮಿಯು ಬಾಯಿಕಳೆದು ಏಕೆ ನುಂಗಲಿಲ್ಲ ?!) ವಂಶದ ಹೆಸರನ್ನುಳಿಸುವದಕ್ಕಾಗಿ ನಿನ್ನನ್ನು ಜಯಿಸಿ ತಂದು, ಕೈಬಿಟ್ಟ ಕೀರ್ತಿಯನ್ನು ಮತ್ತೆ ಗಳಿಸಿದ್ದೇನೆ; ನಿನ್ನಲ್ಲಿ ನನಗೆ ಯಾವ ಆಸಕ್ತಿಯೂ ಇಲ್ಲ. ಮನಬಂದಕಡೆಗೆ ಇಲ್ಲಿಂದ ಹೊರಟುಹೋಗು! (೨೧) (ಹಿಂದೆ ಆರಣ್ಯಕಾಂಡದಲ್ಲಿ, ಮಾರೀಚನ ಸಂಹಾರಾನಂತರ ಸಂಕಟಕ್ಕೆ ಸಿಕ್ಕಿದ ಲಕ್ಷ್ಮಣನೊಡನೆ ಆಶ್ರಮಕ್ಕೆ ಧಾವಿಸಿದ ರಾಮನು, "ಸೀತೆಯನ್ನು ಕಾಣದಿದ್ದರೆ ಆತ್ಮಹತ್ಯೆಮಾಡಿಕೊಳ್ಳುತ್ತೇನೆ" – ಎಂದು ಹೇಳಿದ್ದ ಕಪಟಪ್ರೇಮದ ಫಲವೆ ಇದು !)

ಈ ಮಾತನ್ನು ನಿಶ್ಚಯಿಸಿಕೊಂಡೇ ನಾನು ಹೇಳಿದ್ದೇನೆ. ಬೇಕಾದರೆ ಲಕ್ಷ್ಮಣನನ್ನೋ ಭರತನನ್ನೋ ಜೀವನಕ್ಕಾಗಿ ಆಶ್ರಯಿಸು. ವಾನರೇಂದ್ರನಾದ ಸುಗ್ರೀವನಿದ್ದಾನೆ; ರಾಕ್ಷಸೇಂದ್ರನಾದ ವಿಭೀಷಣನಿದ್ದಾನೆ– ಯಾರನ್ನಾದರೂ ಆಶ್ರಯಿಸಿ ಜೀವಿಸು. ಅಥವಾ (ನಿನ್ನ ತವರುಮನೆಗಾದರೂ ಹೋಗು.) ಎಲ್ಲಿ ಸಂತೋಷವೋ ಅಲ್ಲಿರು. (೨೨-೨೩) ಸೀತೆ, ರಾವಣನು ನಿನ್ನ ಮನೋಹರ ವಾದ ಈ ದಿವ್ಯರೂಪವನ್ನು ನೋಡಿ ಅವನ ಗೃಹದಲ್ಲಿಯೇ ನೀನು ಸುತ್ತಾಡಿ ಕೊಂಡಿರುವಾಗ, ಬಹುಕಾಲದವರೆಗೆ ಅವನು ಸುಮ್ಮನಿದ್ದಾನೆ ?" ಎಂದು ಹೇಳಿ ದನು. (೨೪) (ಕವಿಯು ಶ್ರೀರಾಮನಿಂದ ಹೃದಯಶೂನ್ಯವೂ ಕಠೋರವೂ ಆದ ಈ ಮಾತುಗಳನ್ನಾಡಿಸಿ, ಹಿಂದೆ ಅವನೇ ವರ್ಣಿಸಿರುವ ಶ್ರೀ ರಾ ಮ ಚಂ ದ್ರ ನ

ಮಹದ್ವ್ಯಕ್ತಿತ್ವದ ದೈವೀಗುಣಗಳಿಗೇ ಅಕ್ಷಮ್ಯವಾದ ಅಪಚಾರವನ್ನು ಮಾಡಿದ್ದಾನೆ. ಸೀತಾದೇವಿಯು ಆಂಜನೇಯನ ಮೂಲಕ ಕಳಿಸಿದ್ದ ಚೂಡಾಮಣಿಯನ್ನು ನೋಡಿ, ಅದನ್ನು ಎದೆಗೆ ಒತ್ತಿಕೊಂಡು, ಗಳಗಳನೆ ಅತ್ತುಬಿಟ್ಟನು. ಲಕ್ಷ್ಮಣನೂ ಅಳತೊಡಗಿದನು; ಶ್ರೀ ರಾಮನು ಕಣ್ಣೀರುತುಂಬಿಕೊಂಡು, ಚೂಡಾಮಣಿಯನ್ನು ನೋಡುತ್ತಾ ಸುಗ್ರೀವನಿಗೆ ಅದರ ಅಸಾಧಾರಣಮೌಲ್ಯವನ್ನೂ ಚರಿತ್ರೆಯನ್ನೂ ತಿಳಿಸಿದನು (ಸುಂದರಕಾಂಡ ಸರ್ಗ ೬೬-೧-೨) ಆಂಜನೇಯನಿಂದ ಸೀತಾದೇವಿಯು ಹೇಳಿಕಳಿಸಿದ ಸಂದೇಶವನ್ನು ಕೇಳಿ, "ಔಷಧದಿಂದ ರೋಗಿಯು ಉಳಿದುಕೊಳ್ಳುವಂತೆ ಅವಳ ಮಾತಿನಿಂದಲೇ ನಾನು ಜೀವವನ್ನು ಹಿಡಿದುಕೊಳ್ಳುವೆನು; ಅಪ್ಪಾ ಹನುಮಂತ, ಮಧುರಸ್ವಭಾವದ ನನ್ನ ಪ್ರಿಯಳು ಮಧುರವಾಗಿ ಮಾತನಾಡತಕ್ಕವಳು; ನನ್ನನ್ನು ಅಗಲಿರುವ ಆ ಸುಂದರಿ ಏನೇನು ಹೇಳಿದಳು, ನನಗೆ ಹೇಳು. (ಸುಂದರಕಾಂಡ ೬೬ ಸ-೧೪-೧೫ ಆ ನೀಲನೇತ್ರೆಯನ್ನು ಬಿಟ್ಟು ಇನ್ನು ಒಂದು ಕ್ಷಣವೂ ನಾನು ಬದುಕಿರಲಾರೆನು. ....(ಸ. ೬೬-೧೦-೧೧) ಹೀಗೆ ಕಲ್ಲೂ ಕರಗಿಹೋಗಬಹುದಾದ ಸೀತೆಯ ಕರುಣಾಜನಕವಾದ ಶೋಕತಪ್ತವೃತ್ತಾಂತವನ್ನೂ ಪ್ರೇಮಳಸಂದೇಶವನ್ನೂ ಕೇಳಿ ಕರಗಿಹೋದ ಮನಸ್ಸುಳ್ಳ ರಾಮನು, ಯುದ್ಧಾನಂತರ ವಿಜಯೋತ್ಸವದಲ್ಲಿ ಸೀತೆಯು ಪ್ರತ್ಯಕ್ಷವಾಗಿ ಎದುರಿಗೆ ಬಂದು ನಿಂತಾಗ, ಹಿಂದಿನ ಪ್ರೇಮವನ್ನೆಲ್ಲಾ ಮರೆತು, ರಾಮನೇಕೆ ಕಗ್ಗಲ್ಲಿನಂತೆ ಕಠಿಣವೂ ಕಠೋರವೂ ಆದನು? ಅಥವಾ ಕವಿಯು (ಕಪಿಯು) ರಾಮನ ಹೃದಯವನ್ನೇ ಕಿತ್ತುಕೊಂಡು, ರಾಮನಿಗೂ ರಾಮಭಕ್ತರಿಗೂ ಏಕೆ ಇಷ್ಟು ಅನ್ಯಾಯಮಾಡಿದನು?

ತತಃ ಪ್ರಿಯಾರ್ಹಶ್ರವಣಾ ತದಪ್ರಿಯಂ
ಪ್ರಿಯಾದುಪಶ್ರುತ್ಯ ಚಿರಸ್ಯ ಮೈಥಿಲೀ ।
ಮುಮೋಚ ಬಾಷ್ಪಂ ಸುಭೃಶಂ ಪ್ರವೇಪಿತಾ ।
ಗಜೇಂದ್ರಹಸ್ತಾಭಿಹತೇವ ಸಲ್ಲಕೀ ॥ (೧೧೮ ಸ-೨೫)

89. ತನ್ನ ಪ್ರಿಯನ ಪ್ರಿಯವಾದ ನುಡಿಯನ್ನು ಕೇಳಬೇಕೆಂದು ಚಿರಕಾಲದಿಂದ ಹಾರೈಸುತ್ತಿದ್ದ ಮೈಥಿಲಿಯು ತನ್ನ ಪ್ರಿಯನಿಂದಲೇ ಅತ್ಯಂತ ಅಪ್ರಿಯವಾದ ನಿಷ್ಠುರವಚನವನ್ನು ಕೇಳಿ ಗಳಗಳನೆ ಕಣ್ಣೀರು ಹರಿಸಿದಳು. ಗಜರಾಜನ ಸೊಂಡಿಲಿಂದ ಬಡಿಯಲ್ಪಟ್ಟ ಸಲ್ಲಕೀಲತೆಯಂತೆ ಥರಥರನೆ ನಡುಗಿದಳು. (೨೫)

ಹೀಗೆ ರಾಘವನು ಕೋಪಾವೇಶದಿಂದ ಹೇಳಿದ ಮೈನವಿರೇಳಿಸುವ ಕಠೋರವಚನವನ್ನು ಕೇಳಿ ವೈದೇಹಿಯು ಅತ್ಯಂತ ದುಃಖಿತಳಾದಳು. ಪತಿಯ ಬಾಯಿಂದ ಎಂದೆಂದೂ ಕೇಳದಿದ್ದ ಕಠೋರವಾದ ಆ ಒರಟು ಮಾತುಗಳನ್ನು

ಅಲ್ಲಿ ನೆರೆದಿದ್ದ ಸಹಸ್ರಾರು ಮಹಾಜನರೆದುರಿಗೆ ಕೇಳಿದಾಗ ಮೈಥಿಲಿಯು ಲಜ್ಜೆಯಿಂದ ಕುಸಿದುಹೋದಳು. ಆ ಜನಕರಾಜನಂದಿನಿಯು ನಾಚಿಕೆಯಿಂದ ತನ್ನ ಗಾತ್ರಗಳಲ್ಲಿಯೇ ತಾನು ಅಡಗಿಕೊಳ್ಳುವಳೋ ಎಂಬಂತೆ ಕಂಡಳು. ರಾಘವನ ವಾಗ್ಬಾಣಗಳು ತನ್ನ ಮೈಯಲ್ಲಿ ನೆಟ್ಟವೋ ಎಂಬಂತೆ ತೆರಪಿಲ್ಲದೆ ಗಳಗಳನೆ ಅತ್ತು ಕಣ್ಣೀರಿನ ಕೋಡಿಯನ್ನು ಹರಿಸಿದಳು. (೧-೨-೩, ೧೧೯ ಸ)

90. ಆಮೇಲೆ ಕಣ್ಣೀರಿನಿಂದ ನೆನೆದ ಮುಖವನ್ನು ಒರೆಸಿಕೊಳ್ಳುತ್ತಾ ಬಿಕ್ಕುತ್ತಾ ತೊದಲುತ್ತ, ಮೆಲ್ಲನೆಯ ಧ್ವನಿಯಿಂದ ತನ್ನ ಪತಿಯನ್ನುದ್ದೇಶಿಸಿ ಸೀತೆಯು ಹೀಗೆಂದಳು: 'ಈ ರೀತಿಯಲ್ಲಿ ನನಗೆ ಆಡಬಾರದ ಮಾತನ್ನೇಕೆ ಆಡುವೆ ವೀರಾಗ್ರಣಿ? ಅಸಂಸ್ಕೃತನಾದ ಒಬ್ಬ ಸಾಮಾನ್ಯ ಮನುಷ್ಯ ಸಂಸ್ಕೃತಿ ಶೂನ್ಯಳಾದ ಒಬ್ಬ ಹೆಂಗಸಿಗೆ ನುಡಿಯುವಂತೆ ನುಡಿಯುತ್ತಿರುವೆಯಲ್ಲ? (೪-೫) ಓ ಮಹಾಬಾಹು ನೀನು ತಿಳಿದುಕೊಂಡಿರುವಂತೆ ನಾನಿಲ್ಲ! ನನ್ನ ಚಾರಿತ್ರ್ಯದ ಮೇಲೆ ಆಣೆ ಇಟ್ಟು ಹೇಳುತ್ತಿದ್ದೇನೆ; ನನ್ನನ್ನು ನಂಬು. ಕೀಳು ಹೆಂಗಸರ ವ್ಯವಹಾರವನ್ನು ಕಂಡು, ಸ್ತ್ರೀಜಾತಿಯನ್ನೇ ಶಂಕಿಸುವೆಯ? ಈ ಶಂಕೆಯನ್ನು ದೂರಮಾಡು. ನನ್ನ ನಡತೆಯನ್ನು ನೀನು ಕಂಡಿಲ್ಲವೆ? (೬-೭) ಓ ನನ್ನ ಸ್ವಾಮಿಯೆ, ನಾನು ದಿಕ್ಕಿಲ್ಲದೆ ಪರಾಧೀನಳಾದಾಗ ಆತನ ದೇಹಸ್ಪರ್ಶವು ನನಗಾಗಿರಬಹುದು. ಅದರಲ್ಲಿ ನನ್ನ ಇಚ್ಛೆ ಏನಿದೆ? **ಅದು ದೈವಾಯತ್ತವಾದ ಅಪರಾಧ.** ನನಗೆ ಅಧೀನವಾದದ್ದು ನನ್ನ ಹೃದಯ. ಅದು ಸದಾ ನಿನ್ನಲ್ಲಿಯೇ ನೆಲೆಸಿದೆ. ಈ ದೇಹವು ಪರಾಧೀನವಾದಾಗ ನಾನೇನು ಮಾಡಲು ಸಾಧ್ಯವಿತ್ತು? ದೇಹಸ್ಪರ್ಶವಾಗದಂತೆ ತಡೆಯಲು ನನಗೆ ಸಾಮರ್ಥ್ಯವಿತ್ತೆ? (೮-೯) ಆರ್ಯಪುತ್ರ! ನಾವೀರ್ವರೂ ಜೊತೆಗೆ ಬೆಳೆದವರು; ಚಿರಕಾಲದಿಂದ ಒಡನಾಡಿಗಳು. ನನ್ನ ಮಾನರಕ್ಷಣೆ ನಿನ್ನದು. (ಬಂಗಾರದ ಜಿಂಕೆಗೆ ನೀನೂ ಮೋಹಿತನಾಗಿ, ನನ್ನನ್ನು ಬಿಟ್ಟು ಏಕೆ ಓಡಿಹೋದೆ?) ಹೀಗಿದ್ದರೂ ನನ್ನ ಶೀಲವು ನಿನಗೆ ತಿಳಿದಿಲ್ಲವಾದರೆ, ಅಯ್ಯೋ, ನಾನು ಶಾಶ್ವತವಾಗಿ ನಿನ್ನಿಂದಲೇ ಹತಳಾದೆನು. (೧೦) ನನ್ನನ್ನು ಹುಡುಕುವದಕ್ಕಾಗಿ ಶೂರನಾದ ಹನುಮಂತನನ್ನು ಕಳಿಸಿದ್ದೆಯಲ್ಲ, ಆಗ ಲಂಕೆಯಲ್ಲಿದ್ದಾಗಲೇ ನನ್ನನ್ನು ಏಕೆ ತ್ಯಜಿಸಲಿಲ್ಲ? ಅವನು ಈ ಮಾತನ್ನು ತಿಳಿಸಿದ್ದರೆ ಆಗಲೇ- ಆ ವಾನರೋತ್ತಮನೆದುರಿಗೇ ನಾನು ಪ್ರಾಣವನ್ನು ಬಿಡುತ್ತಿದ್ದೆ. (೧೧-೧೨) ವ್ಯರ್ಥವಾಗಿ ಈ ರಣಪರಿಶ್ರಮವೂ ನಿನಗೆ ಪ್ರಾಪ್ತವಾಗುತ್ತಿರಲಿಲ್ಲ. ಪ್ರಾಣವನ್ನು ಮುಡುಪಿಟ್ಟು ಯುದ್ಧಮಾಡಬೇಕಾಗಿರಲಿಲ್ಲ. ನಿನ್ನ ಮಿತ್ರರಿಗೆ ನಿಷ್ಫಲವಾಗಿ ಕ್ಲೇಶವೂ ಸಂಭವಿಸುತ್ತಿರಲಿಲ್ಲ. ಪುರುಷೋತ್ತಮ! ಅಲ್ಪ ಮನುಷ್ಯನಂತೆ ಕೋಪವೊಂದನ್ನೇ ನೀನು ಆಶ್ರಯಿಸಿದ್ದೀಯೆ. 'ಹೆಂಗಸರು ಚಪಲರು' ಎಂದು ಸ್ತ್ರೀಸ್ವಭಾವವೊಂದನ್ನೇ ಮುಂದಿಟ್ಟು ಮಾತನಾಡುತ್ತಿದ್ದೀಯೆ (೧೨-೧೩

ಜನಕರಾಜನ ಮಗಳೆಂಬ ಹೆಸರಿನಿಂದ ವಸುಧಾತಳದಿಂದಲೇ ನಾನು ಜನಿಸಿರುವೆ ನೆಂಬುದನ್ನೂ ನೀನು ಗಣಿಸಲಿಲ್ಲ. ನನ್ನ ಶೀಲಸ್ವಭಾವಗಳೆಲ್ಲವನ್ನೂ ನೀನು ಬಲ್ಲವನಾದರೂ ಅದೊಂದನ್ನೂ ನೀನು ಎಣಿಸಲಿಲ್ಲ. (೧೫) ಬಾಲೆಯಾಗಿದ್ದ ನನ್ನನ್ನು ಬಾಲ್ಯದಲ್ಲಿಯೇ ಕೈಹಿಡಿದು ನೋಡುತ್ತಾ ಬಂದಿದ್ದೀಯೆ ; ಅಗ್ನಿಸಾಕ್ಷಿಯಾಗಿ ಹಿಡಿದ ಈ ಕೈ ನಿನಗೆ ಪ್ರಮಾಣವಾಗಲಿಲ್ಲ. ನನ್ನ ಭಕ್ತಿಯನ್ನೂ-ನನ್ನ ಶೀಲವನ್ನೂ ಒಂದನ್ನೂ ಲೆಕ್ಕಿಸದೆ, ಎಲ್ಲವನ್ನೂ ಹಿಂದಕ್ಕೆ ತಳ್ಳಿಹಾಕಿದ್ದೀಯೆ (೧೬) ಈ ರೀತಿಯಾಗಿ ಸೀತೆಯು ಬಿಕ್ಕಿಬಿಕ್ಕಿ ಅಳುತ್ತಾ ನುಡಿದಳು, ಕಣ್ಣೀರು ಹರಿಯುತ್ತಿತ್ತು. ಅನಂತರ ಲಕ್ಷ್ಮಣನ ಕಡೆಗೆ ತಿರುಗಿದಳು............(೧೭) ಮೈಥಿಲಿಯು 'ಲಕ್ಷ್ಮಣ, ನನಗೆ ಚಿತೆಯೊಂದನ್ನು ನಿರ್ಮಿಸಿಕೊಡು ; ನನ್ನ ಈ ವ್ಯಥೆಗೆ ಚಿತೆಯೇ ಔಷಧ. ಈ ಕೆಟ್ಟ ಅಪವಾದವನ್ನು ಹೊತ್ತು ನಾನು ಜೀವಿಸಿರಲಾರೆ. ನನ್ನ ಗುಣಗಳನ್ನು ಮೆಚ್ಚದೆ ನನ್ನ ಸ್ವಾಮಿಯು ಈ ಮಹಾಜನರೆದುರಿಗೆ ನನ್ನನ್ನು ಪರಿತ್ಯಜಿಸಿದ ಮೇಲೆ ನನಗಿರುವ ಗತಿ ಒಂದೇ- ಅಗ್ನಿಯಲ್ಲಿ ಬೀಳುವೆನು ! ಎಂದಳು (೧೮-೧೯)...........ಶ್ರೀರಾಮನು ತಲೆತಗ್ಗಿಸಿ ನಿಂತಿದ್ದನು. ವೈದೇಹಿಯು ಆತನನ್ನು ಮೆಲ್ಲನೆ ಪ್ರದಕ್ಷಿಣೆಮಾಡಿ ವಂದಿಸಿ, ಉರಿಯುತ್ತಿದ್ದ ಬೆಂಕಿಯ ಬಳಿಗೆ ಬಂದಳು. ಚಿತೆಯ ಬಳಿಯಲ್ಲಿ ನಿಂತು ದೇವತೆಗಳಿಗೂ ಬ್ರಾಹ್ಮಣರಿಗೂ ಮನಸ್ಸಿನಲ್ಲಿ ನಮಸ್ಕರಿಸಿದಳು (೨೧-೨೨) ಅನಂತರ ವೈಥಿಲಿಯು ಕೈ ಮುಗಿದುಕೊಂಡು ಯಜ್ಞೇಶ್ವರನ ಸಮೀಪದಲ್ಲಿ ನಿಂತು, "ನನ್ನ ಹೃದಯವು ಶ್ರೀರಾಮನನ್ನು ಬಿಟ್ಟು ಅರಗಳಿಗೆಯೂ ಕದಲದಿರುವದು ಸತ್ಯವಾದರೆ, ಲೋಕಸಾಕ್ಷಿಯಾದ ಅಗ್ನಿದೇವನು ಸರ್ವವಿಧದಲ್ಲಿಯೂ ನನ್ನನ್ನು ರಕ್ಷಿಸಲಿ ! (೨೩-೨೪) ....ಎಂದು ಹೇಳಿ ಅಗ್ನಿಯನ್ನು ಪ್ರದಕ್ಷಿಣೆಮಾಡಿ, ಯಾವ ಆತಂಕವೂ ಇಲ್ಲದೆ ಶಾಂತಮನಸ್ಸಿನಿಂದ ಅಗ್ನಿಯಲ್ಲಿ ಧುಮುಕಿದಳು (೨೭-೨೮)........... ದಿವ್ಯಾಭರಣಭೂಷಿತೆಯಾಗಿ ಅಪರಂಜಿ ಚಿನ್ನದ ಪುತ್ಥಳಿಯಂತಿದ್ದ ಜಾನಕಿಯು ಸರ್ವಲೋಕಗಳೆದುರಿಗೆ ಉರಿಯುವ ಅಗ್ನಿಜ್ವಾಲೆಯಲ್ಲಿ ಬಿದ್ದುದನ್ನು ನೋಡಿದವರೆಲ್ಲಾ "ಹಾ ಹಾ" ಎಂದು ಕೂಗಿಕೊಂಡರು................ರಾಕ್ಷಸರ ವಾನರರ ಮಧ್ಯದಲ್ಲಿ "ಹಾ ಹಾ" ಎಂಬ ವಿಪುಲವಾದ ಕೋಲಾಹಲಧ್ವನಿ ಎದ್ದಿತು. (೨೯-೩೧-೩೪) ವಿಷಣ್ಣನಾಗಿದ್ದ ಶ್ರೀರಾಮನು ಜನರ ಕೋಲಾಹಲಧ್ವನಿಯನ್ನು ಕೇಳಿ ಆವನ ಕಣ್ಣುಗಳಿಂದ ನೀರು ತುಳುಕಿತು. ಸ್ವಲ್ಪ ಕಾಲ ಏನೂ ತೋಚದೆ ಅವನು ಚಿಂತಾಕುಲನಾದನು. (೧೨೦ ಸ ೧)

91. ಅಷ್ಟರಲ್ಲಿ ಕುಬೇರ, ಯಮ, ದೇವೇಂದ್ರ, ವರುಣ, ಪರಮೇಶ್ವರ, ಬ್ರಹ್ಮ ಮುಂತಾದ ದೇವತೆಗಳು ಸೂರ್ಯಸಂಕಾಶವಾದ ವಿಮಾನವನ್ನೇರಿ ಶ್ರೀರಾಮನ ಸನ್ನಿಧಿಗೆ ಆಗಮಿಸಿದರು. (೧೨೦ ಸ ೨-೪) ಆ ದೇವತೆಗಳು ತಮ್ಮ ಕೈ

ಗಳನ್ನು ಹೇಳಿತ್ತಿ "ಶ್ರೀರಾಮ! ಸರ್ವಲೋಕಗಳ ಸೃಷ್ಟಿಕರ್ತನೂ ಸರ್ವಶ್ರೇಷ್ಠನೂ ಜ್ಞಾನಿಗಳಲ್ಲಿ ಅಗ್ರಗಣ್ಯನೂ ಆದವನು ನೀನು. ನಿನ್ನ ಧರ್ಮಪತ್ನಿಯಾದ ಸೀತೆಯು ಅಗ್ನಿಯಲ್ಲಿ ಪ್ರವೇಶಿಸುತ್ತಿರುವಾಗಲೂ ಹೀಗೆ ಉಪೇಕ್ಷಿಸುತ್ತಿರುವದೇಕೆ? (೫-೬)........... 'ಅಶ್ವಿನೀದೇವತೆಗಳು ನಿನ್ನ ಕಿವಿಗಳು, ಸೂರ್ಯಚಂದ್ರರು ನಿನ್ನ ಕಣ್ಣುಗಳು, ಲೋಕಗಳ ಸೃಷ್ಟಿಯ ಆದಿಯಲ್ಲಿಯೂ ಪ್ರಳಯದ ಕೊನೆಯಲ್ಲಿಯೂ ಶಾಶ್ವತವಾಗಿ ಉಳಿದಿರುವವನು ನೀನೊಬ್ಬನೇ. ಹೀಗಿರುವಾಗ ಪ್ರಾಕೃತನಾದ ಒಬ್ಬ ಸಾಮಾನ್ಯ ಮಾನವನಂತೆ ವೈದೇಹಿಯನ್ನು ಉಪೇಕ್ಷಿಸಬಹುದೆ?' ಎಂದರು. (೯-೧೦) ಹೀಗೆ ದೇವತೆಗಳು ಹೇಳಲು, ಲೋಕೇಶ್ವರನಾದ ಶ್ರೀರಾಮನು :

ಆತ್ಮಾನಂ ಮಾನುಷಂ ಮನ್ಯೇ ರಾಮಂ ದಶರಥಾತ್ಮಜಮ್ ॥೧೧॥
ಸೀತಾ ಲಕ್ಷ್ಮೀರ್ಭವಾನ್ ವಿಷ್ಣುರ್ದೇವಃ ಕೃಷ್ಣಃ ಪ್ರಜಾಪತಿಃ ॥೨೮॥

"ಇದೇನು ಹೀಗೆ ಹೇಳುವಿರಿ? ನಾನೊಬ್ಬ ಮಾನವನೆಂದೂ ದಶರಥಪುತ್ರನಾದ ರಾಮನೆಂದೂ ನನ್ನನ್ನು ನಾನು ತಿಳಿದುಕೊಂಡಿದ್ದೇನೆ" ಎಂದನು (೧೧)

ಸೀತೆಯೇ ಲಕ್ಷ್ಮಿ, ನೀನೇ ಮಹಾವಿಷ್ಣು, ಕೃಷ್ಣನೂ ಪ್ರಜಾಪತಿಯೂ ಆದ ಆದಿದೇವ ನೀನು, ರಾವಣನನ್ನು ವಧಿಸುವದಕ್ಕಾಗಿ ನಮ್ಮ ಪ್ರಾರ್ಥನೆಯಂತೆ ಮನುಷ್ಯದೇಹವನ್ನು ಧರಿಸಿ ಬಂದಿದ್ದೀಯೆ...........(೨೮-೨೯)

92. ಅಗ್ನಿದೇವನು ಪುರುಷಾಕೃತಿಯನ್ನು ಧರಿಸಿ, ತನ್ನ ನಿಜಸ್ವರೂಪದಿಂದ ಮೇಲೆದ್ದು ಜನಕರಾಜತನಯಳನ್ನು ಎತ್ತಿಕೊಂಡು ಚಿತೆಯಿಂದ ಹೊರಗೆ ಬಂದನು. (೧೨೧ ಸ-೧-೨).....ಹೊಂಬಣ್ಣದ ಸೀರೆಯನ್ನುಟ್ಟಿದ್ದ ಜಾನಕಿಯು ಮುಂಗುರುಳಿನ ಕೃಷ್ಣಕೇಶರಾಶಿಯಿಂದ ವಿರಾಜಿಸುತ್ತಿದ್ದಳು. ಮುಡಿದ ಹೂಗಳೂ ಧರಿಸಿದ ಒಡವೆಗಳೂ ಕಂದದೆ, ಕುಂದದೆ ಮೊದಲಿನಂತೆಯೇ ಇದ್ದವು. ಅಣುಮಾತ್ರವೂ ಕಳವಳಿಸದೆ ಧೀರೆಯಾಗಿದ್ದ ವೈದೇಹಿಯನ್ನು ಲೋಕಸಾಕ್ಷಿಯಾದ ಯಜ್ಞಪುರುಷನು ಎತ್ತಿಕೊಂಡು ಬಂದು ಶ್ರೀರಾಮನಿಗೆ ಒಪ್ಪಿಸಿ ಹೀಗೆಂದನು : 'ಶ್ರೀರಾಮ, ಈ ವೈದೇಹಿಯು ನಿನ್ನವಳು. ಇವಳನ್ನು ಪರಿಗ್ರಹಿಸು. ಇವಳಲ್ಲಿ ಯಾವ ದೋಷವೂ ಇಲ್ಲ. ಮಾತಿನಿಂದಾಗಲಿ, ಮನಸ್ಸಿನಿಂದಾಗಲಿ, ಸಂಕಲ್ಪದಿಂದಾಗಲಿ, ಕಣ್ಣಿನ ನೋಟದಿಂದಾಗಲಿ ಇವಳು ನಿನ್ನನ್ನು ಮೀರಿ ನಡೆದವಳಲ್ಲ. ಸದಾಚಾರನಿರತೆಯಾದ ಈ ಸುಶೀಲೆಯು ನಿನ್ನನ್ನು ಎಂದೂ ಅತಿಕ್ರಮಿಸಲಿಲ್ಲ. (೫-೬) ಇವಳಲ್ಲಿ ಯಾವ ಕಳಂಕವೂ ಇಲ್ಲ. ಇವಳನ್ನು ಸ್ವೀಕರಿಸು. ಶ್ರೀರಾಮ, ತಿರುಗಿ ಒಂದು ಮಾತನ್ನೂ ಆಡಬೇಡ; ಇದು ನನ್ನ ಆಜ್ಞೆ! ಎಂದನು. (೧೦)

ಪ್ರತ್ಯಯಾರ್ಥಂ ತು ಲೋಕಾನಾಂ ತ್ರಯಾಣಾಂ ಸತ್ಯಸಂಶ್ರಯಃ ।
ಉಪೇಕ್ಷೇ ಚಾಪಿ ವೈದೇಹೀಂ ಪ್ರವಿಶಂತೀಂ ಹುತಾಶನಮ್ ॥೧೬॥

93. ಆದರೂ ಸತ್ಯವನ್ನೇ ನಂಬಿರುವ ನಾನು, ಸತ್ಯವು ಪ್ರಕಟವಾಗಲೆಂದು ಸುಮ್ಮನಿದ್ದೆನು. ವೈ ದೇ ಹಿ ಯು ಅಗ್ನಿಪ್ರವೇಶಮಾಡುವಾಗಲೂ, ಮೂರು ಲೋಕಗಳಿಗೆ ವಿಶ್ವಾಸವು ಮೂಡಲೆಂದು ಸುಮ್ಮನಿದ್ದೆನು. (೧೬)

94. ವೇ|| ಬ್ರ|| ಶ್ರೀ ರಂಗನಾಥಶರ್ಮರು ಅತ್ಯಂತಸುಂದರವಾಗಿಯೂ ಮಧುರವಾಗಿಯೂ ಕನ್ನಡಿಸಿರುವ ವಾಲ್ಮೀಕಿರಾಮಾಯಣಕ್ಕೆ ಘನವಾದ ವಿಮರ್ಶಾತ್ಮಕ ಮುನ್ನುಡಿಯನ್ನು ಬರೆದಿರುವ ಪ್ರಸಿದ್ಧ ಮಾನ್ಯ ಡಾ|| ಶ್ರೀ ಡಿ.ವಿ.ಜಿ. ಇವರು ಈ ಪ್ರಸಂಗದಲ್ಲಿ ಶ್ರೀರಾಮನ ನಡೆವಳಿಕೆಯ ವಿಚಾರದಲ್ಲಿ ತಮ್ಮ ಪೂರ್ಣ ಅಸಮ್ಮತಿಯನ್ನು ಸೂಚಿಸಿ, ಗಂಭೀರ ಭಾ ಷೆ ಯ ಲ್ಲಿ ಬರೆದಿರುವದೇನೆಂದರೆ ; "**ಪ್ರತ್ಯಯಾರ್ಥಂ ತು ಲೋಕಾನಾಮ್**" ಸರ್ಗ ೧೨೧-೧೬ "ಲೋಕಕ್ಕೆ ನಂಬಿಕೆಯುಂಟಾಗಬೇಕೆಂದು ರಾಮನು ಹಾಗೆ ಮಾಡಿದನಂತೆ ! ಈ ಸಬೂಬು ನನ್ನ (ಡಿ.ವಿ.ಜಿ.) ಮನಸ್ಸಿಗೆ ಕುಂಟುಸಬೂಬಾಗಿ ಕಾಣುತ್ತದೆ. ಶ್ರೀರಾಮನ ಬಾಯಿಂದ ಹೀಗೆ ಆಡಿಸಿದವರು ವಾಲ್ಮೀಕಿಮಹರ್ಷಿಗಳೋ ಅಥವಾ ಬೇರೊಬ್ಬ ರಾಮಭಕ್ತರಾದ ಕವಿಗಳೋ ಎಂದು ನನ್ನ ಮನಸ್ಸಿನಲ್ಲಿ ಶಂಕೆ ಹುಟ್ಟುತ್ತದೆ. ಅದು ಹೇಗಾದರಿರಲಿ. ಕಥೆಯ ಸಮಾಪ್ತಿಯೇನೋ ಚೆನ್ನಾಗಿದೆ'.

"ಮಹಾದೇವನೂ ದೇವಾಧಿದೇವತೆಗಳೂ..........ರಾಮನ ನಡವಳಿಕೆಯ ವಿಷಯದಲ್ಲಿ ಅಸಮಾಧಾನವನ್ನು ಸೂಚಿಸಿದರು :

ಉಪೇಕ್ಷಸೇ ಚ ವೈದೇಹೀಂ ಮಾನುಷಃ ಪ್ರಾಕೃತೋ ಯಥಾ
(ಸರ್ಗ ೧೨೦-೧೦)

"ಪ್ರಾಕೃತನಾದ ಒಬ್ಬ ಸಾಮಾನ್ಯ ಮಾನವನಂತೆ ವೈದೇಹಿಯನ್ನು ಉಪೇಕ್ಷಿಸಬಹುದೆ ?– ಎಂದರು. ಇದಕ್ಕೆ ರಾಮನು "**ಪ್ರತ್ಯಯಾರ್ಥಂ ತು ಲೋಕಾನಾಂ........**" ಎಂಬ ಕುಂಟುನೆಪದಿಂದ ಉತ್ತರವನ್ನು ಕೊಟ್ಟನು.

95. ಮಾನ್ಯ ಶ್ರೀ ಡಿ.ವಿ.ಜಿ. ಇವರ ರಾಮಾಯಣದ ಮುನ್ನುಡಿಯಿಂದ

ರಾಮನ ಮನಃಪ್ರತಿವರ್ತನೆ

(ರಾವಣನ ವಧೆಯಾದ ಅನಂತರ) ಸೀತೆಯನ್ನು ನೋಡಿದಾಗ ಶ್ರೀರಾಮನು ಧ್ಯಾನಾರೂಢನಾಗಿದ್ದನಂತೆ. ಏನೇನನ್ನೋ (ಅವನು) ಯೋಚಿಸುತ್ತಿದ್ದ. ಸೀತೆಯು ಬಂದದ್ದನ್ನು ಕೇಳಿದಾಗ ರಾಮನ ಮನಸ್ಸಿನಲ್ಲಿ ಏನಾಯಿತು? ವಾಲ್ಮೀಕಿಗಳು ಹೇಳುತ್ತಾರೆ :

ಹರ್ಷೋ ದೈನ್ಯಂ ಚ ರೋಷಶ್ಚ ತ್ರಯಂ ರಾಘವಮಾವಿಶತ್ ।
ಸರ್ಗ ೧೧೬ ಶ್ಲೋ ೧೬

ರಾಮನ ಪ್ರತಿಭಾವನೆ ಒಂದಲ್ಲ; ಎರಡಲ್ಲ; ಮೂರು : ಹರ್ಷ, ದೈನ್ಯ, ರೋಷ. ೧) ಹರ್ಷ ಬಂತು, ಸರಿ. ಸೀತೆಯನ್ನು ಕಂಡದ್ದಾಯಿತು. ರಾವಣನನ್ನು ವಧಿಸಿದ್ದಾಯಿತು; ಋಷಿಗಳಿಗೆ ಕೊಟ್ಟಿದ್ದ ವಚನವನ್ನು ನಡೆಸಿದ್ದಾಗಿತ್ತು.

೨) ದೈನ್ಯವೇಕೆ? ವಂಚನೆಗೆ ತುತ್ತಾದೆನಲ್ಲ! ದೈವದ ಎದುರಿನಲ್ಲಿ ದುರ್ಬಲನಾದೆನಲ್ಲ! ಮತ್ತೊಬ್ಬರ ಸಹಾಯವನ್ನು ಅಪೇಕ್ಷಿಸಬೇಕಾಯಿತಲ್ಲ! ಬಹುಕಾಲ ತನ್ನ ಕೈ ಸಾಗದೆಹೋಯಿತಲ್ಲ! ಹೀಗೆ.

೩) ರೋಷ. ಯಾರ ಮೇಲೆ? ದೈವದ ಮೇಲೆ, ವಿಧಿಯ ಮೇಲೆ; ಯಾರಮೇಲೆಂದು ಈಗ ನಿಷ್ಕರ್ಷೆಯಾಗಿ ಹೇಳುವಂತಿಲ್ಲ. ಅದು ಮೂಕ ರೋಷ; ಹೆಸರಿಲ್ಲದ ರೋಷ. ಲೋಕಾನುಭವವುಳ್ಳವರು ಅದರ ಸ್ವಭಾವವನ್ನು ಗುರುತಿಸಬಲ್ಲರು................

ಸೀತಾತಿರಸ್ಕಾರ :

ಯಾರ ಮೇಲೆ ಕ್ರೋಧ? ಸೀತೆಯ ಮೇಲೆಯೆ? ಹಾಗೆಂದು ಆಕೆಯನ್ನು ಬಾಯಿಬಿಟ್ಟು ಆಕ್ಷೇಪಿಸಲು ರಾಮನಿಗೆ ಕಾರಣವಿಲ್ಲ. ಹಾಗೆ ಮಾಡಲು ಆತನಿಗೆ ಬಾಯಿಲ್ಲ. ಆದರೂ ಏನೋ ಕೋಪ. ನಿಷ್ಠುರವಾದ ಮಾತನ್ನಾಡುತ್ತಾನೆ.

(ಈ ರಣಪರಿಶ್ರಮವೆಲ್ಲ ನಿನಗೋಸ್ಕರವಾಗಿ ಅಲ್ಲ ಎಂಬಿದು ನಿನಗೆ ತಿಳಿದಿರಲಿ!
(ಸರ್ಗ ೧೧೮–೧೫)

ಏನು ನಿಷ್ಠುರ ಇದು! ಅಲ್ಲಿಗೆ ಮುಗಿಯಲಿಲ್ಲ; ರಾಮನ ರೇಗಾಟ, ಆ ರೋಷ ತನ್ನಷ್ಟಕ್ಕೆ ತಾನೇ ಬೆಳೆಯಿತು; ಬೆಳೆಯುತ್ತ ಬೆಳೆಯುತ್ತ ಕಠೋರವಾಯಿತು; ಮೈಮೇಲೆ ಸ್ಮೃತಿ ತಪ್ಪಿತೆಂದೆನಿಸುವಷ್ಟು ಬೆಳೆಯಿತು. ಆಗ ಹೊರಟಿತು ರಾಮಮುಖದಿಂದ ಇಂಥ ಕ್ರೂರವಾದ ವಾಗ್ಬಾಣಪರಂಪರೆ : (ಸರ್ಗ ೧೧೮–೧೭–೨೦, ೨೨–೨೩ ಇತ್ಯಾದಿ).

........ಇಂಥದು ಕೋಪದ ಸ್ವಭಾವ; ಅದು ಬಂದಾಗ ಕಾರ್ಯಕಾರಣ ವಿವೇಕ ನುಣುಚಿಕೊಂಡು ಹೋಗಿಬಿಡುತ್ತವೆ. ಆದದ್ದರಿಂದಲೇ ಮಹರ್ಷಿಗಳು ಕೋಪವನ್ನು **ದೈವವೆಂದೆಣಿಸಿದರು.**

ನಮಸ್ತೇ ರುದ್ರ ಮನ್ಯವ........

96. ಈ ಗ್ರಂಥದ ಮುಖ್ಯ ವಿಷಯ : ಪ್ರಾರಬ್ಧ–ಪುರುಷಪ್ರಯತ್ನ ರಾಮಾಯಣದಲ್ಲಿ ಬರುವ ಮುಖ್ಯ ವಿಷಯಗಳ ಈ ವಿಸ್ತಾರವಾದ ನಿರೂಪಣೆಯು ಜಗನ್ನಾಟಕದಲ್ಲಿ ಮೊದಲಿಂದ ಕೊನೆಯವರೆಗೂ ಗುಪ್ತವಾಗಿ ಹರಿಯುತ್ತಾ ಮೆರೆಯುತ್ತಾ ಮೊರೆಯುತ್ತಾ ಇರುವ ಅತ್ಯಂತಪ್ರಬಲವೂ ಅದೃಶ್ಯವೂ ಆದ ದೈವ (ಪ್ರಾರಬ್ಧ) ಶಕ್ತಿಯ ಆಟವನ್ನೂ ಕಾಟವನ್ನೂ ಹೂಟವನ್ನೂ (envious scheming) ಇದಕ್ಕೆ ವಿರುದ್ಧವಾದ ಪೌರುಷಶಕ್ತಿಯ ಪ್ರಕಟವಾದ ಸೆಣಸಾಟವನ್ನೂ ಪೇಚಾಟವನ್ನೂ ಹೋರಾಟವನ್ನೂ ನಾವು ಉದ್ದಕ್ಕೂ ಅತಿ ಸೂಕ್ಷ್ಮ ದೃಷ್ಟಿಯಿಂದ ಗಮನಿಸಿ, ಗುರುತಿಸಿ, ಗೌರವಿಸಬೇಕು. ವಾಲ್ಮೀಕಿಮಹರ್ಷಿಗಳು ಶ್ರೀರಾಮಚಂದ್ರನನ್ನು ಸರ್ವಶಕ್ತನಾದ ಭಗವಂತನ ಅವತಾರವೆಂದೂ ಮನುಷ್ಯ ಲೋಕದಲ್ಲಿಯೇ ಅತ್ಯಂತ ಶ್ರೇಷ್ಠ ಸದ್ಗುಣಸಂಪನ್ನನೆಂದೂ ಅದ್ವಿತೀಯಪರಾಕ್ರಮ ಶಾಲಿಯೆಂದೂ ಸೀತಾದೇವಿಯೂ ಶ್ರೀರಾಮನಿಗೆ ಸಮನಾದ, ಮೆಚ್ಚಾದ ದೈವೀ ಶಕ್ತಿಯೆಂದೂ ವರ್ಣಿಸಿದ್ದಾರೆ. ಸರ್ವೋತ್ತಮ ಸಜ್ಜನರಾದ ಇಂಥಾ ಸೀತಾ ರಾಮರು ಸಹ, ದುಷ್ಟಮಂಥರೆಯ ದುಷ್ಪ್ರೇರಣೆಗೆ ವಶಳಾದ ಕೈಕೇಯಿಯ ಕುತಂತ್ರಕ್ಕೂ ಮಾರೀಚರಾಕ್ಷಸನ ಮಾಯಾವಂಚನೆಗೂ ಬಲಿಯಾದ ಕರುಣಾಜನಕ ಕಥಾಕಲಾಪದ ಓಟದಲ್ಲಿ ನಾವು ಉದ್ದಕ್ಕೂ ದೈವದುರ್ವಿಪಾಕದ ವೈಪರೀತ್ಯವನ್ನೇ ಸಮರ್ಥವಾದ ಅಂತಸ್ಸೂತ್ರವನ್ನಾಗಿ ಗುರುತಿಸಬಹುದು. ದೈವಶಕ್ತಿಯ ವಿಲಾಸದಲ್ಲಿ ಅನುಕೂಲಗತಿಯೂ ಇದೆ; ಪ್ರತಿಕೂಲಮತಿಯೂ ಇದೆ. ದೈವದ ಅನುಕೂಲಗತಿಯಲ್ಲಿ ಯಾವ ಸಮಸ್ಯೆಯೂ ಇಲ್ಲ; ಸಂಕಟವೂ ಇಲ್ಲ; ಎಲ್ಲಾ ಸಂದೇಹಗಳೂ ಸಮಸ್ಯೆಗಳೂ ಸಂಕಷ್ಟಗಳೂ ಮೆರೆಯುವದೂ ಉರಿಯುವದೂ ಪ್ರತಿಕೂಲದೈವದ ದುರ್ಗತಿಯಲ್ಲಿಯೇ ಸರಿ. ಆದರೆ ಪೌರುಷಶಕ್ತಿಯ ಪ್ರಚೋದನೆಗೂ ಪ್ರಕಾಶಕ್ಕೂ ಪ್ರಭಾವವಿಜೃಂಭಣೆಗೂ ಪ್ರತಿಕೂಲದೈವದ ಉಗ್ರಪ್ರತಿಭಟನೆಯೇ ಕಾರಣವಾಗುತ್ತದೆ.

ಮನುಷ್ಯಲೋಕದಲ್ಲಿಯೇ ಎಲ್ಲದರಲ್ಲಿಯೂ ಅತ್ಯಂತ ಶ್ರೇಷ್ಠನೆಂದೂ ಸತ್ಯಸಂಧನೆಂದೂ ಅತ್ಯಂತ ಪ್ರಾಮಾಣಿಕನೆಂದೂ ಖ್ಯಾತನಾದ ಶ್ರೀರಾಮಚಂದ್ರನಿಗೆ ಸೀತಾದೇವಿಯಲ್ಲಿದ್ದ ಪರಮೋತ್ಕಟಪ್ರೇಮವೇ ನಿಷ್ಕಾರಣವಾಗಿ, (ರಾವಣ ಸಂಹಾರಾನಂತರ) ಅತ್ಯಂತ ತೀವ್ರದ್ವೇಷವಾಗಿಯೂ ರೋಷವಾಗಿಯೂ ಪ್ರತಿವರ್ತನೆಯಾಗುವದನ್ನು ವಿಚಾರಮಾಡಿದರೆ, ಆ ಮಹಾತ್ಮನ ಸ್ವಭಾವದಲ್ಲಿಯೂ ತೋರಿಕೊಂಡ ಅಸ್ಥಿರತೆಯೂ ಅನಿಶ್ಚಿತತೆಯೂ ಅವಿಶ್ವಸನೀಯತೆಯೂ ವಿಸ್ಮಯವನ್ನುಂಟುಮಾಡುತ್ತದೆಯಲ್ಲದೆ ನಿರಾಶೆಯನ್ನೂ ಹುಟ್ಟಿಸುತ್ತದೆ.

97. ಈ ಲೋಕಾನುಭವವನ್ನೇ ಸೂಚಿಸುವ ಮತ್ತು ಸಮರ್ಥಿಸುವ ಇನ್ನೊಂದು ಉದಾಹರಣೆಯೂ ಇದೆ :

ಅಶೋಕವನದಲ್ಲಿದ್ದ ಸೀತೆಯು ರಾವಣೇಶ್ವರನ ವಶಳಾಗಬೇಕೆಂದು ಆತನಿಂದ ಪ್ರೇರಿತರಾದ ರಾಕ್ಷಸಿಯರು ಆ ಕೆಯನ್ನು ನಿರ್ಬಂಧಪಡಿಸುತ್ತಿದ್ದುದಕ್ಕಾಗಿ, ಸೀತೆಯು ಬಹುವಿಧವಾಗಿ ಶೋಕಿಸಿ, ನಿರಾಶೆಯಿಂದ ರೋದಿಸುತ್ತಾ, ನೇಣು ಹಾಕಿಕೊಂಡು ಪ್ರಾಣತ್ಯಾಗಮಾಡಲು ಪ್ರಯತ್ನವಾಡುತ್ತಿದ್ದಾಗ ಆಕೆಯು ತನ್ನಲ್ಲಿಯೇ ಚಿಂತಿಸುವದೇನೆಂದರೆ :

ಅನನ್ಯದೇವತ್ವಮಿಯಂ ಕ್ಷಮಾ ಚ ।
ಭೂಮೌ ಚ ಶಯ್ಯಾ ನಿಯಮಶ್ಚ ಧರ್ಮೇ ॥
ಪತಿವ್ರತಾತ್ವಂ ವಿಫಲಂ ಮಮೇದಂ ।
ಕೃತಂ ಕೃತಘ್ನೇಷ್ವಿವ ಮಾನುಷಾಣಾಮ್ ॥
(ಸುಂದರಕಾಂಡ ಸರ್ಗ ೨೮-೧೨ ಶ್ಲೋ॥)

ಮೋಘೋ ಹಿ ಧರ್ಮಶ್ಚರಿತೋ ಮಯಾಯಂ ।
ತಥೈಕಪತ್ನೀತ್ವಮಿದಂ ನಿರರ್ಥಮ್ ॥
ಯಾ ತ್ವಾಂ ನ ಪಶ್ಯಾಮಿ ಕೃಶಾ ವಿವರ್ಣಾ ।
ಹೀನಾ ತ್ವಯಾ ಸಂಗಮನೇ ನಿರಾಶಾ ॥೨೮-೧೩॥

ಅಹಂ ತು ರಾಮ ತ್ವಯಿ ಜಾತಕಾಮಾ ।
ಚಿರಂ ವಿನಾಶಾಯ ನಿಬದ್ಧಭಾವಾ ॥
ಮೋಘಂ ಚರಿತ್ವಾಥ ತಪೋವ್ರತಂ ಚ ।
ತ್ಯಕ್ಷ್ಯಾಮಿ ಧಿಗ್ಜೀವಿತಮಲ್ಪಭಾಗ್ಯಾ ॥೨೮-೧೫॥

ಪತಿಯನ್ನೇ ದೇವರೆಂದು ನಂಬಿ, ತಾಳ್ಮೆಯಿಂದ ನೆಲದ ಮೇಲೆ ಮಲಗುತ್ತಾ ಧರ್ಮದಲ್ಲಿ ಶ್ರದ್ಧೆಯನ್ನಿಟ್ಟು ಪಾತಿವ್ರತ್ಯವನ್ನು ಪಾಲಿಸಿಕೊಂಡು ಬಂದುದೂ ವ್ಯರ್ಥವಾಗಿಹೋಯಿತೆ ? ಕೃತಘ್ನರಿಗೆ ಉಪಕಾರಮಾಡಿದಂತೆ ನಿಷ್ಫಲವಾಯಿತೆ? (೨೮-೧೨)

ನಾನು ಆಚರಿಸಿದ ಧರ್ಮವೂ ಪಾತಿವ್ರತ್ಯವೂ ಫಲವನ್ನು ಕೊಡಲಿಲ್ಲ; ಪುನಃ ರಾಮನೊಡನೆ ಸಮಾಗಮವಾಗುತ್ತದೆಯೆಂಬುದರಲ್ಲಿ ನಿರಾಶಳಾಗಿದ್ದೇನೆ. (೨೮-೧೩)

ನಾನಾದರೋ ನಿನ್ನಲ್ಲಿಯೇ ಅನುರಾಗವನ್ನಿಟ್ಟು ನಿಯಮವನ್ನು ಆಚರಿಸಿ, ಪ್ರಾಣವನ್ನು ಬಿಡುತ್ತಿದ್ದೇನೆ. ಎಲ್ಲವೂ ನಿಷ್ಫಲವಾಯಿತು. ಮಂದಭಾಗ್ಯಳಾದ

ನನಗೆ ಧಿಕ್ಕಾರ ! ನಾನು ಆತ್ಮಹತ್ಯೆಮಾಡಿಕೊಳ್ಳುವದೇ ಲೇಸು, ಆದರೆ ಇಲ್ಲಿ ವಿಷವನ್ನಾಗಲಿ, ಶಸ್ತ್ರವನ್ನಾಗಲಿ ನನಗೆ ಕೊಡುವವರು ಯಾರು? (೨೮-೧೫-೧೬

98. ಇವೇ ಮೊದಲಾದ ಮಹತ್ತ್ವಪೂರ್ಣದೃಷ್ಟಾಂತಗಳಿಂದ ಭೌತಿಕ ವಿಜ್ಞಾನಿಗಳ ಪರಮಾಣುಗರ್ಭಕ್ಕೆ ಸಂಬಂಧಪಟ್ಟ ಅನಿಶ್ಚಿತತಾವಾದದ 'ಕ್ವಾಂಟಂ' ಸಿದ್ಧಾಂತದ ಸತ್ಯವು ಮಾನವೋತ್ತಮರ ಜೀವನಕ್ಕೂ ಸ್ವಭಾವಕ್ಕೂ ಕೂಡ ಎಷ್ಟು ಚೆನ್ನಾಗಿ ಅನ್ವಯಿಸುತ್ತದೆ-ಎಂಬಿದು ಸ್ಪಷ್ಟವಾಗುತ್ತದೆ !

99. "ಸರ್ವಂ ಕ್ಷಣಿಕಂ ಕ್ಷಣಿಕಂ ಸರ್ವಂ ಶೂನ್ಯಂ ಶೂನ್ಯಂ" ಎಂಬ ಬುದ್ಧದೇವನ ಸೂಕ್ತಿಯಂತೆ ಅತ್ಯಂತ ಅಸ್ಥಿರವಾದ ಈ ಜಗತ್ತಿನಲ್ಲಿ ಪಾರಮಾರ್ಥಿಕವಿವೇಕದಿಂದ ನೋಡಿದಾಗ ಸಕಲವೂ ನಿಸ್ಸಾರವಾಗಿರುವದರಿಂದ ನಾವು (ಯಾರನ್ನೂ)ಯಾವುದನ್ನೂ ಶುಭಕರವೆಂದೂ ಸುಖಪ್ರದವೆಂದೂ ಎಂದೂ ಎಷ್ಟುಮಾತ್ರವೂ ನಂಬುವಂತೆಯೇ ಇಲ್ಲ. ಈ ಮೋಸದ ಮಾಯಾಪ್ರಪಂಚಕ್ಕೆ ಅವಿದ್ಯಾನಿಮಿತ್ತವಾಗಿ ಕಾರಣನೆನಿಸಿಕೊಂಡ ಪರಮಾತ್ಮನು ಮಾತ್ರ ಕೂಟಸ್ಥನೂ ನಿರ್ವಿಕಾರನೂ ಅಚಲನೂ ಅದ್ವಿತೀಯನೂ ಅಮೃತನೂ ಆಗಿರುವದರಿಂದ ಆ ಸರ್ವಾತ್ಮನು ಒಬ್ಬನೇ ಎಲ್ಲರ ವಿಶ್ವಾಸಕ್ಕೆ ಅರ್ಹನಾಗಿದ್ದಾನೆ !

100. ಶ್ರೀರಾಮನಂಥ ಮಹಾತ್ಮರು ಸಹ, ಕಾಲಾಂತರದಲ್ಲಿ ಹೆಚ್ಚಿನ ವಿವೇಕವು ಅವರಲ್ಲಿ ಜಾಗ್ರತವಾದಾಗ ಅವರು ತಮ್ಮ ಹಿಂದಿನ ಪ್ರಮಾದವರ್ತನೆಗಾಗಿ ಪಶ್ಚಾತ್ತಾಪಪಡುವಂತೆ ಆಗಲು ಯಾವ ಕುಟಿಲಶಕ್ತಿಯು ಕಾರಣವಾಗುವದೋ ಅದೇ ದೈವ, ವಿಧಿ, ವಿಧಿಲಿಖಿತ, ಪ್ರಾರಬ್ಧ, ಹಣೆಯಬರಹ, Fate, Destiny, pre determination, doom ಎಂಬ ಪುಣ್ಯನಾಮಗಳಿಂದ ಪ್ರಸಿದ್ಧವಾಗಿದೆ. ಇದು ಫಲಪ್ರಧಾನವಾದುದರಿಂದ ಫಲಪ್ರಾಪ್ತಿಯಿಂದಲೇ ಊಹಿಸಲ್ಪಡಬೇಕಾಗಿದೆ.

"ಯದಚಿನ್ತ್ಯಂ ತದ್ದೈವಮ್"

101. ಮುಂದೆ ಒದಗಬಹುದಾದ ಯಾವ ಘಟನೆಯು ಎಂಥಾ ಪ್ರಜ್ಞಾಶಾಲಿಗಳ ಊಹೆಗೂ ಸಹ ಮೊದಲೇ ನಿಲುಕುವದಿಲ್ಲವೋ ಆದಕ್ಕೆ ನಿಮಿತ್ತವಾದ ಆ ಅತಿರಹಸ್ಯಕಾರಣವೇ "ದೈವ" ಎನ್ನಿಸಿಕೊಳ್ಳುತ್ತದೆ-ಎಂದು ಶ್ರೀರಾಮನೇ ಹೇಳಿದ್ದಾನೆ. ಪ್ರತ್ಯಕ್ಷವಾದ ಎಲ್ಲಾ ಬಗೆಯ ಪುರುಷಪ್ರಯತ್ನಗಳೂ ಸಾಧನೆಗಳೂ ಸಾಹಸಗಳೂ "ಪೌರುಷ" ಎನ್ನಿಸಿಕೊಳ್ಳುತ್ತವೆ.

102. ಧೈರ್ಯೋತ್ಸಾಹಗಳಿಂದ ಕಾರ್ಯಪ್ರವೃತ್ತನಾ(ಳಾ)ಗಿ, ಗುರಿಯನ್ನು ಮುಟ್ಟುವವರೆಗೂ- ಉದ್ದೇಶಸಾಧನೆಯಾಗುವವರೆಗೂ- ಎಡೆಬಿಡದೆ ಶ್ರಮವಹಿಸಿ ಎಡರುತೊಡರುಗಳಿಂದ ಕಂಗೆಟ್ಟು ಹಿಮ್ಮೆಟ್ಟದಿರುವ, ಹರಿತವಾದ ವಿಚಾರಶಾಲಿ(ನಿ)ಯೇ ನಿಜವಾದ ಪೌರುಷಶಾಲಿ(ನಿ). ಪೌರುಷದಲ್ಲಿ ಲೌಕಿಕ, ಪಾರಲೌಕಿಕ ಮತ್ತು ಪಾರಮಾರ್ಥಿಕ ಎಂದು ಮೂರು ವಿಧಗಳಿವೆ; ಅಥವಾ ಲೌಕಿಕ ಮತ್ತು ವೈದಿಕ ಎಂದು ಎರಡು ಬಗೆಗಳಿವೆ. ವೈದಿಕಶ್ರದ್ಧೆಯಿಂದ ಉಪಾಸಕನ(ಳ) ಬ್ರಹ್ಮಲೋಕಪ್ರಾಪ್ತಿಯವರೆಗೂ ಪಾರಲೌಕಿಕಪೌರುಷ, ಬ್ರಹ್ಮನಿಷ್ಠೆಗಾಗಿ ಅಥವಾ ಆತ್ಮಾನುಭವಕ್ಕಾಗಿ-ಪರಮಪುರುಷಾರ್ಥವಾದ ಅಮೃತತ್ವಕ್ಕಾಗಿ-ವಿವೇಕಿಯೂ ಮುಮುಕ್ಷುವೂ ಆದ ಭಕ್ತನು ಮಾಡುವ ಆಧ್ಯಾತ್ಮಸಾಧನೆಯೇ ಪಾರಮಾರ್ಥಿಕಪೌರುಷ-ಎನಿಸುತ್ತವೆ.

ಉಜ್ಜ್ವಲವಿವೇಕಿಯಾದ ಪೌರುಷಶಾಲಿಯ ಪಾರಮಾರ್ಥಿಕಸಾಧನೆ ಏನೆಂದರೆ :

ಪರೀಕ್ಷ್ಯ ಲೋಕಾನ್ ಕರ್ಮಚಿತಾನ್ ಬ್ರಾಹ್ಮಣೋ
ನಿರ್ವೇದಮಾಯಾನ್ನಾಸ್ತ್ಯಕೃತಃ ಕೃತೇನ ।
ತದ್ವಿಜ್ಞಾನಾರ್ಥಂ ಸ ಗುರುಮೇವಾಭಿಗಚ್ಛೇತ್
ಸಮಿತ್ಪಾಣಿಃ ಶ್ರೋತ್ರಿಯಂ ಬ್ರಹ್ಮನಿಷ್ಠಮ್ ॥
(ಮುಂಡಕ ಉ: ೧-೨-೧೨)

ಕರ್ಮೋಪಾಸನೆಗಳಿಂದ ಸಾಧಿಸಬಹುದಾದ ಲೋಕಗಳನ್ನೆಲ್ಲಾ ಬಹುವಿಧ ಪ್ರಮಾಣಗಳಿಂದ ಪರೀಕ್ಷಿಸಿ, ಬ್ರಾಹ್ಮಣನು ಅವೆಲ್ಲವೂ ಅನಿತ್ಯವೆಂಬುದನ್ನೂ ದುಃಖಪೂರಿತವೆಂಬುದನ್ನೂ ಮನಗಂಡು ನಿಶ್ಚಯಿಸಿ, ಅವುಗಳಲ್ಲಿ ವೈರಾಗ್ಯವನ್ನು ಹೊಂದುವನು. ಕರ್ಮಜನ್ಯವಾದ ಸಾಧನಸಾಧ್ಯವಲ್ಲದ ಸ್ವಭಾವಸಿದ್ಧವೂ ನಿತ್ಯಸಿದ್ಧವೂ ಆದ ಆತ್ಮಸ್ವರೂಪವನ್ನು ಅರಿಯಲು ಮುಮುಕ್ಷುವಾದ ವಿವೇಕಿಯು ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಆದ ಸದ್ಗುರುವನ್ನೇ ಬಳಿಸಾರುವನು.

ಶಂಕರಭಾಷ್ಯ :........ಲೋಕಾನ್ ಸಂಸಾರಗತಿಭೂತಾನ್ ಅವ್ಯಕ್ತಾದಿಸ್ಥಾವರಾನ್ತಾನ್ ವ್ಯಾಕೃತಾವ್ಯಾಕೃತಲಕ್ಷಣಾನ್ ಬೀಜಾಙ್ಕುರವದಿತರೇತರೋತ್ಪತ್ತಿನಿಮಿತ್ತಾನ್ ಅನೇಕಾನರ್ಥಶತಸಹಸ್ರಸಙ್ಕುಲಾನ್ ಕದಲೀ-ಗರ್ಭವದಸಾರಾನ್ ಮಾಯಾಮರೀಚ್ಯುದಕಗನ್ಧರ್ವನಗರಾಕಾರಸ್ವಪ್ನಜಲಬುದ್ಬುದಫೇನಸಮಾನ್ ಪ್ರತಿಕ್ಷಣಪ್ರಧ್ವಂಸಾನ್ ಪೃಷ್ಠತಃ ಕೃತ್ವಾ ಅವಿದ್ಯಾಕಾಮದೋಷಪ್ರವರ್ತಿತಕರ್ಮಚಿತಾನ್ ಧರ್ಮಾಧರ್ಮನಿವರ್ತಿತಾನ್ ಇತ್ಯೇತತ್ ಬ್ರಾಹ್ಮಣಃ ಬ್ರಾಹ್ಮಣಸ್ಯೈವ ವಿಶೇಷತೋ

ಅಧಿಕಾರಃ ಸರ್ವತ್ಯಾಗೇನ ಬ್ರಹ್ಮವಿದ್ಯಾಯಾಮ್ ಇತಿ ಬ್ರಾಹ್ಮಣ-ಗ್ರಹಣಮ್ ॥ (ಮುಂ. ಉ- ಭಾ. ೧-೨-೧೨)

.........ಸಂಸಾರದ ಗತಿಗಳಾಗಿರುವ ಅವ್ಯಕ್ತವು ಮೊದಲಾಗಿ ಸ್ಥಾವರದ ವರೆಗಿರುವ ಅವ್ಯಾಕೃತ- ವ್ಯಾಕೃತಗಳು ಬೀಜಾಂಕುರಗಳಂತೆ ಒಂದಕ್ಕೊಂದು ಕಾರಣವಾಗಿವೆ. ಅತ್ಯಂತ ಉತ್ತಮಗತಿಯಾದ ಅವ್ಯಾಕೃತವು ವ್ಯಾಕೃತನಾಮ ರೂಪಗಳ ಬೀಜಸ್ಥಿತಿ. ಬಿಡಿಬಿಡಿಯಾಗಿರುವ ನಾಮರೂಪಗಳೆಲ್ಲ ವ್ಯಾಕೃತವು. ಸೃಷ್ಟಿಕರ್ತಬ್ರಹ್ಮನಿಂದ ಸ್ಥಾವರದ (ಮೋಟುಮರದ) ವರೆಗಿನ ಜನ್ಮಗಳೆಲ್ಲ ವ್ಯಾಕೃತರೂಪವಾಗಿರುವ ಕರ್ಮಫಲಗಳು. ಸತ್ತಮೇಲೆ ದಕ್ಷಿಣಮಾರ್ಗದಿಂದ ಕರ್ಮಿಯು (ಚಂದ್ರಲೋಕ) ಪಿತೃಲೋಕವನ್ನೂ ಕರ್ಮೋಪಾಸಕನು ದೇವ-ಲೋಕವನ್ನೂ ಕೇವಲ ಉಪಾಸಕನು ಉತ್ತರಾಯಣಮಾರ್ಗದಿಂದ ಬ್ರಹ್ಮಲೋಕ ವನ್ನೂ ಸೇರುತ್ತಾರೆ. ಜ್ಞಾನಪ್ರಾಪ್ತಿಯಿಲ್ಲವಾದರೆ ಬ್ರಹ್ಮಲೋಕದಿಂದಲೂ ಪುನರಾವರ್ತನೆ ಇರುವದರಿಂದ ಈ ಎಲ್ಲಾ ಲೋಕಗಳೂ ಅನಿತ್ಯಗಳೇ ಸರಿ. ವ್ಯಾಕೃತ-ಅವ್ಯಾಕೃತಗಳು, ಅಜ್ಞಾನವಿರುವವರೆಗೂ ಒಂದಕ್ಕೊಂದು ಕಾರಣ ವಾಗಿರುವದರಿಂದ ಇವುಗಳ ಬಿಡುವಿಲ್ಲದ ಸಂತತಪ್ರವಾಹವೇ ಸಂಸಾರವು.

ಈ ಲೋಕಗಳ ಸಂಸಾರಜೀವನವು ಎಷ್ಟೋ ಲಕ್ಷಸಂಖ್ಯೆಯ ಅನೇಕವಾದ ಅನರ್ಥಗಳಿಂದ ತುಂಬಿದೆ ; ಇದು ಬಾಳೆಯ ಮರದ ಗರ್ಭದಂತೆ ಸಾರವಿಲ್ಲದ್ದು ; ಇದು ಮಾಯಾರೂಪವಾದುದು ; ಇದು ಬಿಸಿಲುಕುದುರೆಯ (ಬಿಸಿಲ್‌ತೊರೆಯ) ನೀರಿನಂತೆಯೂ ಗಂಧರ್ವನಗರದಂತೆಯೂ ಕನಸಿನಂತೆಯೂ ಹು ಸಿ ತೋ ರಿ ಕೆ ಮಾತ್ರವೇ ನಿಜ; ಈ ಲೋಕಗಳೂ ಇಲ್ಲಿಯ ಜೀವನವೂ ನೀರುಗುಳ್ಳೆಗಳಂತೆಯೂ ನೀರಿನ ನೊರೆಯಂತೆಯೂ ಕ್ಷಣಕ್ಷಣಕ್ಕೂ (Split of a Second) ಬದ ಲಾಗುತ್ತಲೂ ನಾಶವಾಗುತ್ತಲೂ ಇ ರು ವ ವು . ಅವಿದ್ಯಾಕಾಮಕರ್ಮಗಳ (ಧರ್ಮಾಧರ್ಮಗಳ) ಫಲಗಳಾದ ಈ ಲೋಕಗಳ ಅನಿತ್ಯತ್ವವನ್ನೂ ಅಸಾರತ್ವ ವನ್ನೂ ದುಃಖಪೂರಿತತ್ವವನ್ನೂ ಬ್ರಾಹ್ಮಣನು ವಿವೇಕದಿಂದ ಮನಗಂಡು ಇವುಗಳ ಲ್ಲಿದ್ದ ಆಸಕ್ತಿಯನ್ನು ಬಿಟ್ಟು ವೈರಾಗ್ಯದಿಂದ ಇವನ್ನು ತ್ಯಾಗಮಾಡಬೇಕು.

ಇಂಥಾ ವಿವೇಕಿಯೂ ವಿರಕ್ತನೂ ಭಕ್ತನೂ ಆದ ಜಿಜ್ಞಾಸುವು ನಿತ್ಯಾನಂದ ರೂಪವಾದ ಮೋಕ್ಷಪ್ರಾಪ್ತಿಗಾಗಿ, ಶಮದಮದಯಾದಿಸದ್ಗುಣಸಂಪನ್ನನೂ ಶ್ರೋತ್ರಿಯನೂ ಬ್ರಹ್ಮನಿಷ್ಠನೂ ಜೀವನ್ಮುಕ್ತನೂ ಆದ ಸದ್ಗುರುಮಹಾತ್ಮನ ಸನ್ನಿಧಿಯನ್ನು ಫಲಪುಷ್ಪಾದಿಗಳಸಹಿತ (ಸಮಿತ್ಪಾಣಿಃ) ಆ ಸದ್ಗುರುವಿನಲ್ಲಿ "ಶಿಷ್ಯಸ್ತೇಽಹಂ ಶಾಧಿ ಮಾಂ ತ್ವಾಂ ಪ್ರಪನ್ನಮ್ ।" ಎಂದು ಶರಣಾಗತ ನಾಗಿ ಪ್ರಣಿಪಾತ-ಪರಿಪ್ರಶ್ನ-ಸೇವಾದಿಗಳಿಂದ ಆ ದಯಾಸಂಪನ್ನನ ಮನಸ್ಸನ್ನು

ಪ್ರಸನ್ನೀಕರಿಸಿಕೊಂಡು, ಉಪದೇಶವನ್ನು ಪಡೆಯಬೇಕು. ಉತ್ತಮಾಧಿಕಾರಿಯಾದ ಈ ಶಿಷ್ಯನು ಆಚಾರ್ಯನ ಬ್ರಹ್ಮಾನುಭವಪೂರ್ಣವಾದ ತತ್ತ್ವೋಪದೇಶವನ್ನು ಅತ್ಯಂತ ಶ್ರದ್ಧಾಭಕ್ತಿಗಳಿಂದ ಶ್ರವಣಮಾಡಿ, ಮನನ, ನಿದಿಧ್ಯಾಸನ-ಧ್ಯಾನಯೋಗಾದಿಗಳಿಂದ ಆ ತತ್ತ್ವಾರ್ಥದ ಪರಮಾತ್ಮಸ್ವರೂಪವನ್ನು ತನ್ನ ಅನುಭವಕ್ಕೆ ತಂದುಕೊಳ್ಳಬೇಕು. ಈ ಅಮೃತಾನುಭವದಿಂದ ಆ ಯೋಗಿಗೆ ತಾನು ನಿತ್ಯಮುಕ್ತನೆಂಬ ನಿಶ್ಚಯಜ್ಞಾನ ಉಂಟಾಗುತ್ತದೆ. ಈ ಅದ್ವೈತಜ್ಞಾನನಿಷ್ಠೆಯೂ ಮತ್ತು ಜಿಜ್ಞಾಸುಭಕ್ತರಲ್ಲಿ ಈ ತತ್ತ್ವಜ್ಞಾನದ ಪ್ರಸಾರವೂ ಸರ್ವೋತ್ತಮಪುರುಷಪ್ರಯತ್ನದ (ಪೌರುಷಶಕ್ತಿಯ) ಪರಮಸಾಫಲ್ಯವಾಗಿದೆ, ಇದೇ ಆ ಮಹಾತ್ಮನ ಅತ್ಯಂತ ಶುಭಕರವಾದ ವಿಧಿವಿಲಾಸದ ದೈವಾನುಗ್ರಹವೂ ಆಗಿದೆ !!

103. ಪ್ರಾರಬ್ಧ-ಪುರುಷಪ್ರಯತ್ನ-ಎಂಬೀ ಲೇಖನವಿಷಯದ ಜಟಿಲವೂ ಅತಿಸೂಕ್ಷ್ಮವೂ ಗಂಭೀರವೂ ಆದ ಇದುವರೆಗಿನ ವಿಚಾರದಿಂದ, ಪ್ರಾರಬ್ಧವು ಅತ್ಯಂತ ಶ್ರೇಷ್ಠ ತಪಸ್ವೀಯೋಗೀಶ್ವರನ ನಿಯಂತ್ರಣಕ್ಕೂ ಒಳಗಾದುದಲ್ಲವೆಂದೂ ಪ್ರಯತ್ನದಲ್ಲಿ ಮಾತ್ರ ಪುರುಷನಿಗೆ ಸೀಮಿತಸ್ವಾತಂತ್ರ್ಯವಿರುವದೆಂದೂ ಮನಗಂಡೆವು. ಈಗ, ಕೊನೆಯಲ್ಲಿ, ಪುರುಷನು ಪ್ರಯತ್ನಪೂರ್ವಕವಾಗಿ ಸಾಧಿಸಬಹುದಾದ, ಧರ್ಮ, ಅರ್ಥ, ಕಾಮ, ಮೋಕ್ಷಗಳೆಂಬ ಚತುರ್ವಿಧಪುರುಷಾರ್ಥಗಳಲ್ಲಿ ಪರಮಪುರುಷಾರ್ಥವಾದ ಮೋಕ್ಷಪ್ರಾಪ್ತಿಯ ಅಥವಾ ಅಮೃತತ್ವಪ್ರಾಪ್ತಿಯ ಸಂಕ್ಷೇಪವಿಚಾರವು ಮುಂದಿನ ಲೇಖನದಲ್ಲಿ ಪ್ರಸ್ತಾಪಿಸಲ್ಪಡುವದು. ಆದ್ದರಿಂದ ಈ ಪ್ರಕರಣವನ್ನು ಮುಕ್ತಾಯಗೊಳಿಸಬಹುದು.

ಅಮೃತತ್ವವು ಸ್ವಾಭಾವಿಕ

ಪ್ರಜ್ಞಾನಾಂಶುಪ್ರತಾನೈಃ ಸ್ಥಿರಚರನಿಕರವ್ಯಾಪಿಭಿರ್ವ್ಯಾಪ್ಯ ಲೋಕಾನ್ |
ಭುಕ್ತ್ವಾ ಭೋಗಾನ್ ಸ್ಥವಿಷ್ಠಾನ್ ಪುನರಪಿ ಧಿಷಣೋದ್ಭಾಸಿತಾನ್
ಕಾಮಜನ್ಯಾನ್ ||
ಪೀತ್ವಾ ಸರ್ವಾನ್ ವಿಶೇಷಾನ್ ಸ್ವಪಿತಿ ಮಧುರಭುಜ್ ಮಾಯಯಾ
ಭೋಜಯನ್ನೋ |
ಮಾಯಾಸಙ್ಖ್ಯಾ ತುರೀಯಂ ಪರಮಮೃತಮಜಂ ಬ್ರಹ್ಮ
ಯತ್ತನ್ನತೋಽಸ್ಮಿ ||೧||

ಅಮೃತವೆಂದರೆ ನಾಶವಿಲ್ಲದಿರುವದು, ಸಾವಿಲ್ಲದಿರುವದು, ಆದ್ದರಿಂದ ಹುಟ್ಟೂ ಇಲ್ಲದಿರುವ ಅಜವು; "ಅಮೃತಂ ಬ್ರಹ್ಮ" ಅಮೃತವೆಂದರೆ ಬ್ರಹ್ಮವೇ. ಶಾಸ್ತ್ರದೃಷ್ಟಿಯಿಂದ ಬ್ರಹ್ಮವು ಎರಡು ರೂಪಗಳನ್ನು ಪಡೆದಿದೆ. 1. ಉಪಾಸನಾ ವಿಷಯವಾದ ಅಪರಬ್ರಹ್ಮ; ಇದು ಕರ್ತೃತಂತ್ರವಾದುದು. ಇದರಿಂದ ಉಪಾಸನಾಫಲವಾಗಿ, ಬ್ರಹ್ಮಲೋಕದಲ್ಲಿ (ಮರಣಾನಂತರ) ಲಭಿಸುವದು ಅತ್ಯಂತ ದೀರ್ಘಕಾಲಜೀವನದ ಆಪೇಕ್ಷಿಕ ಅಮೃತತ್ವ.

ಬ್ರಹ್ಮದ ನಿಜವಾದ (ಅರೂಪವಾದ) ರೂಪವೇ ಪರಬ್ರಹ್ಮ. ಶಾಸ್ತ್ರಾಚಾರ್ಯರ ಉಪದೇಶಾನುಗ್ರಹದ ವಸ್ತುತಂತ್ರಜ್ಞಾನದಿಂದ ಉತ್ತಮಾಧಿಕಾರಿಗೆ ಇಲ್ಲಿಯೇ ಈಗಲೇ ಲಭಿಸುವ ಪರಮಾಮೃತತ್ವವೇ ಅಥವಾ ಪರಮಾಮೃತವೇ ಸದ್ಯೋಮುಕ್ತಿ; ಆತ್ಯಂತಿಕಮುಕ್ತಿ, ನಿರ್ವಾಣ (Final emancipation)

ಮುಕ್ತಿ ಅಥವಾ ಮೋಕ್ಷ ಎಂದರೆ ಬಿಡುಗಡೆ. ಏತರಿಂದ ಬಿಡುಗಡೆ ? ಅಜ್ಞಾನದಿಂದ ಅಥವಾ ಅವಿದ್ಯೆಯಿಂದ ಬಿಡುಗಡೆ ; ಅವಿದ್ಯೆ ಎಂದರೆ ಅಧ್ಯಾಸ; ಎಚ್ಚರದಲ್ಲಿ ತೋರುವ ದೇಹ, ಇಂದ್ರಿಯಗಳು, ಪ್ರಾಣ, ಅಂತಃಕರಣ–ಮೊದಲಾದ ಸ್ಥೂಲವಾದ ಉಪಾಧಿಗಳ ಅಭಿಮಾನದಿಂದ ತಾನೇ ಕರ್ತೃವೆಂದೂ ಭೋಕ್ತೃವೆಂದೂ ಪ್ರಮಾತೃ (ಜ್ಞಾತೃ) ವೆಂದೂ ಜೀವನಿಗೆ ಅಧ್ಯಾಸ ಅಥವಾ ಭ್ರಾಂತಿ (ತಪ್ಪು ತಿಳಿವಳಿಕೆ) ಉಂಟಾಗಿದೆ. ಹೀಗೆಯೇ ಕನಸಿನಲ್ಲಿ ತೋರುವ ದೇಹೇಂದ್ರಿಯಾದಿ ಸೂಕ್ಷ್ಮವಾದ ಉಪಾಧಿಗಳ ಅಭಿಮಾನದಿಂದಲೂ ಜೀವಾತ್ಮನಿಗೆ ಇವೇ ಕರ್ತೃತ್ವ–ಭೋಕ್ತೃತ್ವ–ಪ್ರಮಾತೃತ್ವಗಳ ಭ್ರಾಂತಿ ಉಂಟಾಗುತ್ತಿದೆ ಆದರೆ, ಗಾಢನಿದ್ರೆಯಲ್ಲಿ ಈ ಬಗೆಯ ಭ್ರಾಂತಿಗೆ ಆಶ್ರಯವಾದ ಮನಸ್ಸೇ ಇಲ್ಲವಾದುದರಿಂದ, ಬರಿಯ ಇರುವಿಕೆಯ–ಸನ್ಮಾತ್ರವಾದ–ಆನಂದರೂಪಬ್ರಹ್ಮವೇ–ಆತ್ಮವೇ ಇರುವದು ಎಲ್ಲರ ಅನುಭವದಲ್ಲಿಯೂ ಇದೆ.

........ಸುಷುಪ್ತಸ್ಥಾನ ಏಕೀಭೂತಃ ಪ್ರಜ್ಞಾನಘನಃ ಏವಾನನ್ದಮಯಃ ....ಚೇತೋಮುಖಃ ಪ್ರಾಜ್ಞಃ (ಮಾಂ. ಉಪ: ೫)

ಸಾರ್ವತ್ರಿಕವಾದ ಈ ಗಾಢನಿದ್ರೆಯ ನಿರ್ವಿಶೇಷವೂ ನಿರ್ವಿಕಲ್ಪವೂ ಅದ್ವಿತೀಯವೂ ಆದ ಅನುಭವವು ಎಲ್ಲರಿಗೂ ಎಲ್ಲಾ ಪ್ರಾಣಿಗಳಿಗೂ ಶುದ್ಧವಾದ ಅರಿವಿನ ಮೂಲಕವೇ ಆಗುತ್ತಿದೆ. ಆದ್ದರಿಂದಲೇ ಉಪನಿಷತ್ತಿನಲ್ಲಿ ಚೇತೋಮುಖಃ, ಪ್ರಾಜ್ಞಃ, ಪ್ರಜ್ಞಾನಘನಃ-ಎಂದು ಹೇಳಿದೆ. ಆದರೆ, ಸುಷುಪ್ತಿಯಲ್ಲಿ ಮನಸ್ಸು ಇಲ್ಲವಾದುದರಿಂದ ಮನೋವೃತ್ತಿರೂಪವಾದ ಬಿಡಿಬಿಡಿಯಾದ ಅರಿವಿಲ್ಲ; ಎಲ್ಲಾ ದೇಶಗಳಲ್ಲಿಯೂ ಎಲ್ಲಾ ಕಾಲಗಳಲ್ಲಿಯೂ ಇರುವ ಎಲ್ಲಾ ಜಾತಿ, ಮತ, ಧರ್ಮದವರಾದ ಸ್ತ್ರೀಯರಿಗೂ ಪುರುಷರಿಗೂ ಎಲ್ಲಾ ವಯಸ್ಸಿನವರಿಗೂ ಪಂಡಿತರಿಗೂ ಪಾಮರರಿಗೂ ಬೇರೆ ಪ್ರಾಣಿಗಳಿಗೂ ಸಹ, ಸಮಾನವಾಗಿ ಗಾಢನಿದ್ರೆಯು ಅನುಭವದಲ್ಲಿರುವದರಿಂದಲೂ ಈ ನಿರ್ವಿಕಲ್ಪಾನುಭವವು ಇಡಿಯಾದ ಬರಿಯ ಅರಿವಿನ ಮೂಲಕವೇ ಎಲ್ಲರಿಗೂ ಬರುತ್ತಿರುವದರಿಂದಲೂ ಎಲ್ಲರೂ ಇದನ್ನು ಸುಲಭವಾಗಿ ಒಪ್ಪಲೇಬೇಕು. ಹದಿನಾಲ್ಕು ಲೋಕಗಳಲ್ಲಿ ಎಲ್ಲರಿಗೂ, ಎಲ್ಲಾ ಪ್ರಾಣಿಗಳಿಗೂ ಸಮಾನವಾಗಿ, ಒಂದಾಗಿ, ಒಪ್ಪಾಗಿ ಇರುವದು ನಿರ್ವಿಶೇಷವಾಗಿರುವ ಗಾಢನಿದ್ರೆಯ ಈ ಒಂದು ಅನುಭವವೇ ಹೊರತು, ಬೇರೆ ಯಾವುದೂ ಇಲ್ಲ. ಇದು ಬರಿಯ ಇರವಿನ (ಇರುವಿಕೆ ಮಾತ್ರದ-ಸನ್ಮಾತ್ರದ) ಅನುಭವ. ಇದೇ ಎಲ್ಲರ-ಎಲ್ಲಾ ಪ್ರಾಣಿಗಳ-ಪದಾರ್ಥಗಳ-ಸಕಲ ಚರಾಚರಜಗತ್ತಿನ ಆತ್ಮ. ಇದು ಸ್ವಭಾವಸಿದ್ಧವಾದುದು, ನಿತ್ಯಸಿದ್ಧವಾದುದು. ಇದೇ ಬ್ರಹ್ಮ-ಆತ್ಮ.

ಆದರೆ, ಏಕೋ (ದುರ್ದೈವದಿಂದ) ಎಚ್ಚರವಾಗುವದರಿಂದ, ನಾನು ಮತ್ತು ಈ ಪ್ರಪಂಚ- ಎನ್ನುವ ದ್ವೈತವು ತೋರಿಕೊಂಡು, ಎಲ್ಲಾ ಬಗೆಯ ಸಂದೇಹಗಳಿಗೂ ಸಮಸ್ಯೆಗಳಿಗೂ ಸಂಘರ್ಷಗಳಿಗೂ ಸಂಕಟಗಳಿಗೂ ಆಗರವಾದ ಸಂಸಾರದುಃಖಕ್ಕೆ ಕಾರಣವಾಗಿದೆ. ಆದ್ದರಿಂದ ಈ ಕೆಟ್ಟ ಎಚ್ಚರವು ತನಗೆ ಮೂಲವಾದ ಆ ಪರಮಶಾಂತಿಧಾಮದ ನಿಜಸ್ವರೂಪವನ್ನು ತಿಳಿಯದೆ, ಅದಕ್ಕೆ ಗಾಢನಿದ್ರೆ-ಎಂಬ ಕೆಟ್ಟ ಹೆಸರನ್ನು ಕೊಟ್ಟಿದೆ. ಇಲ್ಲವಾದರೆ (ಈಗಲೂ) ಅದು ನಿರ್ವಿಕಾರವಾದ ಅದ್ವಿತೀಯ ಬ್ರಹ್ಮವೇ ನಿಜ.

ಎಚ್ಚರ-ಕನಸುಗಳ ಆಟ-ಕಾಟಗಳ, ಚೆಲ್ಲಾಟ-ಗುಲ್ಲಾಟಗಳ, ತಿಕ್ಕಾಟ ಕಚ್ಚಾಟಗಳ, ಹುಚ್ಚಾಟ-ಮೆಚ್ಚಾಟಗಳ, ಮುಚ್ಚಾಟ-ಬಿಚ್ಚಾಟಗಳ ನಾಟಕಕ್ಕೆ ಮನೋವೃತ್ತಿರೂಪ ಅರಿವಿನ ಕೋಲಾಹಲವೇ (ಹಾಲಾಹಲವೇ) ಚಿದ್ವಿಲಾಸವೇ ಕಾರಣವಾಗಿರುವದರಿಂದ, ಇವಕ್ಕೆ ಮೂಲವಾದ ಗಾಢನಿದ್ರೆಯ ಸನ್ಮಾತ್ರವೇ ಚಿನ್ಮಾತ್ರವೂ ಆಗಿದೆ. ಶಾಸ್ತ್ರಾಚಾರ್ಯರ ಉಪದೇಶಾನುಗ್ರಹದಿಂದ ಅತ್ಯಂತ

ಸೂಕ್ಷ್ಮವಾದ ಈ ಸಚ್ಚಿನ್ಮಾತ್ರದ ಅರ್ಥವಾದರೆ, "ಸಚ್ಚಿದಾನಂದರೂಪೋಽಹಂ ನಿರ್ವಿಕಲ್ಪಸ್ವಭಾವಸ್" ಎಂಬ ನೈಜವಾದ ಅನುಭವವಾಗುತ್ತದೆ. ಇದು ಶಾಸ್ತ್ರೋಕ್ತವೂ ಬುದ್ಧಿಪೂರ್ವಕವೂ ಆದ ವ್ಯಾಖ್ಯಾನವೇ ಹೊರತು, (ಅದ್ವೈತ ಜ್ಞಾನಂ ವೃತ್ತಿಮಾತ್ರಮ್) ಮನೋವೃತ್ತಿಮಾತ್ರವಾದ ಆತ್ಮಜ್ಞಾನದ ತಿರುಳಾದ ಆತ್ಮವಿಜ್ಞಾನವು (ಆತ್ಮಾನುಭವವು) ಸಾರ್ವತ್ರಿಕವಾದ ಗಾಢನಿದ್ರೆಯ ಸ್ವಾಭಾವಿಕ ಅನುಭವಕ್ಕೆ ಭಿನ್ನವಾದುದೇನಲ್ಲ. ಅದು ಸ್ವಾಭಾವಿಕವೂ ಸ್ವತಃ ಸಿದ್ಧವೂ ಅಲ್ಲದೆ, ಏನೊಂದು ಕಾರಣದಿಂದ ಬಂದುದಾದರೆ ಅದು ಅನಿತ್ಯವಾಗುತ್ತದೆ. ಜ್ಞಾತೃ- ಜ್ಞಾನ- ಜ್ಞೇಯಗಳಾದ ಮನೋವೃತ್ತಿಗಳ ತ್ರಿಪುಟಿಯಲ್ಲಿ, ಜ್ಞಾನವು ಜ್ಞಾತೃವನ್ನು ಆಶ್ರಯಿಸಿರುವದರಿಂದ, ಜ್ಞಾತೃತ್ವಾದಿಗಳು ಅವಿದ್ಯಾಕಲ್ಪಿತವಾದ ಹುಸಿತೋರಿಕೆಗಳೆಂದು ವಿವೇಕದಿಂದ ತಿಳಿದಾಗ, ಜ್ಞಾತೃತ್ವಾದಿಗಳು ಬಾಧಿತವಾಗಲು, (ಆತ್ಮನ) ಚಿನ್ಮಾತ್ರಸ್ವರೂಪವೇ ಉಳಿಯುತ್ತದೆ.

ಸುಷುಪ್ತವತ್ ಜಾಗ್ರತಿ ಯೋ ನ ಪಶ್ಯತಿ
ದ್ವಯಂ ತು ಪಶ್ಯನ್ನಪಿ ಚಾದ್ವಯತ್ವತಃ ।
ತಥಾಪಿ ಕುರ್ವನ್ನಪಿ ನಿಷ್ಕ್ರಿಯಶ್ಚ ಯಃ
ಸ ಆತ್ಮವಿತ್ ನಾನ್ಯ ಇತೀಹ ನಿಶ್ಚಯಃ ॥
೧೦-೧೩ (ಉಪದೇಶಸಾಹಸ್ರಿ)

ಸುಷುಪ್ತಿಯಲ್ಲಿ ಎಲ್ಲರಿಗೂ ನಿತ್ಯವೂ ಬರುತ್ತಿರುವ ಸ್ವಾಭಾವಿಕವಾದ ಅದ್ವಿತೀಯ ನಿರ್ವಿಕಲ್ಪಾನುಭವವು ಒಂದೇ ಸತ್ಯವೆಂಬ ನಿಶ್ಚಯಜ್ಞಾನದಿಂದ, ಎಚ್ಚರದಲ್ಲಿ ಕಾಣುವ ಅವಿದ್ಯಾಕಲ್ಪಿತವಾದ ನಾಮರೂಪಾದಿಗಳ ಹುಸಿತೋರಿಕೆಗೆ ಮೋಹಿತನಾಗದೆ, ತನ್ನ ದೇಹೇಂದ್ರಿಯಾದಿಗಳಿಂದ ಲೌಕಿಕ- ವೈದಿಕಗಳಾದ ಸಕಲಕರ್ಮಗಳನ್ನು ಮಾಡುತ್ತಿದ್ದರೂ ಸಹ ತಾನು ಪ್ರಮಾತೃವಾಗಲಿ, ಕರ್ತೃವಾಗಲಿ, ಭೋಕ್ತೃವಾಗಲಿ ಅಲ್ಲದ ನಿಷ್ಕ್ರಿಯವಾದ ಪ್ರಜ್ಞಾನಘನ ಆತ್ಮವೇ ತಾನು-ಸತ್ಯವೆಂಬ ನಿಜಾನುಭವವು ಯಾರಿಗಿರುವದೋ ಇಂಥವರೇ ಆತ್ಮಜ್ಞಾನಿಗಳಲ್ಲದೆ, ಬೇರೆಯವರಲ್ಲ.

ಆತ್ಮಜ್ಞಾನಿಯ ದೃಢಾನುಭವವು ಹೇಗಿರುವದೆಂದರೆ :

ಪೂರ್ವಸಿದ್ಧಕರ್ತೃತ್ವಭೋಕ್ತೃತ್ವವಿಪರೀತಂ ಹಿ ತ್ರಿಷ್ವಪಿ ಕಾಲೇಷು ಅಕರ್ತೃತ್ವ ಅಭೋಕ್ತೃತ್ವಸ್ವರೂಪಂ ಬ್ರಹ್ಮಾಹಮಸ್ಮಿ ನೇತಃ ಪೂರ್ವಮಪಿ ಕರ್ತಾ ಭೋಕ್ತಾ ವಾ ಅಹಮಾಸಂ ನೇದಾನೀಂ ನಾಪಿ ಭವಿಷ್ಯತ್ಕಾಲೇ ಇತಿ ಬ್ರಹ್ಮವಿದವಗಚ್ಛತಿ । ಏವಮೇವ ಚ ಮೋಕ್ಷ ಉಪಪದ್ಯತೇ । ಅನ್ಯಥಾ ಹಿ ಅನಾದಿಕಾಲಪ್ರವೃತ್ತಾನಾಂ ಕರ್ಮಣಾಂ ಕ್ಷಯೊ-

ಭಾವೇ ಮೋಕ್ಷಾಭಾವಃ ಸ್ಯಾತ್ । ನ ಚ ದೇಶಕಾಲನಿಮಿತ್ತಾಪೇಕ್ಷೋ ಮೋಕ್ಷಃ ಕರ್ಮಫಲವತ್ ಭವಿತುಮರ್ಹತಿ । ಅನಿತ್ಯತ್ವಪ್ರಸಙ್ಗಾತ್ । ಪರೋಕ್ಷತ್ವಾನುಪಪತ್ತೇಶ್ಚ ಜ್ಞಾನಫಲಸ್ಯ । ತಸ್ಮಾದ್ ಬ್ರಹ್ಮಾಧಿಗಮೇ ದುರಿತಕ್ಷಯಃ ಇತಿ ಸ್ಥಿತಮ್ ॥ (ಸೂ. ಭಾ : ೪-೧-೧೩)

ಆತ್ಮಜ್ಞಾನವಾಗುವದಕ್ಕೆ ಮುಂಚೆ ಜಿಜ್ಞಾಸುವಾದ ಮುಮುಕ್ಷುವು ಕರ್ತೃತ್ವ-ಭೋಕ್ತೃತ್ವಭ್ರಮೆಯಿಂದ ಕರ್ಮಗಳನ್ನು ಮಾಡಿದ್ದು ನಿಜವಿದ್ದರೂ ಸಹ, ಜ್ಞಾನವಾದ ಮೇಲೆ ಆ ವಿದ್ಯೆಯ ಸಾಮರ್ಥ್ಯದಿಂದ, ಅವನ ಹಿಂದಿನ ಭ್ರಾಂತಿಗೆ ವಿರುದ್ಧವಾಗಿ, ಆ ಬ್ರಹ್ಮನಿಷ್ಠನ ಅನುಭವವು ಹೇಗಿರುವದೆಂದರೆ :

“ಮೂರು ಕಾಲಗಳಲ್ಲಿಯೂ ಕರ್ತೃತ್ವವಿಲ್ಲದ, ಭೋಕ್ತೃತ್ವವಿಲ್ಲದ ಸ್ವರೂಪದ ಬ್ರಹ್ಮವೇ ನಾನಾಗಿರುವೆನು ; ಈ ಜ್ಞಾನವಾಗುವದಕ್ಕೆ ಹಿಂದೆಯೂ ನಾನು ಎಂದೆಂದೂ ಕರ್ತೃವೇ ಆಗಲಿ, ಭೋಕ್ತೃವೇ ಆಗಲಿ-ಆಗಿರಲಿಲ್ಲ ; ಈಗಲೂ ನಾನು (ಪ್ರಮಾತೃವೇ ಅಲ್ಲ) ಕರ್ತೃ-ಭೋಕ್ತೃವಲ್ಲ ; ಮುಂದೆಯೂ ನಾನು ಕರ್ತೃ-ಭೋಕ್ತೃವೆಂಬ ಭ್ರಮೆಗೆ ಸರ್ವಥಾ ಬಲಿಯಾಗತಕ್ಕವನಲ್ಲ. ಇದೇ ನನ್ನ ಅಚಲವಾದ ಅನುಭವ. ಈ ಸತ್ಯವನ್ನು ತಿಳಿಯದಿದ್ದಾಗಲೂ ಸಹ ಎಲ್ಲರೂ ಸ್ವರೂಪದಿಂದ, ಕರ್ತೃ-ಭೋಕ್ತೃವಲ್ಲದ ಬ್ರಹ್ಮವೇ ಆಗಿದ್ದೇವೆ ; ಹುಟ್ಟುಸಾವುಗಳಿಗೆ ಕಾರಣವಾದ ಕರ್ತೃತ್ವ-ಭೋಕ್ತೃತ್ವಭ್ರಮೆಯಿಂದ ಮುಕ್ತವಾದ ಈ ಸ್ವರೂಪಸ್ಥಿತಿಯು ಅಮೃತತ್ವವು ಎಲ್ಲರಿಗೂ ಸ್ವಾಭಾವಿಕವಾದುದು, ಸ್ವಭಾವಸಿದ್ಧವಾದುದು, ನಿತ್ಯಸಿದ್ಧವಾದುದು. ಈ ಸತ್ಯವನ್ನು ತಿಳಿಯುವದು ಅಥವಾ ತಿಳಿಯದಿರುವದು-ಎಂಬ ಜ್ಞಾನಾಜ್ಞಾನಗಳಲ್ಲಿ ವ್ಯತ್ಯಾಸವೇ ಹೊರತು ವಸ್ತು (ಆತ್ಮ) ಸ್ವರೂಪದಲ್ಲಿ ಯಾವ ಬದಲಾವಣೆಯೂ ಇಲ್ಲ. ಏನೊಂದು ಸಾಧನೆಯನ್ನು ಮಾಡಿ, ಅಮೃತತ್ವವನ್ನು (ಮುಕ್ತಿಯನ್ನು) ಹೊಸದಾಗಿ ಪಡೆಯುವದಾಗಿದ್ದರೆ, ಎಲ್ಲಾ ಸಾಧನಸಾಧ್ಯಗಳಂತೆ ಇದೂ ಅನಿತ್ಯವಾಗುತ್ತಿತ್ತು. ಆದರೆ, ದೇವರ ದಯದಿಂದ ಇದು ಹೀಗಿಲ್ಲ. ಅಮೃತತ್ವವು ನಮಗೆ ಸ್ವಾಭಾವಿಕವಾಗಿರುವದರಿಂದಲೇ ಇದು ಯಾವ ಕಾರಣಕ್ಕೂ ಕಾರ್ಯವಾಗಿಲ್ಲ. ಗಾಢನಿದ್ರೆಯಲ್ಲಿ ನಿಷ್ಕ್ರಿಯವಾದ ನಮ್ಮ ಸ್ವರೂಪಮಾತ್ರವಿದೆ ; ಕರ್ತೃತ್ವ-ಭೋಕ್ತೃತ್ವವು ನಮ್ಮ ಸ್ವಭಾವವೇ ಆಗಿದ್ದರೆ, ಇದು ನಮ್ಮ ಗಾಢನಿದ್ರೆಯಲ್ಲಿಯೂ ನಮ್ಮ ಅನುಭವದಲ್ಲಿ ಬರಬೇಕಾಗಿತ್ತು ; ಆದರೆ, ಹೀಗಿಲ್ಲ. ಎಚ್ಚರಕನಸುಗಳಲ್ಲಿ ತೋರಿಕೊಳ್ಳುವ ಉಪಾಧಿಗಳ ಅಭಿಮಾನದಿಂದ ಮಾತ್ರ ಈ ಕರ್ತೃ-ಭೋಕ್ತೃತ್ವ-ಭ್ರಾಂತಿ ಉಂಟಾಗಿದೆ. ಹೀಗಲ್ಲದೆ, ಈ ದೋಷಗಳು ನಮ್ಮ ಸ್ವಭಾವಕ್ಕೇ ಸೇರಿದವಾಗಿದ್ದರೆ ಅನಾದಿಕಾಲದಿಂದ ಅವಿರತವಾಗಿ ಸಾಗುತ್ತಬಂದಿರುವ ಪುಣ್ಯಪಾಪಕರ್ಮಗಳು ಕ್ಷಯವಾಗದೆ (ಜನ್ಮಕರ್ಮಗಳಿಂದ ಬಿಡುಗಡೆಪಡೆದ) ಮೋಕ್ಷವೇ

ಇಲ್ಲವೆಂದಾಗುತ್ತಿತ್ತು. ಆದರೆ, ಅಚಲವೂ ನಿಷ್ಕ್ರಿಯವೂ ಆದ ನಿರ್ವಿಕಾರವೇ ಆತ್ಮನ ಸ್ವಭಾವವಾದುದರಿಂದ ಮೋಕ್ಷಕ್ಕೆ ಕರ್ಮಕ್ಷಯದ ಹಂಗಿಲ್ಲ ; ಮೋಕ್ಷವು ಕರ್ಮಕ್ಷಯವನ್ನು ಅವಲಂಬಿಸಿಲ್ಲ.

ವಿವೇಕದಿಂದ ನಮ್ಮ ಅನುಭವಕ್ಕೆ ಬರುವ ಅಮೃತತ್ವವು (ಅಥವಾ ಅಮೃತತ್ವಜ್ಞಾನವು) ನಮ್ಮ ಸ್ವರೂಪವೇ ಆದುದರಿಂದ ಇದು ಪರೋಕ್ಷವಲ್ಲ. ಆದ್ದರಿಂದ ಬ್ರಹ್ಮಜ್ಞಾನದಿಂದ ಅವಿದ್ಯೆಯೂ ಮತ್ತು ಇವರ ಕಾರ್ಯವಾದ ಕಾಮ-ಕರ್ಮಫಲಭೋಗಾದಿಗಳೂ ನಾಶವಾಗುತ್ತವೆ (ಬಾಧಿತವಾಗುತ್ತವೆ) ಎಂಬಿದು ಆತ್ಮಜ್ಞಾನಿಯ ನಿಶ್ಚಿತಾನುಭವವಾಗಿದೆ.

ನಮ್ಮ ಎಚ್ಚರದಲ್ಲಿ ತೋರುವ ಸೂರ್ಯ, ಚಂದ್ರ, ನಕ್ಷತ್ರ, ಅಗ್ನಿ, (ದೀಪ) ಮಿಂಚು (ವಿದ್ಯುತ್) ಮೊದಲಾದ ಯಾವ ಭೌತಿಕಪ್ರಕಾಶವೂ ಪ್ರವೇಶಿಸದಿರುವ ನಮ್ಮ ಕನಸಿನಲ್ಲಿ ಬೆಳಕಿಗೆ ಯಾವ ಕೊರತೆಯೂ ಇಲ್ಲದಂತೆ, ರೂ ಪ ಗ ಳ ನ್ನು (ಎಚ್ಚರದಂತೆಯೇ) ಕಾಣುತ್ತಾ ನಾವು ವ್ಯವಹಾರಮಾಡುತ್ತಿರುವದರಿಂದ, ಆತ್ಮಚೈತನ್ಯವು ಸ್ವಯಂಪ್ರಕಾಶಸ್ವರೂಪವಾಗಿದೆ-ಎಂದು ಸ್ಪಷ್ಟವಾಗಿ ಸಿದ್ಧವಾಗುತ್ತದೆ. ನೈಜಸ್ಥಿತಿಯ ಈ ಕಲ್ಪನೆಯನ್ನು ಶಂಕರರು ತಮ್ಮ ಮಾಂಡೂಕ್ಯೋಪನಿಷತ್ತಿನ ಭಾಷ್ಯದ ಅವತರಣಿಕಾ ಶ್ಲೋಕದಲ್ಲಿ ಸ್ವಾರಸ್ಯವಾಗಿ ನಿರೂಪಿಸಿರುತ್ತಾರೆ. ಈ ಪುಣ್ಯಶ್ಲೋಕವನ್ನು ಈ ಲೇ ಖ ನ ದ ಪ್ರಾರಂಭದಲ್ಲಿಯೇ ನಾಂದಿಯಾಗಿ ಸ್ಮರಿಸಿದೆ. ಇ ದ ರ ಅರ್ಥವನ್ನು ಸ್ವತಂತ್ರವಾಗಿ ಹೀಗೆ ವಿವರಿಸಬಹುದು : ಸ್ವಯಂಪ್ರಕಾಶಸ್ವರೂಪನಾದ ಚೈತನ್ಯಭಾಸ್ಕರನು- ಸಚ್ಚಿದಾನಂದಭಾಸ್ಕರನು- ನಮ್ಮೆಲ್ಲರ ನಿಜಾತ್ಮನೇ ಆಗಿದ್ದಾನೆ. ಸೃಷ್ಟಿಸ್ಥಿತಿಲಯಗಳಿಗೂ ಕಾರಣನಾದ ಈ ಚೈತನ್ಯಭಾಸ್ಕರನು ಅರಿವೆಂಬ ತನ್ನ ಕಿರಣಗಳಿಂದ ಸಮಸ್ತ ಲೋಕಗಳನ್ನೂ ಅವುಗಳಲ್ಲಿರುವ ಸಕಲಪ್ರಾಣಿಗಳನ್ನೂ ಪದಾರ್ಥಗಳನ್ನೂ ವ್ಯಾಪಿಸಿದ್ದಾನೆ. ಇವನು ಎಚ್ಚರದಲ್ಲಿ ಸ್ಥೂಲದೇಹೇಂದ್ರಿಯಾದಿಗಳಿಂದ ಸ್ಥೂಲವಿಷಯಗಳನ್ನೂ ಕನಸಿನಲ್ಲಿ ಸೂಕ್ಷ್ಮದೇಹೇಂದ್ರಿಯಾದಿಗಳಿಂದ ಸೂಕ್ಷ್ಮವಿಷಯಗಳನ್ನೂ ಜೀವರಲ್ಲಿ ತನ್ನ ಮನೋವೃತ್ತಿರೂಪವಾದ ಕಿರಣಗಳಿಂದ ಭೋಗಿಸುವಂತೆ ತೋರಿಕೊಳ್ಳುತ್ತಾನೆ. ಎಚ್ಚರಕನಸುಗಳ ಕರ್ತೃತ್ವ-ಭೋಕ್ತೃತ್ವದ ಯಾವ ವಿಕಾರವೂ ಇಲ್ಲದೆ ಗಾಢನಿದ್ರೆಯಲ್ಲಿ ನಮ್ಮ ಆತ್ಮನಾದ ಸಚ್ಚಿದಾನಂದಭಾಸ್ಕರನೇ ಶಾಂತವಾದ ಚೈತನ್ಯಕಿರಣಗಳಿಂದ ಆನಂದಾನುಭವಮಾಡುವಂತೆಯೂ ತೋರಿಕೊಳ್ಳುತ್ತಾನೆ. ಆದರೆ, ಹೀಗೆ ತೋರುವದೆಲ್ಲಾ ಮಾಯೆಯೆಂದೂ ಇದಕ್ಕೆ ಎಲ್ಲರಲ್ಲಿಯೂ ಸ್ವಾಭಾವಿಕವಾಗಿರುವ ಅವಿದ್ಯೆಯೇ ಕಾರಣವೆಂದೂ ಶಾಸ್ತ್ರಾಚಾರ್ಯರ ಉಪದೇಶಾನುಗ್ರಹದಿಂದ ಪ್ರಾಪ್ತವಾಗುವ ಬ್ರಹ್ಮವಿದ್ಯೆಯಿಂದ ತಿಳಿದಾಗ ಅವಿದ್ಯೆಯು ಬಾಧಿತ

ನಾಗಿ ಚೈತನ್ಯಭಾಸ್ಕರನಾದ ಆತ್ಮನೇ ಅಮೃತಸ್ವರೂಪನೂ ನಿತ್ಯಮುಕ್ತನೂ ಆದ ಬ್ರಹ್ಮವೆಂಬ ಅನುಭವವಾಗುತ್ತದೆ.

ಮರುಮರೀಚಿಕೆಯಂತೆ ಹುಸಿತೋರಿಕೆಗಳಾದ ಅವಸ್ಥಾತ್ರಯಗಳಿಗೆ ಸಾಕ್ಷಿಯಾದ ತುರೀಯಾತ್ಮನೇ ಕರ್ಮೋಪಾಸನೆಯ ಶುಭಫಲವಾದ ಅಭ್ಯುದಯಕ್ಕೂ ಜ್ಞಾನಸಾಧನೆಯ ಅತ್ಯಂತ ಶುಭಫಲವಾದ ಆತ್ಯಂತಿಕ ನಿಶ್ಶ್ರೇಯಸ್ಸಿಗೂ (ಪರಮ ಪುರುಷಾರ್ಥಕ್ಕೂ) ಕಾರಣನಾದುದರಿಂದಲೂ ಗುರುವಾದುದರಿಂದಲೂ ಈ ಸಚ್ಚಿದಾನಂದಭಾಸ್ಕರನೇ ನಿಜವಾದ ಶಂಕರನು (ಪರಮಮಂಗಳಕರನು).

ಯೋ ವೈ ಭೂಮಾ ತತ್ ಸುಖಂ ನಾಲ್ಪೇ ಸುಖಮಸ್ತಿ ಭೂಮೈವ ಸುಖಂ..........ಯೋ ವೈ ಭೂಮಾ ತದಮೃತಮ್, ಅಥ ಯದಲ್ಪಂ ತನ್ಮರ್ತ್ಯಂ........ (ಛಾಂ. ಉ: ೭-೨೪-೧)

ನಾನು ಮತ್ತು ಈ ಪ್ರಪಂಚ ಎನ್ನುವ ದ್ವೈತವಿಲ್ಲದ, ಅದ್ವಿತೀಯವೂ ಅಖಂಡೈಕವೂ ಆದ ಬ್ರಾಹ್ಮೀಸ್ಥಿತಿಯೇ ನಿಜಸುಖದ ಭೂಮಾನಂದಸ್ಥಿತಿ; ದ್ವೈತರೂಪ ಜಗಜ್ಜೀವರ ಕ್ರಿಯಾಕಾರಕಫಲರೂಪ ತ್ರಿಪುಟಿಯ ಭ್ರಾಂತಿಯೇ ಅತ್ಯಂತ ಕ್ಷುದ್ರವೂ ಮೃತ್ಯುರೂಪವೂ ಆದುದು. ಆದ್ದರಿಂದ ಅತ್ಯಂತ ಮಹತ್ತಾದ ಭೂಮಾನಂದವೇ ಪರಮಾಮೃತವು!

ಭೂಮಾನಂದಸ್ವರೂಪನೂ ಅದ್ವಿತೀಯನೂ ಸ್ವಭಾವಸಿದ್ಧ ಅಮೃತಸ್ವರೂಪನೂ ಸರ್ವಾತ್ಮನೂ ಆದ ನಮ್ಮ ಪರಮಪ್ರೇಮದ "ಶಂಕರಭಾಸ್ಕರ"ನಿಗೆ ಅನಂತನಮಸ್ಕಾರಗಳು!

ಅಧ್ಯಾತ್ಮಪ್ರಕಾಶ ಮುದ್ರಣಾಲಯ, ಹೊಳೆನರಸೀಪುರ.

ಈ ಲೇಖಕರ ಇತರ ಕೃತಿಗಳು :

1. ಶ್ರೀ ಬನವಾಸಿಯ ದತ್ತಾತ್ರೇಯ ಯೋಗೀಂದ್ರ ಸರಸ್ವತೀ ಪರಮಹಂಸ
ಸದ್ಗುರು ಚರಿತಾಮೃತ (1939)
ಗದ್ಯ ಮತ್ತು ಪದ್ಯ (ದ್ವಿತೀಯ ಮುದ್ರಣ-1971-ತೃತೀಯ 85)

2. ದೇವರು ಯಾರು ? (ವೇದಾಂತವೂ-ವಿಜ್ಞಾನವೂ)
ಮಲ್ಲಾಡಿಹಳ್ಳಿ-ಅನಾಥಸೇವಾಶ್ರಮ (1950)

3. ಸಮಗ್ರಸಾಧನ (ಧರ್ಮ-ಬ್ರಹ್ಮ ; ಎರಡು ಭಾಗಗಳು-1955-56)

4. ಚಿಚ್ಛಕ್ತಿಪ್ರಭಾವ (ಸಮಗ್ರಜೀವನ) (1963)
ದತ್ತಾತ್ರಮ, ಆರ್. ನುಲೇನೂರು (ಹೊಳಲ್ಕೆರೆ)

5. ಭಗವತೀ ಚೂಡಾಲಾ ಆಖ್ಯಾನ (ಯೋಗವಾಸಿಷ್ಠದ ಸಾರ)
(1965-1979)

6. ಸ್ವಾಮಿ ರಾಮತೀರ್ಥರ ಉಪನ್ಯಾಸಗಳು-ಮೂರು ಭಾಗಗಳು.
ಪರಮಾತ್ಮಾನುಭವದ ಮಹಾರಣ್ಯಗಳಲ್ಲಿ (1966-68-71)
(In Woods of God-Realization)

7. ಸ್ವಾಮಿ ರಾಮತೀರ್ಥರ ಜೀವನಚರಿತ್ರೆ (1967)

8. ಸ್ವಾಮಿ ರಾಮತೀರ್ಥರ "ರಾಮಹೃದಯ"
(Heart of Rama) (1970)

9. ಸ್ವಾಮಿ ರಾಮತೀರ್ಥರ ವೇದಾಂತಬೋಧಕ ಕಥೆಗಳು
ಮತ್ತು ದೃಷ್ಟಾಂತಗಳು (1975)

10. ಹೊಸ ಮನಸ್ಸು (Fresh Mind)-(1966)

11. ಬಿಡುಗಡೆ (ವಿಮೋಚನೆ) (ಕ್ಷಣಮಾತ್ರದಲ್ಲಿಯೇ ಅಂತಃಕರಣದ ಸಮೂಲ ಪರಿವರ್ತನೆ) (Instantaneous Inner Radical-Revolution) (1970)

12. ಪೂಜ್ಯ ಭಗವಾನ್ ಶ್ರೀರಮಣಮಹರ್ಷಿಗಳ ದಿವ್ಯಸನ್ನಿಧಿಯಲ್ಲಿ
ದಿನದಿನವೂ (1973-77)

(ಪುಟ ತಿರುಗಿಸಿ ನೋಡಿ.)

13. ಚಿದಾಕಾಶಗೀತೆ (ಪೂಜ್ಯ ನಿತ್ಯಾನಂದಸದ್ಗುರುಗಳ ಉಪದೇಶ)

14. ಭಗವಾನ್ ನಿತ್ಯಾನಂದ ಉವಾಚ (ಗಣೇಶಪುರಿ–ಬೊಂಬಾಯಿ) (1982)

15. Thus Spake Bhagavan Nityananda,
(Ganeshpuri, Bombay) (1982)

16. Sri Aurobindo's Philosophy
in the Light of Sri Shankara's
in their own words (1977)

17. The Unique Virtuous and Spiritual Features
in the Life and Teachings of
Swamy Rama Tirtha (1988)

18. ಶಾಂಕರಸಮ್ಯಗ್ದರ್ಶನ (ಮೈತ್ರೇಯೀ–ಯಾಜ್ಞವಲ್ಕ್ಯ ಸಂವಾದ–1980)

19. ಶ್ರೀಶಂಕರಭಾಷ್ಯದ (ಸಾರ) ವಿಚಾರ
(ಶ್ರೀ ವಿಶ್ವಾವಸು ಸಂವತ್ಸರದ ವೈಶಾಖ ಶುದ್ಧ ಪಂಚಮಿ ಗುರುವಾರ
ತಾ|| 6–5–1965) ಶ್ರೀಶಂಕರಜಯಂತೀ ಪ್ರಯುಕ್ತ ಬೆಳಿಗ್ಗೆ 7–15
ರಿಂದ ಅರ್ಧ ಗಂಟೆ ಕಾಲ, ಬೆಂಗಳೂರು–ಭದ್ರಾವತಿ (A. I. R.)
ಆಕಾಶವಾಣಿಯಿಂದ ಪ್ರಸಾರವಾದ ಶ್ರೀ ಮೂರ್ತಿ, ದತ್ತಾಶ್ರಮ,
ಆರ್. ನುಲೇನೂರು–ಇವರ ಭಾಷಣ.

20. ದೈವ ಮತ್ತು ಪೌರುಷ (Fate and Free Will) 1960.